



# ಜಾಗತೀಕರಣ

ಮತ್ತು

# ಜಾನಪದ

ಸಂಪಾದಕರು :
ಗವೀಶ ಹಿರೇಮಠ



# ಜಾಗತೀಕರಣ ಮತ್ತು ಜಾನಪದ

(ವಿಚಾರ ಸಂಕಿರಣ ಪ್ರಬಂಧಗಳು)

●

ಪ್ರಧಾನ ಸಂಪಾದಕರು

**ಕೆರೆಮನೆ ಶಂಭುಹೆಗಡೆ**

●

ಸಂಪಾದಕರು

**ಗವೀಶ ಹಿರೇಮಠ**

ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ,

ಬೆಂಗಳೂರು-೦೨

Janapada Mattu Jagateekarana

A collection of seminar articles

Chief Editor : Keremane Shambhu Hegde

Edited by : Sri Gavish Hiremath

Published by : B. N. Paraddi, Registrar,
Karnataka Janapada and
Yakshagana Academy,
Kannada Bhavan, J. C. Road,
Bangalore -02

Pages : 10 + 82 = 92

Price : Rs. 50-00

© : ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ,
ಬೆಂಗಳೂರು

ಪ್ರಧಾನ ಸಂಪಾದಕರು : ಶ್ರೀ ಕೆರೆಮನೆ ಶಂಭುಹೆಗಡೆ

ಸಂಪಾದಕರು : ಶ್ರೀ ಗವೀಶ ಹಿರೇಮಠ

ಮೊದಲ ಮುದ್ರಣ : ಡಿಸೆಂಬರ್ ೨೦೦೬

ಪುಟಗಳು : ೧೦ + ೮೨ = ೯೨

ಪ್ರತಿಗಳು : ೧೦೦೦

ಬೆಲೆ : ರೂ. ೫೦-೦೦

ಪ್ರಕಾಶಕರು : ಬಿ. ಎನ್. ಪರಡ್ಡಿ
ರಿಜಿಸ್ಟ್ರಾರ್
ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ,
ಕನ್ನಡ ಭವನ, ಜೆ. ಸಿ. ರಸ್ತೆ, ಬೆಂಗಳೂರು - ೫೬೦೦೦೨

ಮುದ್ರಣ :

ಪ್ರಭು ಗ್ರಾಫಿಕ್ಸ್,
ತೋಂಟದಾರ್ಯ ಮಠದ ಎದುರು, ಸ್ಟೇಶನ್ ರೋಡ, ಗದಗ.
ಫೋ : [08372] 238181 ಮನೆ : 238182 ಮೊ : 9448186063, 9880904707

## ಅಕಾಡೆಮಿ ಅಧ್ಯಕ್ಷರ ನುಡಿ .....

ರಾಷ್ಟ್ರದ ಸಾಂಸ್ಕೃತಿಕ ಇತಿಹಾಸದಲ್ಲಿ ಜನಪದ ಕಲೆ, ಸಾಹಿತ್ಯ, ಸಂಸ್ಕೃತಿ, ಅಧ್ಯಯನ, ಪ್ರಸಾರ, ಪ್ರಕಟಣೆ, ಕಲಾವಿದರ ಪುರಸ್ಕಾರ, ಪ್ರಶಸ್ತಿಗಾಗಿಯೇ ಒಂದು ಅಕಾಡೆಮಿ ಸ್ಥಾಪನೆಯಗಿರುವುದು ಕರ್ನಾಟಕದಲ್ಲಿ ಮಾತ್ರ. ಇದೊಂದು ಹೆಮ್ಮೆಯ ಸಂಗತಿ, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯನ್ನು ಕರ್ನಾಟಕ ಸರ್ಕಾರ ಸ್ಥಾಪಿಸಿರುವುದು, ನೆಲಮೂಲ ಸಂಸ್ಕೃತಿಗೆ ನೀಡಿದ ಬಹು ದೊಡ್ಡ ಗೌರವ ಎಂದೇ ಭಾವಿಸಿದ್ದೇವೆ. ಈ ಅಕಾಡೆಮಿ ಸ್ಥಾಪೆಯಾಗುವುದರ ಹಿಂದೆ ಹಲವರ ಶ್ರಮವಿದೆ. ಒತ್ತಾಸೆಯೂ ಇದೆ.

ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಇಪ್ಪತ್ತೈದು ವರ್ಷಗಳನ್ನು ಪೂರೈಸುತ್ತಿದೆ. ಒಂದು ಸಾಂಸ್ಕೃತಿಕ ಸಂಸ್ಥೆಗೆ ಈ ಅವಧಿ ಕಡಿಮೆಯೇನಲ್ಲ. ಈ ಅವಧಿ ಕರ್ನಾಟಕ ಜಾನಪದೀಯವಾಗಿ ಹಲವು ಮೈಲುಗಲ್ಲುಗಳನ್ನು ನೆಟ್ಟಿದೆ. ಸಾಂಸ್ಕೃತಿಕ ದಾಖಲೆಯ ಭವ್ಯತೆಯನ್ನು ಮೆರೆದಿದೆ. ಜಾನಪದ ಸಂಪನ್ನ ಹೆಚ್. ಎಲ್. ನಾಗೇಗೌಡರಿಂದ ಆರಂಭಗೊಂಡು, ಈ ತನಕ ಬಂದ ಎಲ್ಲ ಅಧ್ಯಕ್ಷರು ಅವರವರ ಕೈಗೆಟಕುವ, ಸಾರ್ಥಕ ಕೆಲಸ ಮಾಡಿಹೋಗಿದ್ದಾರೆ. ಈ ಎಲ್ಲ ಮಹನೀಯರ ಸಾಧನೆ ದೊಡ್ಡದೆಂದೇ ನಾನು ಭಾವಿಸಿದ್ದೇನೆ. ಹಾದಿ ಬೀದಿಯಲ್ಲಿ ಭಿಕ್ಷಾಟನೆ ಮಾಡುವ ಕಲಾವಿದರನ್ನು ಗುರುತಿಸಿ, ಅವರವರ ಕಲಾ ಸಾಧನೆಗೆ ತಕ್ಕ ಹಾಗೆ ಗೌರವಿಸಿದೆ. ನಿರ್ಲಕ್ಷ್ಯಕ್ಕೆ ಒಳಗಾದ ಹಲವು ಕಲಾವಿದರನ್ನ ಸಾಂಸ್ಕೃತಿಕ ಗಣ್ಯರ ಸಮಕ್ಷಮದಲ್ಲಿ ಕೂಡಿಸಿ, ಹಾರ ಹಾಕಿ, ಹಣ್ಣು-ಹಣ ನೀಡಿ ಗೌರವಿಸುತ್ತಿದ್ದಾಗ, ಆ ಕಲಾವಿದ ಪಿಳಪಿಳನೆ ಕಣ್ಣು ಬಿಟ್ಟದ್ದನ್ನು, ಭಾವೋದ್ರೇಕದಿಂದ ಗಳಗಳನೆ ಅತ್ತದ್ದನ್ನು ನಾನು ಕಂಡಿದ್ದೇನೆ. ಆತನ ಕಲೆಯ ಮಹತ್ವ ಆತನಿಗೆ ಅರಿವಿಲ್ಲದಿದ್ದರೂ, ನಾಡಿನ ಸಾಂಸ್ಕೃತಿಕ ಪರಂಪರೆಯಲ್ಲಿ ಆತನ ಸ್ಥಾನ ಮಾನವೇನು ? ಎಂಬ ಅರಿವು ಅಕಾಡೆಮಿಗೆ, ಸಂಸ್ಕೃತಿ ಚಿಂತಕರಿಗೆ ಇರುತ್ತದೆ. ಹಾಗಾಗಿ ಇಲ್ಲಿ ಹಾಡುಹಾಡುತ್ತಲೇ ಮರೆಯಾಗಿ ಬಿಡುತ್ತಿದ್ದ, ಕುಣಿದು ಇಲ್ಲವಾಗುತ್ತಿದ್ದ ಕಲಾವಿದರಿಗೂ ಅಕಾಡೆಮಿಯಿಂದಾಗಿ ಸಾಂಸ್ಕೃತಿಕ ಘನತೆಯನ್ನು; ಗಾಂಭೀರ್ಯವನ್ನು ತಂದು ಕೊಡುವುದಕ್ಕೆ ಸಾಧ್ಯವಾಗುತ್ತಿದೆ. ಈ ಬಗೆಯ ಹಲವು ಯೋಜನೆಗಳನ್ನು ಅಕಾಡೆಮಿ ರೂಪಿಸಿದೆ. ಇದರ ಅರಿವು ತಮಗೂ ಇದೆ ಅಂದುಕೊಂಡಿದ್ದೇನೆ.

ಯೋಗಾಯೋಗ ಅನ್ನುವಂತೆ ಅಕಾಡೆಮಿಗೆ ಇದೀಗ ಬೆಳ್ಳಿ ಹಬ್ಬದ ವೈಭೋಗ. ಕರ್ನಾಟಕ ರಾಜ್ಯ ಸುವರ್ಣ ಮಹೋತ್ಸವ ಸಂದರ್ಭವೂ ಇದೇ ಆಗಿದೆ. ಇದನ್ನು ಸಾರ್ಥಕವಾಗಿ, ಸ್ಮರಣೀಯವಾಗಿ ಆಚರಿಸಬೇಕೆಂಬುದು ಅಕಾಡೆಮಿ ಬಳಗದ ಆಲೋಚನೆ. ಆ ಹಿನ್ನೆಲೆಯಲ್ಲಿ ರಚನಾತ್ಮಕ ಕಾರ್ಯಕ್ರಮಗಳ ಅನುಷ್ಠಾನಕ್ಕೆ ಕಾರ್ಯೋನ್ಮುಖ ವಾಗುತ್ತಿರುವದನ್ನು ಇಲ್ಲಿ ದಾಖಲಿಸಲು ಹರ್ಷಿಸುತ್ತೇವೆ. ಈ ಕೆಲಸಕ್ಕೆ ನಾಡಿನ ಸಾಂಸ್ಕೃತಿಕ ಲೋಕದ ಗಣ್ಯರ, ಕಲಾವಿದರ, ವಿದ್ವಾಂಸರ ಸಾಂಸ್ಕೃತಿಕ ನೆರವನ್ನು ಅಕಾಡೆಮಿ ಬಳಗ ಎರಡೂಕೈಯೊಡ್ಡಿ ಬಯಸುತ್ತದೆ. ಕನ್ನಡ ನಾಡಿನ ಸುವರ್ಣ ಸಂಭ್ರಮ; ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಬೆಳ್ಳಿ ವರ್ಷದ ಬೆಳ್ಳಿ ಬೆಡಗಿನ ಆಚರಣಾ ಸಂಭ್ರಮ; ತಮ್ಮಗಳ ಕೂಡುವಿಕೆಯಿಂದಾಗಿ ವಿಜೃಂಭಿಸಬೇಕೆಂಬುದು ನಮ್ಮ ಹಂಬಲ. ಕರ್ನಾಟಕ ಸರ್ಕಾರದ ಮಾನ್ಯ ಕಾರ್ಯದರ್ಶಿಗಳಾದ ಶ್ರೀ ಐ. ಎಂ. ವಿಠ್ಠಲಮೂರ್ತಿ ಅವರು ಇದೇ ಮಾತನ್ನು ಸಾಂಸ್ಕೃತಿಕ ಸಭೆ, ಸಮಾವೇಶಗಳಲ್ಲಿ ಹೇಳುತ್ತಿದ್ದಾರೆ. ಕಾರ್ಯಕ್ರಮ ಕಲಾವಿದರ ನಿಜವಾದ ಸಂಭ್ರಮವಾಗಿರಬೇಕು. ಅದು ಪಾರದರ್ಶಕವಾಗಿರಬೇಕು. ಆತನ ಕಲೆಗೂ ಬೆಲೆ ಇರಬೇಕು. ಕಲಾವಿದನೂ ಬದುಕಬೇಕು. ಇದೇ ಬಯಕೆ ನಮ್ಮದೂ ಆಗಿದೆ. ಇದರಲ್ಲಿ ತಮ್ಮ ಸಹಕಾರವೂ ಇರಬೇಕೆಂದು ನಾಡಿನ ಸಾಂಸ್ಕೃತಿಕ ಲೋಕದ ಗಣ್ಯರಾದ ತಮ್ಮಲ್ಲಿ ಕೋರಿಕೆ ಇಡುತ್ತಿದ್ದೇನೆ.

ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಕಾರ್ಯಚಟುವಟಿಕೆಗಳಲ್ಲಿ ವಿಚಾರ ಸಂಕಿರಣಗಳನ್ನು ಹಮ್ಮಿಕೊಂಡು, ಈ ಕ್ಷೇತ್ರದ ಮಹತ್ವದ ಸಂಗತಿಗಳ ಬಗ್ಗೆ, ಜಾನಪದದಲ್ಲಿ ಕೆಲಸ ಮಾಡಿದ ಹಿರಿಯರ ಸೇವೆ –ಸಾಧನೆಗಳ ಬಗ್ಗೆ ಚಿಂತನೆ ಹೆಚ್ಚಿಸುವುದು ಮತ್ತು ವಿಚಾರ ಸಂಕಿರಣಗಳಲ್ಲಿ ಮಂಡಿತವಾದ ಪ್ರಬಂಧಗಳನ್ನು ಚರ್ಚಿತವಾದ ಸಂಗತಿಗಳನ್ನು ಸಂಪಾದಿಸಿ ಪುಸ್ತಕ ರೂಪದಲ್ಲಿ ದಾಖಲಿಸುವುದು ಅಕಾಡೆಮಿಯ ಉದ್ದೇಶಗಳಲ್ಲಿ ಒಂದು. ಹಾಗೆ ದಿನಾಂಕ ೨೧–೧೨–೨೦೦೬ ರಂದು ಜಾನಪದ ಮತ್ತು ಜಾಗತೀಕರಣ ಬಗ್ಗೆ ಒಂದು ವಿಚಾರ ಸಂಕಿರಣವನ್ನು ಗುಲಬರ್ಗಾ ವಿ.ವಿ. ಕನ್ನಡ ಅಧ್ಯಯನ ಸಂಸ್ಥೆಯ ಹರಿಹರ ಸಭಾಂಗಣದಲ್ಲಿ ನೆರವೇರಿಸಲಾಗಿತ್ತು. ಅಂದು ಮಂಡಿತವಾದ ಪ್ರಬಂಧಗಳನ್ನು ಮತ್ತು ವ್ಯಕ್ತವಾದ ಅಭಿಪ್ರಾಯಗಳನ್ನು ನಮ್ಮ ಅಕಾಡಿಮಿಯ ಸದಸ್ಯರಾದ ಶ್ರೀ ಗವೀಶ ಹಿರೇಮಠ ಅವರು ಸಂಪಾದಿಸಿ ಕೊಟ್ಟಿದ್ದಾರೆ. ಅದಕ್ಕಾಗಿ ಅವರನ್ನು ಗೌರವಪೂರ್ವಕವಾಗಿ ಅಭಿನಂದಿಸುತ್ತೇನೆ. ಸಾರಸ್ವತ ಪ್ರಪಂಚ ಇದನ್ನು ಆಸಕ್ತಿಯಿಂದ ಬರಮಾಡಿಕೊಳ್ಳುತ್ತದೆ ಎಂಬ ವಿಶ್ವಾಸ ನನ್ನದು.

**ಕೆರೆಮನೆ ಶಂಭು ಹೆಗಡೆ,**

ಅಧ್ಯಕ್ಷರು,

ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು

## ಸಂಪಾದಕರ ಮಾತು . . . . . .

ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಹಾಗೂ ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆ ಇವುಗಳ ಸಹಯೋಗದಲ್ಲಿ ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ವಿಭಾಗದ "ಹರಿ ಹರ" ಸಭಾಂಗಣದಲ್ಲಿ ದಿನಾಂಕ ೩೧–೧೨–೨೦೦೬ರಂದು "ಜಾನಪದ ಮತ್ತು ಜಾಗತೀಕರಣ", ವಿಚಾರ ಸಂಕಿರಣ ಯಶಸ್ವಿಯಾಗಿ ಜರುಗಿದ್ದು ಸಂತಸದ ಸಂಗತಿ.

ಅಂದಿನ ವಿಚಾರ ಸಂಕಿರಣದ ಪ್ರಬಂಧಗಳನ್ನು ಅತಿಥಿ, ಅಧ್ಯಕ್ಷರ ಭಾಷಣಗಳನ್ನು ಕ್ರೋಡೀಕರಿಸಿ ಪುಸ್ತಕರೂಪದಲ್ಲಿ ತರಲು ಜಾನಪದ ಅಕಾಡೆಮಿ ನಿರ್ಧರಿಸಿ ಕಾರ್ಯಕ್ರಮದ ಸಂಚಾಲಕನಾದ ನನಗೆ ಸಂಪಾದನೆಯ ಜವಾಬ್ದಾರಿ ನೀಡಿದ್ದು ನನಗೊಂದು ಒಳ್ಳೆ ಅವಕಾಶ ಒದಗಿಸಿಕೊಟ್ಟಂತಾಗಿದೆ. ಅದಕ್ಕಾಗಿ ಅಕಾಡೆಮಿ ಸದಸ್ಯರಿಗೆ, ರಿಜಿಸ್ಟ್ರಾರ್ ಹಾಗೂ ಅಧ್ಯಕ್ಷರಿಗೆ ನಾನು ಋಣಿಯಾಗಿದ್ದೇನೆ.

ಜಾಗತೀಕರಣದ ಬಗ್ಗೆ, ಜಾನಪದ ಕಲೆಗಳ ಅಳಿವು–ಉಳಿವಿನ ಬಗ್ಗೆ ಇಂದು ಚಿಂತಿಸುವುದು, ಯೋಚಿಸುವುದು ಅವಶ್ಯವಿದೆ. ಜಾಗತೀಕರಣ ಇಂದು ಒಂದು ಸವಾಲಾಗಿದೆ. ನಮ್ಮ ಕಲೆಗಳು, ನಮ್ಮ ಆಚರಣೆಗಳು, ನಮ್ಮ ಗುಡಿ ಕೈಗಾರಿಕೆಗಳ ಜೊತೆಗೆ ನಮ್ಮ ಸಂಸ್ಕೃತಿ ನಮ್ಮ ಪರಂಪರೆ ಮರೆಯಾಗುತ್ತ ಹಳ್ಳಿಗಳಲ್ಲಿಯೂ ವಿದೇಶಿ ಸಂಸ್ಕೃತಿಯ ಗಾಳಿ ಬೀಸುತ್ತಿರುವುದು ಜಾಗತೀಕರಣದ ಪ್ರಭಾವವೆನ್ನದಿರಲಾಗದು. ನಮ್ಮ ಯುವ ಪೀಳಿಗೆ ಪಾಶ್ಚಿಮತ್ಯ ಸಂಗೀತ, ನೃತ್ಯಗಳಿಗೆ ಆಕರ್ಷಿಸಿ ಮಾರುಹೋಗುತ್ತಿರುವುದು ದೇಶೀಯ ಸಂಸ್ಕೃತಿ ಕಳಚಿಕೊಳ್ಳುತ್ತಿರುವುದು ಜಾಗತೀಕರಣದಿಂದಲೆ ಎನ್ನಬಹುದು. ನಾವು ಆಚರಿಸುತ್ತಿರುವ ಹೊಸ ವರ್ಷ, ನಾವು ಪ್ರದರ್ಶಿಸುತ್ತಿರುವ ಕಲೆ, ಸಂಸ್ಕೃತಿಗಳಲ್ಲಿ ಸಹಜವಾಗಿ ಪಾಶ್ಚಿಮಾತ್ಯ ಸಂಸ್ಕೃತಿ ಪ್ರಭಾವ ಬೀರುತ್ತದೆ. ನಾವಿಂದು ಮುಂಬೈಯಂತ ಪಟ್ಟಣಕ್ಕೆ ಹೋದರೆ ಭಾರತ ದೇಶದಲ್ಲಿದ್ದೇವೆಯೇ ಎನ್ನುವ ಅನುಮಾನ ಮೂಡುತ್ತಿದೆ. ಅಲ್ಲಿಯ ಚಾನಲ್‌ಗಳಲ್ಲಿ ಪ್ರಸಾರವಾಗುವ ಉಡುಗೆ, ತೊಡುಗೆ ಪ್ರದರ್ಶಿಸುವ ಕಲೆಗಳು ಎಲ್ಲವೂ ಪಾಶ್ಚಿಮಾತ್ಯರ ಪ್ರಭಾವ. ಇದೆಲ್ಲಕ್ಕೂ ಜಾಗತೀಕರಣದ ಅವ್ಯಕ್ತ ಪ್ರಭಾವ ಎನ್ನದಿರಲಾಗದು. ಜಾಗತೀಕರಣದ ನೆಪದಲಿ ಬಲಿಷ್ಠ ರಾಷ್ಟ್ರಗಳು ನಮ್ಮ ಮೇಲೆ ಹೇರುತ್ತಿರುವ ತಮ್ಮ ಸಂಸ್ಕೃತಿಯ ಜೊತೆ ನಮ್ಮ ಕಲೆ, ನಮ್ಮ ಸಂಸ್ಕೃತಿ, ನಮ್ಮ ಭಾವನೆ ನಮ್ಮ ಕನಸುಗಳನ್ನು ಕಸಿದುಕೊಳ್ಳುವ ರೀತಿ ಎನಿಸುತ್ತಿದೆ.

ಜಾಗತೀಕರಣ ನಮ್ಮ ದೇಶದ ಪ್ರತಿ ಕ್ಷೇತ್ರಕ್ಕೂ ಸವಾಲಾಗಿ ಪೈಪೋಟಿಯಾಗಿಸುತ್ತಿದೆ. ಇಂತಹ ಮೇರು ಶಕ್ತಿಗಳ ಜೊತೆ ನಾವು ನಮ್ಮ ಕಲೆಯನ್ನು ಸಶಕ್ತಗೊಳಿಸಿ ಸ್ಪರ್ಧೆಗಿಳಿಯಬೇಕಾಗಿದೆ. ಬಲಿಷ್ಟವಾದ ಕಲೆಗಳು ಮಾತ್ರ ಉಳಿಯುತ್ತಿವೆ. ಉದಾಹರಣೆಗೆ ಭರತನಾಟ್ಯ, ಯಕ್ಷಗಾನ, ಕಂಸಾಳೆಗಳಂತಹ ಕಲೆಗಳು ಮಾತ್ರ ಉಳಿದು, ಉಳಿದ ನೂರಾರು ಕಲಾಪ್ರಕಾರಗಳು ಕೊಚ್ಚಿಹೋಗುವುದರಲ್ಲಿ ಸಂಶಯವಿಲ್ಲ. ಇಂಥ ಸಂದರ್ಭದಲ್ಲಿ ನಮ್ಮ ಕಲೆಗಳನ್ನು, ನಮ್ಮ ಸಂಸ್ಕೃತಿಯನ್ನು ಹೇಗೆ ರಕ್ಷಿಸಿಗೊಳ್ಳಬೇಕು, ಹೇಗೆ ಸಶಕ್ತಗೊಳಿಸಬೇಕು ಎನ್ನುವುದನ್ನು ಚಿಂತಿಸುವುದಕ್ಕಾಗಿಯೇ ಇಂಥ ವಿಚಾರ ಸಂಕಿರಣಗಳು.

ಈ ರೀತಿಯ ವಿಚಾರ ಸಂಕಿರಣಗಳಿಂದ ಸಮಸ್ಯೆಗಳು ದೂರಾದವೆ ? ಪರಿಹಾರ ಸಿಕ್ಕೀತೆ ? ಭಾಷಣಗಳು, ಪ್ರಬಂಧಗಳು ಪ್ರಭಾವ ಬೀರಾವೇ ? ಇಲ್ಲವಾದರೂ ಆ ನಿಟ್ಟಿನಲ್ಲಿ ಚಿಂತಿಸಲು ಆಲೋಚಿಸಲು ಹಚ್ಚುತ್ತದೆಯಲ್ಲ, ಅದೇ ಪ್ರಮುಖ ಕೆಲಸ. ಯಾವುದೇ ಕಲೆ ಉಳಿದು–ಬೆಳೆದು, ಸಶಕ್ತಗೊಳಿಸಲು ಅಕಾಡೆಮಿ, ಕನ್ನಡ ಮತ್ತು ಸಂಸ್ಕೃತಿಇಲಾಖೆ ಏನೂ ಮಾಡಲಾರವು ? ನಮ್ಮ ಕಲೆ, ನಮ್ಮ ಸಂಸ್ಕೃತಿ ಉಳಿದು ಈ ಜಾಗತೀಕರಣದ ಸ್ಪರ್ಧೆಗೆ ಸಡ್ಡು ಹೊಡೆದು ನಿಲ್ಲಬೇಕಾದರೆ ನಮ್ಮ ಜನತೆ ಜಾಗ್ರತೆ ಹೊಂದಬೇಕು. ನಾವು ನಮ್ಮ ಕಲೆ, ನಮ್ಮ ಸಂಸ್ಕೃತಿ ಬಿಟ್ಟು ಕೊಡಬಾರದೆನ್ನುವ ಛಲ, ಅಭಿಮಾನ ಮೂಡಿದಾಗ ಮಾತ್ರ ಸಾಧ್ಯ. ನಮ್ಮ ಯುವ ಪೀಳಿಗೆಗೆ ನಮ್ಮತನದ ಅರಿವು ಮೂಡಿಸಿ ನಮ್ಮ ಸಂಸ್ಕೃತಿಯ ಮಹತ್ವ ತಿಳಿಸಿ ಸ್ವಾಭಿಮಾನ ಮೂಡಿಸಬೇಕು, ದೇಶದ ನಾಡಿನ ಸಮಸ್ತ ಪ್ರಜೆಗಳಲ್ಲಿ ಕಲೆ ಉಳಿಸಿಕೊಳ್ಳ ಬೇಕೆನ್ನುವ ಛಲ ಮೂಡಿದರೆ ಆಗ ಮಾರುಕಟ್ಟೆಯಲ್ಲಿ ನಾವು ನಮ್ಮ ಕಲೆ ಗಟ್ಟಿಯಾಗಿ ನಿಲ್ಲಲು ಸಾಧ್ಯ ಎನ್ನುವ ತಿಳುವಳಿಕೆ ನನ್ನದು. ಅಂಥ ಭಾವನೆಗಳನ್ನು ಮೂಡಿಸುವಲ್ಲಿ, ಜನಜಾಗ್ರತಿ ಹೊಂದುವಲ್ಲಿ ಅಕಾಡೆಮಿಗಳಿಂದ ಸಂಘ ಸಂಸ್ಥೆಗಳಿಂದ ಇಂಥ ವಿಚಾರ ಸಂಕಿರಣಗಳು ಬೇಕೆನಿಸುತ್ತವೆ.

ಈ ವಿಚಾರ ಸಂಕಿರಣದಲ್ಲಿ ನಾಲ್ಕು ಜನ ವಿದ್ವಾಂಸರು ಪ್ರಬಂಧ ಮಂಡಿಸಿದ್ದಾರೆ. ಗಣ್ಯರು, ಪ್ರಾಧ್ಯಾಪಕರು, ಅತಿಥಿಗಳಾಗಿ ಅಧ್ಯಕ್ಷರಾಗಿ ಉಪನ್ಯಾಸ ನೀಡಿದ್ದಾರೆ. ಕೆಲವು ಪ್ರಾಧ್ಯಾಪಕರು ಸಂವಾದದಲ್ಲಿ ಭಾಗಿಯಾಗಿದ್ದಾರೆ. ಅವರೆಲ್ಲರ ಚಿಂತನೆ. ಅಕಾಡೆಮಿ ಅಧ್ಯಕ್ಷರ ವಿಚಾರ ಹೀಗೆ ಪ್ರಮುಖ ವಿಷಯಗಳನ್ನೊಳಗೊಂಡ ಈ ಕೃತಿ ವಿದ್ಯಾರ್ಥಿಗಳಿಗೆ ಓದುಗರಿಗೆ ಉಪಯುಕ್ತ ಗ್ರಂಥವಾಗಿ ಹೊರಬರುತ್ತದೆ ಎಂಬ ಆಶೆ ನನ್ನದು.

ಈ ವಿಚಾರ ಸಂಕಿರಣಕ್ಕೆ ಗುಲಬರ್ಗಾ ವಿ. ವಿ. ಒಪ್ಪಿಗೆ ಸೂಚಿಸಿ ಭಾಗಿಯಾದದ್ದು, ತುಂಬ ಆಸಕ್ತಿಯಲ್ಲಿ ಸಹಕರಿಸಿದ್ದು ಸಂತೋಷ ತಂದಿದೆ. ಅಂದು ಬಿಡುವಿನ ದಿನವಾಗಿದ್ದರೂ ಆಸಕ್ತಯಲ್ಲಿ ನೂರಾರು ವಿದ್ಯಾರ್ಥಿಗಳು, ಪ್ರಾಧ್ಯಾಪಕರು ವಿ. ವಿ. ಅಧಿಕಾರಿಗಳು ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದು ಯಶಸ್ವಿಗೊಳಿಸಿದ್ದು

ಸಂತೋಷವನ್ನುಂಟುಮಾಡಿದೆ. ಅದಕ್ಕಾಗಿ ಅಂದಿನ ಕುಲಪತಿಗಳನ್ನು ಕುಲಸಚಿವರನ್ನು ಕನ್ನಡ ಅಧ್ಯಯನ ಸಂಸ್ಥೆಯ ಅಧ್ಯಕ್ಷರನ್ನು ಸ್ಮರಿಸುತ್ತ ಅಕಾಡೆಮಿಯ ಪರವಾಗಿ ಕೃತಜ್ಞತೆಗಳೆನ್ನುತ್ತೇನೆ.

ವಿಚಾರಸಂಕಿರಣದಲ್ಲಿ ಪ್ರಬಂಧ ಮಂಡಿಸಿ ಪ್ರಕಟನೆಗೆ ಸಿದ್ಧಪಡಿಸಿಕೊಟ್ಟ ಡಾ. ಜಿ. ಆರ್. ತಿಪ್ಪೇಸ್ವಾಮಿ ಡಾ. ಬಿ. ಎಸ್. ತಲವಾಡಿ, ಡಾ. ಟಿ. ಎಂ. ಭಾಸ್ಕರ, ಡಾ. ಡಿ. ಬಿ. ನಾಯಕ ಅವರಿಗೆ ಆಶಯ ಭಾಷಣ, ಅತಿಥಿ ಉಪನ್ಯಾಸ, ಉದ್ಘಾಟನಾ ಹಾಗೂ ಅಧ್ಯಕ್ಷೀಯ ಭಾಷಣ ನೀಡಿದ ಡಾ. ವ್ಹಿ. ಜಿ. ಪೂಜಾರ, ಡಾ. ಎಂ. ಎಸ್. ಲಠ್ಠೆ, ಶ್ರೀ ಟಿ. ಬಿ. ಕೋಳಿ, ಶ್ರೀ ಕೆರೆಮನೆ ಶಂಭು ಹೆಗಡೆ ಹಾಗೂ ಗೋಷ್ಠಿಯ ಅಧ್ಯಕ್ಷ ಭಾಷಣ ನೀಡಿದ ಡಾ. ವೀರಣ್ಣ ದಂಡೆ ಅವರಿಗೆ, ಭಾಗವಹಿಸಿದ ಗುಲಬರ್ಗಾ ವಿ. ವಿ. ಪ್ರಾಧ್ಯಾಪಕರಿಗೆ, ಅಧಿಕಾರಿಗಳಿಗೆ, ಸಿಬ್ಬಂದಿ ವರ್ಗಕ್ಕೆ ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೆ ಮತ್ತೊಮ್ಮೆ ನನ್ನ ಹಾಗೂ ಅಕಾಡೆಮಿಯ ಕೃತಜ್ಞತೆಗಳೆನ್ನದಿರಲಾರೆ.

ಕೊನೆಯದಾಗಿ ಕಡಿಮೆ ಅವಧಿಯಲ್ಲಿ ಸುಂದರವಾಗಿ ಮುದ್ರಿಸಿಕೊಟ್ಟ ಪ್ರಭು ಗ್ರಾಫಿಕ್ಸ್ ಮಾಲೀಕರು ನನ್ನ ಸ್ನೇಹಿತರೂ ಆದ ಶ್ರೀ ಶಾಂತವೀರ ಜಂಗಮನಿ ಅವರಿಗೆ ಕೃತಜ್ಞತೆಗಳು.

– ಗವೀಶ ಹಿರೇಮಠ

ಸದಸ್ಯರು,
ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ,
'ಮಾತೋಶ್ರೀ', ಮಹಾತ್ಮ ಬಸವೇಶ್ವರ ನಗರ,
ಶ್ರೀ ರಾಘವೇಂದ್ರ ಸ್ವಾಮಿ ಮಠದ ಹಿಂದೆ, ಗುಲಬರ್ಗಾ.
ಫೋ : ೦೮೪೭೨ – ೨೪೮೯೦೪ ಮೊ : ೯೪೪೮೭೫೧೭೩೪

# ಪರಿವಿಡಿ


| | | | |
|---|---|---|---|
| ೧. | ಅಕಾಡೆಮಿ ಅಧ್ಯಕ್ಷರ ನುಡಿ | : ಶ್ರೀ ಕೆರೆಮನೆ ಶಂಭು ಹೆಗಡೆ | iii |
| ೨. | ಸಂಪಾದಕರ ಮಾತು | : ಶ್ರೀ ಗವೀಶ ಹಿರೇಮಠ | v |

**ಉದ್ಘಾಟನಾ ಸಮಾರಂಭ**

| | | | |
|---|---|---|---|
| ೧. | ಉದ್ಘಾಟನಾ ಭಾಷಣ | : ಶ್ರೀ ಟಿ. ಬಿ. ಕೋಳಿ<br>ಕುಲಸಚಿವರು (ಮೌಲ್ಯಮಾಪನ)<br>ಗುಲಬರ್ಗಾ ವಿ. ವಿ. | ೧ |
| ೨. | ಆಶಯ ಭಾಷಣ | : ಡಾ. ವ್ಹಿ. ಜಿ. ಪೂಜಾರ<br>ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ | ೩ |
| ೩. | ಅತಿಥಿಗಳ ಭಾಷಣ | : ಡಾ. ಮಲ್ಲಿಕಾರ್ಜುನ ಶಿವಪ್ಪ ಲಠ್ಠೆ<br>ವಿಶ್ರಾಂತ ಕನ್ನಡ ಪ್ರಾಧ್ಯಾಪಕರು<br>ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ | ೬ |
| ೪. | ಅಧ್ಯಕ್ಷೀಯ ಭಾಷಣ | : ಕೆರೆಮನೆ ಶಂಭು ಹೆಗಡೆ<br>ಅಧ್ಯಕ್ಷರು, ಜಾನಪದ ಮತ್ತು ಯಕ್ಷಗಾನ<br>ಅಕಾಡೆಮಿ, ಬೆಂಗಳೂರು | ೯ |

**ಗೋಷ್ಠಿ – ೧**

| | | | |
|---|---|---|---|
| ೫. | ಜನಪದ ಪ್ರದರ್ಶಕ ಕಲೆಗಳು ಮತ್ತು ಜಾಗತೀಕರಣ | : ಡಾ. ಜಿ. ಆರ್. ತಿಪ್ಪೇಸ್ವಾಮಿ | ೧೭ |
| ೬. | ಜನಪದ ಕರಕುಶಲ ಕಲೆಗಳು ಜಾಗತೀಕರಣ | : ಡಾ. ಬಿ. ಎಸ್. ತಲವಾಡಿ | ೨೮ |
| ೭. | ಜನಪದ ಕಲೆಗಳು ಮತ್ತು ಜಾಗತೀಕರಣದ ಭಯ | : ಡಾ. ವೀರಣ್ಣ ದಂಡೆ<br>ಕನ್ನಡ ಪ್ರಾಧ್ಯಾಪಕರು<br>ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ | ೩೯ |

## ಗೋಷ್ಠಿ – ೨


೮. ಅಲೆಮಾರಿಗಳು ಮತ್ತು ಜಾಗತೀಕರಣ : ಡಾ. ಟಿ. ಎಂ. ಭಾಸ್ಕರ್ ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ ೫೧

೯ ಬುಡಕಟ್ಟು ಅನನ್ಯತೆ– ಜಾಗತೀಕರಣ : ಡಾ. ಡಿ. ಬಿ. ನಾಯಕ ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ ೬೦


## ಸಂವಾದ


೧೦. ಜಾಗತೀಕರಣ – ಜನಪದ ಕಲೆ : ಡಾ. ರಾಜೇಂದ್ರ ಯರನಾಳ ೬೯

೧೧. ಜಾನಪದ ಮತ್ತು ಜಾಗತೀಕರಣ : ಡಾ. ಗವಿಸಿದ್ದಪ್ಪ ಎಚ್. ಪಾಟೀಲ ೭೩

೧೨. ಜಾನಪದ ಮತ್ತು ಜಾಗತೀಕರಣ : ಹನುಮಂತರಾವ್ ಬಿ. ದೊಡ್ಡಮನಿ ೭೭

# ಉದ್ಘಾಟನಾ ಭಾಷಣ

ಟಿ. ಬಿ. ಕೋಳಿ,
ಕುಲಸಚಿವರು (ಮೌಲ್ಯಮಾಪನ), ಗುಲಬರ್ಗಾ ವಿ.ವಿ.

ಇಂದಿನ ಸಮಾರಂಭದ ಅಧ್ಯಕ್ಷತೆ ವಹಿಸಿರುವ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಅಧ್ಯಕ್ಷರಾದ ಶ್ರೀ ಕೆರೆಮನೆ ಶಂಭು ಹೆಗಡೆಯವರೆ, ಅತಿಥಿಗಳಾದ ಡಾ॥ ಎಂ. ಎಸ್. ಲಠ್ಠೆ ಅವರೆ, ಆಶಯ ಭಾಷಣ ಮಾಡಲಿರುವ ಡಾ॥ ವ್ಹಿ. ಜಿ. ಪೂಜಾರ ಅವರೆ, ಕಾರ್ಯಕ್ರಮ ನಿಯೋಜಿಸಿದ ಜಾನಪದ ಅಕಾಡೆಮಿ ಸದಸ್ಯರಾದ ಶ್ರೀ ಗವೀಶ ಹಿರೇಮಠ ಅವರೆ, ಇಂದಿನ ವಿಚಾರ ಸಂಕಿರಣದಲ್ಲಿ ಪ್ರಬಂಧ ಮಂಡಿಸಲಿರುವ ವಿದ್ವಾಂಸರೆ, ವಿದ್ಯಾರ್ಥಿ ವಿದ್ಯಾರ್ಥಿನಿಯರೆ.

"ಜಾನಪದ ಮತ್ತು ಜಾಗತೀಕರಣ" ವಿಚಾರ ಸಂಕಿರಣ ಉದ್ಘಾಟಿಸುವ ಅವಕಾಶ ಬಂದುದು ನನ್ನ ಭಾಗ್ಯವೆಂದುಕೊಂಡಿದ್ದೇನೆ. ಈ ಅವಕಾಶ ತಂದುಕೊಟ್ಟ ಅಕಾಡೆಮಿ ಹಾಗೂ ಕನ್ನಡ ವಿಭಾಗದ ಕಾರ್ಯಕರ್ತರನ್ನು ಅಭಿನಂದಿಸುತ್ತೇನೆ.

ಇಂದಿನ ಆಧುನಿಕತೆಯ ಜಗತ್ತಿನಲ್ಲಿ; ಅನೇಕ ಮನರಂಜನೆಯ ಮಾಧ್ಯಮಗಳಲ್ಲಿ; ಜಾಗತೀಕರಣದ ಮಾರುಕಟ್ಟೆಯ ಸ್ಪರ್ಧೆಯಲ್ಲಿ ನಮ್ಮ ಅನೇಕ ಕಲೆಗಳು ಮಾಯವಾಗುತ್ತ ಹೊರಟಿವೆ. ಇಂಥ ಸಂದರ್ಭದಲ್ಲಿ ಕಲೆಗಳನ್ನು ಹೇಗೆ ಉಳಿಸಿ, ಬೆಳಸಿಕೊಂಡು ಬರಬೇಕೆಂಬುದೇ ಇಂದಿನ ವಿಚಾರಗೋಷ್ಠಿಯ ಚಿಂತನೆಯಾಗಿದೆ.

ಜನಪದ ಕಲೆಗಳು ಹಳ್ಳಿಗರ ಜೀವನದಲ್ಲಿ ಹಾಸು ಹೊಕ್ಕಾಗಿವೆ. ಹಳ್ಳಿಗರ ಬದುಕಿನಲ್ಲಿ ಚೈತನ್ಯದಾಯಕವಾಗಿವೆ. ಜೊತೆಗೆ ಸಾಮರಸ್ಯ ಬದುಕಿಗೆ ಕಾರಣವಾಗಿವೆ. ಹಳ್ಳಿಗರ ಮನರಂಜನೆಯ ಈ ಕಲೆಗಳು, ಒಂದಿಲ್ಲಾ ಒಂದು ರೀತಿ ಧಾರ್ಮಿಕ ಹಿನ್ನಲೆಯನ್ನು ಪಡೆದಿವೆ. ಪ್ರತಿ ಕಲೆಯ ಹಿಂದೆ ನಮ್ಮ ಪರಂಪರೆ, ನಮ್ಮ ಸಂಸ್ಕೃತಿ ಅಡಗಿರುತ್ತದೆ. ಜಾತ್ರೆ, ಉತ್ಸವಗಳಲ್ಲಿಯ ಡೊಳ್ಳು ಕುಣಿತ, ವೀರಗಾಸೆ, ಸೋಮನಕುಣಿತ, ಕಂಸಾಳೆಗಳಂಥ ಕಲೆಗಳು ಧಾರ್ಮಿಕ ಹಿನ್ನಲೆಯಲ್ಲಿ ದೇವರನ್ನು ಸ್ತುತಿಸುವ, ಪ್ರಾರ್ಥಿಸುವ ವಿಧಾನ ಕಂಡುಬರುತ್ತದೆ. ಈ ಕಲೆಗಳು ಧಾರ್ಮಿಕ ಹಾಗೂ ಸಾಂಸ್ಕೃತಿಕ ಅವಿಭಾಜ್ಯ ಅಂಗಗಳಾಗಿವೆ.

ಹಂತಿಹಾಡು, ಗೀಗೀಪದ, ಬೀಸುವ ಪದ ಸೋಬಾನ ಹಾಡು ಈಗ ಕೇಳಿಬರುತ್ತಿಲ್ಲ. ಅನೇಕ ಕಲೆಗಳು ನಶಿಸುತ್ತವೆ. ಅವುಗಳ ಕಳೆದುಕೊಳ್ಳುವುದೆಂದರೆ ನಮ್ಮ ಸಂಸ್ಕೃತಿಯನ್ನು

ನಮ್ಮ ಸಂಪ್ರದಾಯಗಳನ್ನು ಕಳೆದುಕೊಂಡಂತೆ. ನೂರಾರು ವರ್ಷಗಳ ಕಾಲದಿಂದ ಹಳ್ಳಿಗರ ಜೀವನದಲ್ಲಿ ಉಳಿದು, ಬೆಳೆದು ಬಂದಿದ್ದ ಕಲೆಗಳೀಗ ಕೈ ಬಿಡುತ್ತಿವೆ. ಹಳ್ಳಿಗರು ಕೂಡ ಆಧುನಿಕ ಜಗತ್ತಿಗೆ, ನಾಗರಿಕ ಜಗತ್ತಿಗೆ ಮಾರುಹೋಗಿ ಹೊರಗಿನ ಸಂಸ್ಕೃತಿಯನ್ನು ಸ್ವಾಗತಿಸುತ್ತಿದ್ದಾರೆ. ಯುವಕರು ಪಾಶ್ಚಿಮಾತ್ಯ ಸಂಗೀತಕ್ಕೆ ಬಲಿಯಾದರೆ ಮಹಿಳೆಯರು ಟಿ. ವಿ. ಚಾನಲ್‌ಗಳ ಧಾರವಾಹಿಗೆ ಮೊರೆಹೋಗಿದ್ದಾರೆ.

ಇಂಥ ಸ್ಥಿತಿಯಲ್ಲಿ ನಾವು ನಮ್ಮ ಜನಪದ ಕಲೆಗಳನ್ನು ಹೇಗೆ ಉಳಿಸಿಕೊಳ್ಳಬೇಕೆನ್ನುವ ಚಿಂತನೆಯ ಜೊತೆ ನಮ್ಮ ಹಳ್ಳಿಗರಿಗೆ, ನಮ್ಮ ಮಕ್ಕಳಿಗೆ ನಮ್ಮ ಕಲೆಗಳ ಅರಿವು ಮೂಡಿಸುತ್ತ, ನಮ್ಮತನದ ಘನತೆ ಗೌರವಗಳನ್ನು ತಿಳಿಸುತ್ತ, ಸ್ವಾಭಿಮಾನ ಮೂಡಿಸುತ್ತ, ಗ್ರಾಮೀಣ ಪ್ರದೇಶದಲ್ಲಿ ಜನಜಾಗ್ರತಿ ಮಾಡುತ್ತ ಸಾಗುವದು ಪ್ರಮುಖವಾಗಿದೆ.

ಹಳ್ಳಿಗಾಡಿನ ಸಂಸ್ಕೃತಿಗೆ ಮೆರಗು ನೀಡಿದ್ದೇ ಜನಪದ ಕಲೆಗಳು. ಗ್ರಾಮೀಣ ಪ್ರದೇಶದ ಕಲೆಗಳನ್ನು ಉಳಿಸಿ ಅವುಗಳನ್ನು ಇಂದಿನ ಪೀಳಿಗೆಗೆ ತೋರಿಸುವ ಅಗತ್ಯ ಹೆಚ್ಚಾಗಿದೆ. ದೊಡ್ಡಾಟ, ಸಣ್ಣಾಟ, ಹೀಗೆ ಜಾನಪದ ರಂಗಭೂಮಿ ನಶಿಸುತ್ತ ಸಾಗಿರುವ ಸಂದರ್ಭದಲ್ಲಿ ಅಕಾಡೆಮಿ ಅಂಥ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಬಯಲಾಟ, ಸಣ್ಣಾಟಗಳಂಥ ಕಲೆಗಳನ್ನು ಉಳಿಸುವಲ್ಲಿ ಪ್ರಯತ್ನಿಸಬೇಕು. ಸೂತ್ರದ ಗೊಂಬೆಯಾಟ ತೊಗಲು ಗೊಂಬೆಯಾಟ ಕಣ್ಮರೆಯಾಗುತ್ತ ಮುಂದಿನ ಪೀಳಿಗೆಗೆ ಈ ಕಲೆಗಳ ಬಗ್ಗೆ ಕೇವಲ ಪುಸ್ತಕಗಳಲ್ಲಿ ಚಿತ್ರೀಕರಣದಲ್ಲಿ ತೋರಿಸುವ ಪ್ರಸಂಗ ಬಾರದಿರಲಿ.

ನಮ್ಮ ಜನಪದ ಕಲೆಗಳು ನಮ್ಮ ಉಸಿರಾಗಬೇಕು, ನಮ್ಮ ನರನಾಡಿಗಳ ಚೇತನವಾಗಬೇಕು. ಹಾಗಾಗಬೇಕೆಂದರೆ ನಮ್ಮ ಕಲೆಗಳು ಉಳಿಯಬೇಕು, ಬೆಳೆಯಬೇಕು. ಅವು ನಮ್ಮ ಹಳ್ಳಿಗರ ಜೀವನದಲ್ಲಿ ಚೈತನ್ಯವಾಗಿ ಜೀವನ ಶ್ರದ್ಧೆಯನ್ನು ಧಾರ್ಮಿಕ ಹಿನ್ನಲೆಯನ್ನು ತಿಳಿಯುತ್ತ ಉತ್ತಮ ಬದುಕಿಗೆ ಕಾರಣವಾಗಬೇಕು.

ಈ ಎಲ್ಲ ವಿಚಾರಗಳ ಚಿಂತನ ಮಂಥನ ಇಂದು ಈ ವಿಚಾರ ಸಂಕಿರಣದಲ್ಲಿ ನಡೆಯಲಿ, ವಿದ್ವಾಂಸರು, ಆ ನಿಟ್ಟಿನಲ್ಲಿ ಚಿಂತಿಸಲಿ. ನಮ್ಮ ಕಲೆ, ನಮ್ಮ ಸಂಸ್ಕೃತಿ, ನಮ್ಮ ಪರಂಪರೆ ಉಳಿವಿಗಾಗಿ ಯೋಚಿಸಿ ಅವುಗಳನ್ನು ಉಳಿಸಿಕೊಳ್ಳುವ ಮಾರ್ಗ ಕಂಡುಕೊಳ್ಳುವಲ್ಲಿ ಕಾರಣವಾಗಲೆಂದು ಹೇಳಿ ನನಗೆ ಅವಕಾಶ ಕೊಟ್ಟಿದ್ದಕ್ಕೆ ಮತ್ತೊಮ್ಮೆ ಅಕಾಡೆಮಿಯವರಿಗೂ ಕನ್ನಡ ವಿಭಾಗದವರಿಗೂ ವಂದಿಸುತ್ತ ನನ್ನ ನಾಲ್ಕು ಮಾತು ಮುಗಿಸುತ್ತೇನೆ. ಎಲ್ಲರಿಗೂ ಮತ್ತೊಮ್ಮೆ ನನ್ನ ನಮಸ್ಕಾರ.

# ಆಶಯ ಭಾಷಣ

ಡಾ. ಎ. ಜಿ. ಪೂಜಾರ

◆

'ಜಾನಪದ ಮತ್ತು ಜಾಗತೀಕರಣ' ವೆಂಬ ಪ್ರಸ್ತುತ ಒಂದು ದಿನದ ವಿಚಾರ ಸಂಕಿರಣದಲ್ಲಿ ಪಾಲ್ಗೊಂಡು ನಾಲ್ಕಾರು ಮಾತುಗಳನ್ನು ಆಶಯದ ರೂಪದಲ್ಲಿ ಆಡಲು ನನಗೆ ಅತ್ಯಂತ ಹೆಮ್ಮೆ ಹಾಗೂ ಹರ್ಷವೆನಿಸುತ್ತದೆ. ಹಳ್ಳಿಯಲ್ಲಿ ಹುಟ್ಟಿ ಬೆಳೆದ ನನಗೆ ಜಾನಪದದ ಸ್ಪರ್ಶವಿದೆ, ಜಾನಪದದ ವಿವಿಧ ಆಚರಣೆ ಹಾಗೂ ಜನತೆಯ ಜೀವನ ವಿಧಾನದ ದಟ್ಟ ಪರಿಚಯವಿದೆ. ಹಾಗೆ ನೋಡಿದರೆ, ನಾವೆಲ್ಲರೂ ವೈಯಕ್ತಿಕವಾಗಿ ಜಾನಪದರೇ ಆಗಿದ್ದೇವೆ. ಸಾರ್ವತ್ರಿಕವಾಗಿ ಸಭೆ ಸಮಾರಂಭಗಳಲ್ಲಿ ಶಿಷ್ಟ ಭಾಷೆಯನ್ನಾಡಿ, ನಾಗರಿಕ ಸೌಲಭ್ಯಗಳನ್ನು ಅನುಭವಿಸಿ, ಶಿಷ್ಟರೆನ್ನಿಸಿಕೊಳ್ಳುತ್ತಿದ್ದೇವೆ. ಜಾನಪದವು ನಮ್ಮ ಜೀವನದ ಸಕಲಾವಯವಗಳನ್ನು ಸಂಸ್ಪರ್ಶಿಸಿದ ಜ್ಞಾನ ಶಾಖೆಯಾಗಿದೆ. ಇದು ಮನುಕುಲದ ಸಮಗ್ರ ಚಟುವಟಿಕೆಗಳನ್ನು, ಜೀವನ ವಿಧಾನವನ್ನು ಒಳಗೊಂಡ ದಾಖಲಾತಿಯಾಗಿದೆ. ಜಾನಪದ ಮತ್ತು ಶಿಷ್ಟ ಪದ ಇವೆರಡೂ ಮೇಲ್ನೋಟಕ್ಕೆ ಭಿನ್ನ ಭಿನ್ನವಾಗಿ ತೋರುವುವು. ಎರಡರಲ್ಲೂ ಕೊಳು–ಕೊಡೆ ನಿರಂತರವಾಗಿ ನಡೆದೇ ಇರುತ್ತದೆ. ಜಾನಪದವು ಮರದ ಬೇರಾದರೆ – ಶಿಷ್ಟ ಪದವು ಆ ಮರಕ್ಕೆ ಬಿಟ್ಟ ಹೂವು, ಹಣ್ಣು ಇದ್ದಂತೆ. ಆ ಮರದ ಬೇರು ಒಣಗಿ ಬಿಟ್ಟರೆ, ಹೂವು, ಹಣ್ಣು ನಮಗೆ ಸಿಗವು. ಇದರಿಂದಾಗಿ, ಜಾನಪದಕ್ಕೆ ಹೆಚ್ಚಿನ ಮಹತ್ವವಿದೆ. ಇದುವೇ ಶಿಷ್ಟ ಪದಕ್ಕೆ ತಾಯಿ ಬೇರು, ತಲ ಕಾವೇರಿ. ಶಿಷ್ಟ ಪದಕ್ಕೆ ಜಡತ್ವವುಂಟಾದಾಗ ಭಾಷೆ ಸತ್ವಹೀನವಾಗಿ ಸಪ್ಪೆಯಾದಾಗ ಅದಕ್ಕೆ ಜೀವಸತ್ವವನ್ನೂ, ನಾವೀನ್ಯತೆಯನ್ನೂ ತುಂಬುವುದು ಜನಪದ ಭಾಷೆಯೇ ಆಗಿದೆ. ಶಿಷ್ಟ ಭಾಷೆಯು ಕೃತಕವೂ, ಸಪ್ಪೆಯೂ ಆದುದಾದರೆ, ಜನಪದ ಭಾಷೆ ಜೀವಂತಿಕೆಯಿಂದ ಕೂಡಿದುದಾಗಿದೆ. ಶಿಷ್ಟ ಭಾಷೆ ಯಾವಾಗ ಮೃತ ಪ್ರಾಯದ ಸ್ಥಿತಿಗೆ ಬರುತ್ತದೋ ಆವಾಗ ಜೀವ ಶಕ್ತಿಯನ್ನೂ, ನಾವೀನ್ಯತೆಯನ್ನೂ ತುಂಬಿ ಮುನ್ನಡೆಸುವ ಶಕ್ತಿ ಜನಪದ ಭಾಷೆಗಿದೆ. ಜಾನಪದದ ಬಗೆಗಿನ ನಮ್ಮ ತಿಳುವಳಿಕೆ ಇದೀಗ ಬೇರೆಯಾಗಬೇಕಿದೆ.

ಜಾಗತೀಕರಣದ ಸಂದರ್ಭದಲ್ಲಿ ಜಾನಪದದ ಸ್ಥಾನವೇನು ? ಜಾನಪದಕ್ಕಿರುವ ಮಹತ್ವ, ಜನಪದರ ಜೀವನ ವಿಧಾನ ಮುಂತಾದ ಅಂಶಗಳ ಬಗೆಗೆ ನಾವಿಂದು ಯೋಚಿಸುವ ಅಗತ್ಯವಿದೆ. ಜಾಗತೀಕರಣದ ಪ್ರಭಾವ ಇಂದು ಎಲ್ಲೆಡೆ ಆಗಿದೆ, ಆಗುತ್ತಲಿದೆ.

ಹಾಗೆಯೇ ಜಾನಪದದ ಮೇಲೆಯೂ ಆಗಿದೆ. ಜಾನಪದ ಪ್ರದರ್ಶನ ಕಲೆಗಳು, ಕರಕುಶಲ ಕಲೆಗಳು ಗುಡಿ ಕೈಗಾರಿಕೆಗಳು, ಹಳ್ಳಿಯ ಜನತೆಯ ವಿಧ ವಿಧದ ಆಟಗಳು, ಮನರಂಜನೆ ಹಾಗೂ ಧಾರ್ಮಿಕ ವಿಧಿ ಕ್ರಿಯೆಗಳು ಇವುಗಳ ಮೇಲೆಲ್ಲಾ ಇಂದು ಜಾಗತೀಕರಣದ ಪ್ರಭಾವವುಂಟಾಗಿ ಜಾನಪದಕ್ಕೆ ಒಂದು ಬಗೆಯ ನಿಲುಗಡೆ ಉಂಟಾಗಿದೆಯೇನೋ ಎಂಬ ಭಾಸವಾಗುತ್ತಿದೆ. ಆದರೂ, ಜಾಗತೀಕರಣದ ನಿಯಮಗಳು ಜಾಗತೀಕರಣದ ಸುಧಾರಣೆಗಳಿಗೆ ತಕ್ಕ ಹಾಗೆ ಜಾನಪದ ಕಲೆಗಳೂ ಇದು ಬದಲಾಗುವುದು ತೀರ ಅವಶ್ಯಕವೆನಿಸಿವೆ. ಇಲ್ಲದೇ ಹೋದರೆ, ಅವು ಜಾಗತೀಕರಣದ ಬಿರುಗಾಳಿಯ ಹೊಡೆತಕ್ಕೆ ನಲುಗಿ ಹೋಗುವುದು ಖಚಿತ. ಆದರೂ, ಇಡೀ ಜಾನಪದ ಆಚರಣೆಗಳು ದಿಢೀರನೇ ಮಾಯವಾಗುತ್ತಿವೆ ಎಂದಲ್ಲ. ಕ್ರಮೇಣ ಅವು ಜನತೆಯಿಂದ ದೂರಾಗುತ್ತ ನಡೆಯುವುವು. ಮೊದ ಮೊದಲು ಹಳ್ಳಿಗಾಡಿನಲ್ಲಿ ಮದುವೆ ಹಾಗು ಇನ್ನಿತರ ಸಮಾರಂಭಗಳಲ್ಲಿ ಬಾಸಿಂಗ, ಹೂವಿನ ದಂಡೆ, ಸರ ಇತ್ಯಾದಿಗಳನ್ನು ತಯಾರಿಸಿ ಕೊಡುವ ಹೂಗಾರರು ಇದ್ದರು. ಈ ಕಾರ್ಯಕ್ಕೆ ಅವರು ಪ್ರತಿಫಲವಾಗಿ ಹಣ, ಧಾನ್ಯ ಪಡೆದು ತಮ್ಮ ಜೀವನ ಸಾಗಿಸುತ್ತಿದ್ದರು. ಈಗ ಪೇಟೆಯಲ್ಲಿ ಸಿದ್ಧಗೊಂಡ ಮುತ್ತಿನ ಬಾಸಿಂಗ, ಮೈಸೂರು ಪೇಟಾನಮೂನಿ ಬಾಸಿಂಗ ಕೃತಕ ಹೂವಿನ ಹಾರ ದಂಡೆಗಳು ಅತೀ ಕಡಿಮೆ ಬೆಲೆಯಲ್ಲಿ ಸಿಗುತ್ತಿರುವುದರಿಂದ ಗ್ರಾಮೀಣ ಪರಿಸರದಲ್ಲಿ ನಿರ್ಮಾಣಗೊಳ್ಳುತ್ತಿರುವ ವಸ್ತುಗಳಿಗೆ ಇಂದು ಬೇಡಿಕೆ ಕಡಿಮೆಯಾಗತೊಡಗಿದೆ. ಹಳ್ಳಿಗಳಲ್ಲಿ ಮೊದಲು ಕ್ಷೌರಿಕರು, ಪತ್ತಾರರು ಇರುತ್ತಿದ್ದು, ಇವರು ಕ್ಷೌರ ಮಾಡುವುದು, ಬಂಗಾರದ ಒಡವೆ ಮಾಡಿ ಕೊಡುವ ಕಾಯಕ ಮಾಡ್ತಾ ಇದ್ದರು. ಈಗ ಪೇಟೆಯಲ್ಲಿ ಕ್ಷೌರದ ಅಂಗಡಿಗಳಾಗಿವೆ, ಬಂಗಾರದ ಒಡವೆ ಅಂಗಡಿಗಳು ಹುಟ್ಟಿ ಕೊಂಡಿವೆ. ಇವುಗಳಿಂದಾಗಿ ಇಂದು ಗ್ರಾಮೀಣ ಜನ ಹಳ್ಳಿಗಳತ್ತ ಬೆನ್ನು ತೋರಿಸಿ, ಪಟ್ಟಣಗಳತ್ತ ವಲಸೆ ಬರುತ್ತಿದ್ದಾರೆ. ಹಳ್ಳಿಗಳಲ್ಲಿದ್ದ ಜಾನಪದರ ಬದುಕು ಇಂದು ದಾರುಣವಾಗುತ್ತಲಿದೆ. ಅವರು ತಯಾರಿಸುವ ವಸ್ತುಗಳಿಗೆ ಬೇಡಿಕೆ ಕಡಿಮೆಯಾಗತೊಡಗಿದೆ. ಅವರು ವಸ್ತುಗಳನ್ನು ನಿರ್ಮಿಸಲು ಹೆಚ್ಚು ಹಣ ಖರ್ಚು ಮಾಡಬೇಕಾಗುವುದು. ಇದರಿಂದ ಇವರ ದುಬಾರಿ ಸಾಮಾನುಗಳನ್ನು ಜನ ಕೊಳ್ಳದೇ ಪೇಟೆಯಲ್ಲಿ ಕಡಿಮೆ ಹಣದಲ್ಲಿ ಸ್ಪರ್ಧೆಯ ರೂಪದಲ್ಲಿ ಸಿಗುತ್ತಿರುವ ಸಾಮಾನುಗಳತ್ತ ಜನ ಧಾವಿಸುತ್ತಲಿದ್ದಾರೆ. ಜಗತ್ತೇ ಇವತ್ತು ಸಣ್ಣದಾಗಿದೆ. ಅಮೇರಿಕೆಯಲ್ಲಿ ಹುಟ್ಟಿಕೊಂಡ ಯಾವುದೇ ಸಾಮಾನು ಬಹು ಬೇಗನೇ ಎಲ್ಲಾ ದೇಶಗಳ ಮಾರುಕಟ್ಟೆಗಳಲ್ಲಿ ಇಂದು ಸಿಗುತ್ತದೆ. ಮಾರಾಟದಲ್ಲಿ ತೀವ್ರವಾದ ಸ್ಪರ್ಧೆ ಇರುವುದರಿಂದ ಸಹಜವಾಗಿ ಅವುಗಳ ಬೆಲೆ ಕಡಿಮೆ ಇರುವುದು. ಹೀಗಾಗಿ ಗುಡಿ ಕೈಗಾರಿಕೆಗಳಿಗೆ, ಕರಕುಶಲ ಕಲೆಗಳಿಗೆ, ಜಾನಪದ ಆಟಿಕೆಗಳಿಗೆ ಇಂದು ಬೇಡಿಕೆ ಕಡಿಮೆ ಆಗ್ತಾ ಇದೆ. ಇಂದು ಸಿನೇಮಾ, ವಿಡಿಯೋ ಇತ್ಯಾದಿ ಬಂದುದರಿಂದ ಹಳ್ಳಿಗಾಡಿನ ಬಯಲಾಟಗಳಿಗೆ, ನೃತ್ಯಗಳಿಗೆ, ದಾಸರಾಟಗಳಿಗೆ ಬೇಡಿಕೆ ಕಡಿಮೆಯಾಗಿದೆ. ಜಾಗತೀಕರಣದ ಪ್ರಭಾವ ಇಂದು ಎಲ್ಲೆಂದರಲ್ಲಿ ಆಗುತ್ತಲೇ

ನಡೆದಿದೆ. ಮೊದಮೊದಲು ಹಳ್ಳಿಗಳಲ್ಲಿ ಸಾಮಾನ್ಯವಾಗಿ ಎಲ್ಲ ಹೆಣ್ಣು ಮಕ್ಕಳ ಹೆರಿಗೆ, ಬಾಣಂತಿನ ಅಲ್ಲೇ ನಡೀತಾ ಇತ್ತು. ಸೂಲಗಿತ್ತಿಯರು ಸಲೀಸಾಗಿ ಹೆರಿಗೆ ಮಾಡಿಸ್ತಾ ಇದ್ದರು. ಈಗ ಎಲ್ಲರೂ ಹೆರಿಗೆಯನ್ನು ಪಟ್ಟಣಗಳಲ್ಲಿರುವ ತಜ್ಞ ವೈದ್ಯರುಗಳ ದವಾಖಾನೆಗಳಲ್ಲಿ ಮಾಡಿಸುವರು. ಇದರಿಂದ ಅವರಿಗೆ ಸಾವಿರಾರು ರೂಪಾಯಿ ಖರ್ಚಾದರೂ ಚಿಂತೆಯಿಲ್ಲ ಎನ್ನುವರು. ಹಳ್ಳಿಗಳಲ್ಲಿ ಜಾನಪದ ನಾಟೀ ವೈದ್ಯರು ಇದ್ದರು. ಅವರು ಸಾಮಾನ್ಯವಾಗಿ ಎಂಥಾ ರೋಗಗಳು ಬಂದರೂ, ಔಷಧ ಕೊಡ್ತಾ ಇದ್ದರು. ಎಷ್ಟೋ ಕಾಯಿಲೆಗಳು ವಾಸಿಯಾಗುತ್ತಿದ್ದವು. ಇವುಗಳಲ್ಲಿ ಕಾಮಣಿಯೂ ಒಂದು ಕಾಯಿಲೆ. ಈ ಕಾಯಿಲೆ ಬಂದವರು ಆಯುರ್ವೇದ ಔಷಧವೇ ಈ ಕಾಯಿಲೆಗೆ ರಾಮಬಾಣ ಎಂಬುದು ಈಗಲೂ ಎಲ್ಲರಿಗೂ ಗೊತ್ತು. ಆದರೆ, ಜಾಗತೀಕರಣದ ಈ ಸಂದರ್ಭದಲ್ಲಿ ನಾಟೀ ವೈದ್ಯರನ್ನು ಕೇಳುವವರೇ ಯಾರೂ ಇಲ್ಲ. ಹಳ್ಳಿಗಳಲ್ಲಿ ಎಷ್ಟೋ ಜನಪದ ಪ್ರದರ್ಶನ ಕಲೆಗಳು ಮೊದಲು ಪ್ರದರ್ಶನಗೊಳ್ಳುತ್ತಿದ್ದುವು ಇವುಗಳಲ್ಲಿ ಬಯಲಾಟ, ಡೊಳ್ಳು ಕುಣಿತ, ನಂದಿಕೋಲು ಕುಣಿತ, ಕುದುರೆ ಸೋಗಿನ ಕುಣಿತ, ಕರಡೀಮಜಲು, ಸಂಬಾಳವಾದನ, ಒಂದೇ ಎರಡೇ ಮುಂತಾದ ಜಾನಪದ ಕಲೆಗಳು ಪ್ರದರ್ಶನಗೊಳ್ಳುತ್ತಿದ್ದವು. ಈಗ ಇವನ್ನೆಲ್ಲ ಮನೆಯಲ್ಲೇ ಕೂತು ವಿಡಿಯೋದ ಮೂಲಕ ಟಿ. ವಿ. ಯಲ್ಲಿ ನೋಡುವಂತಾಗಿದೆ. ಹತ್ತಾರು ಜನ, ನೂರಾರು ಜನ ಕೂಡಿ ಮಾಡುವ ಕೆಲಸವನ್ನು ಇಂದು ಒಬ್ಬರೇ ಕಂಪ್ಯೂಟರ್ ಮೂಲಕ ಮಾಡಿ ಮುಗಿಸುವರು. ಇದು ಸರಿ ಅಲ್ಲ ಎಂತಲ್ಲ. ಜಾನಪದದ ನಂಟು ನಮ್ಮ ಜನತೆಗೆ ಇಂದು ಜಾಗತೀಕರಣದ ಪ್ರಭಾವದಿಂದಾಗಿ ಕಡಿಮೆ ಆಗುತ್ತ ನಡೆದಿದೆ. ಇದಕ್ಕೆ ಹೆದರುವ ಅಗತ್ಯವಿಲ್ಲ. ಕಾಲಕ್ಕೆ ತಕ್ಕಂತೆ ಜಾನಪದ ಕಲೆ ಜೀವನದಲ್ಲೂ ಪರಿವರ್ತನೆಯಾಗುವ ಅಗತ್ಯವಿದೆ. 'ಕಾಲವನ್ನಾದರೂ ತಡೆಯದು ನಿಲ್ಲಿಸರು' ಎಂಬಂತೆ ಜಾಗತೀಕರಣದ ಪ್ರಭಾವವನ್ನಾರೂ ತಡೆಯರು ಮತ್ತು ತಡೆಯಬಾರದು. ಜಾನಪದ ತನ್ನ ರೂಪದಲ್ಲಿ ಬದಲಾಗುತ್ತಿದೆಯೇ ವಿನಾ ಪೂರ್ಣ ಮರೆಯಾಗದು.

❖

# ಅತಿಥಿಗಳ ಭಾಷಣ

ಡಾ. ಮಲ್ಲಿಕಾರ್ಜುನ ಶಿವಪ್ಪ ಲಠ್ಠೆ

◆

ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಅಧ್ಯಕ್ಷರಾದ ಶ್ರೀ ಕೆರೆಮನೆ ಶಂಭು ಹೆಗಡೆಯವರೆ, ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯ ಅಧ್ಯಕ್ಷರಾದ ಡಾ. ವ್ಹಿ. ಜಿ. ಪೂಜಾರ ಅವರೆ ಈ ಎರಡೂ ಸಂಸ್ಥೆಗಳ ಸಂಯುಕ್ತ ಆಶ್ರಯದಲ್ಲಿ ಹಮ್ಮಿಕೊಂಡಿರುವ ಜಾನಪದ ಮತ್ತು ಜಾಗತೀಕರಣ ವಿಚಾರ ಸಂಕಿರಣ ಉದ್ಘಾಟಿನಾ ಸಮಾರಂಭಕ್ಕೆ ನನ್ನನ್ನು ಮುಖ್ಯ ಅತಿಥಿಗಳನ್ನಾಗಿ ಬರಮಾಡಿಕೊಂಡು ಗೌರವ ನೀಡಿದ್ದಕ್ಕಾಗಿ ಎರಡೂ ಸಂಸ್ಥೆಗಳ ಪದಾಧಿಕಾರಿಗಳಿಗೆ ಕೃತಜ್ಞತೆಗಳನ್ನು ಸಲ್ಲಿಸುವೆ.

ಈ ವಿಚಾರ ಸಂಕಿರಣದ ಉದ್ಘಾಟಕರಾಗಿರುವ ಶ್ರೀ ಕೋಳಿಯವರೆ ಇದರಲ್ಲಿ ಭಾಗವಹಿಸಿರುವ ಎಲ್ಲ ವಿದ್ವಾಂಸರೆ, ವಿಭಾಗದ ಪ್ರಾಧ್ಯಾಪಕ ಮಿತ್ರರೆ, ಪತ್ರಿಕಾ ವರದಿಗಾರ ಮಿತ್ರರೆ, ಅಕಾಡೆಮಿಯ ಕುಲಸಚಿವರೆ, ಸದಸ್ಯರೆ,

"ಜಾಗತೀಕರಣ ಪ್ರಜ್ಞಾಲೋಕದ ವಿಕಾಸವಾದವೆನಿಸಿರುವುದು. ಜನಪದ ಕಲೆ–ಸಾಹಿತ್ಯ–ಸಂಸ್ಕೃತಿ ಶ್ರೀ ಸಾಮಾನ್ಯರ ಶ್ರೀಮಂತ ಬದುಕಿನ ಆರಾಮಗಳಾಗಿವೆ. ದುಡಿತವೇ ದುಡ್ಡಿನ ತಾಯಿಯೆಂದು ನಂಬಿಕೊಂಡ ಬಂದ ಜನಪದರು ಹಗಲೆನ್ನದೆ ರಾತ್ರಿಯೆನ್ನದೆ ಮೈಮುರಿದು ದುಡಿದದ್ದೇ ದುಡಿದದ್ದು. ಜನಪದರರದು ಕಾಗಿಯ ಬಳಗ, ಕಾಕಾ ಎಂದು ಕರೆದು ಕೂಡಿ ತಿನ್ನುವ ಮನೋಭಾವ. ಇಂದು ವೈಜ್ಞಾನಿಕ ನಾಗಲೋಟದಲ್ಲಿ ಎಲ್ಲರೂ ಹತ್ತಿರ ಹತ್ತಿರ ಬರುತ್ತಿದ್ದೇವೆ. ಒಬ್ಬರನ್ನೊಬ್ಬರನ್ನು ಅರಿತುಕೊಳ್ಳುತ್ತಿದ್ದೇವೆ. ಜಾಗತೀಕರಣ, ಉದಾರೀಕರಣ, ಖಾಸಗೀಕರಣ ಮೊದಲಾದ ಹೊಸ ಹೊಸ ತತ್ವ ಸಿದ್ಧಾಂತಗಳು ಪಸರಿಸುತ್ತಲಿವೆ. ಇವೇ ಒಂದೇ ಕಡೆಗಿನ ಸಂಪತ್ತು ಕೇಂದ್ರೀಕರಣಗೊಳ್ಳುವುದನ್ನು ಏಕಸ್ವಾಮ್ಯದ ಚಟುವಟಿಕೆಗಳನ್ನು ನಿಯಂತ್ರಿಸಲು ಸಹಾಯಕಾರಿಯಾಗುತ್ತವೆ. ಹಣಕಾಸಿನ ಒಲವೂ ಒಂದೇ ಕಡೆಗೆ ಸಂಗ್ರಹಗೊಳ್ಳುವ ನಿಯಮಕ್ಕೆ ಬದಲಾಗಿ ವಿಕೇಂದ್ರೀಕರಣಗೊಳ್ಳುವುದರಿಂದ ಉತ್ಪನ್ನಗಳ ಅಭಿವೃದ್ಧಿಯಾಗುತ್ತದೆ. ಉತ್ಪಾದನೆ ಹೆಚ್ಚುತ್ತದೆ. ಇದರಿಂದ ಏಕಸ್ವಾಮ್ಯತೆ, ವೈಯಕ್ತಿಕ ಅಧಿಕಾರ ಕಡಿಮೆಯಾಗಿ ಪ್ರತಿಯೊಬ್ಬರೂ

ತಮ್ಮ ದುಡಿತದಲ್ಲಿ ಸ್ವಾವಲಂಬಿಗಳಾಗಬಹುದಾಗಿದೆ. ಜನತೆ ಹೊಸ ಹೊಸ ಜೀವನ ವಿಧಾನಕ್ಕೆ ಅಂಟಿಕೊಳ್ಳುತ್ತಾರೆ. ಉಡಿಗೆ-ತೊಡಿಗೆ, ಶಿಕ್ಷಣ-ಆರ್ಥಿಕ-ಸಾಮಾಜಿಕ ಕ್ಷೇತ್ರಗಳಲ್ಲಿ ಹೊಸತನವನ್ನು ರೂಢಿಸಿಕೊಳ್ಳುತ್ತಾರೆ. ಇದರಿಂದ ದೂರ ವಿದೇಶಗಳ ಆರ್ಥಿಕ ಸಂಪತ್ತು ಹೆಚ್ಚುವ, ವಿದೇಶಿ ವಿನಿಮಯ ಸಂಚಯಗೊಳ್ಳುವ. ಹೀಗೆ ಬಂದ ಲಾಭವನ್ನು ದೇಶದ ಸಾಮಾಜಿಕ ಅಭಿವೃದ್ಧಿಗೆ ವಿನಿಯೋಗಿಸಿಕೊಳ್ಳುವ ಪ್ರಯತ್ನ ಮುಂದುವರಿಯುತ್ತದೆ.

ಶ್ರೀ ಸಾಮಾನ್ಯರ ಸಹಕಾರ, ಸಹಾನುಭೂತಿ, ಒಂದೆಂಬ ಮನೋಭಾವ, ಭೇದಭಾವ ಎಣಿಸದ ವಿಶ್ವಬಂಧುತ್ವ 'ಸರ್ವೇ ಜನಃ ಸುಖಿನೋಭವಂತು', 'ಸಕಲ ಜೀವಾತ್ಮರಿಗೆ ಲೇಸನೆ ಬಯಸುವ ಶರಣ ಸಂಸ್ಕೃತಿ'ಯನ್ನು ಜಗತ್ತಿಗೆ ತಿಳಿಸಿಕೊಡಲು ಜಾಗತೀಕರಣದಿಂದ ಸಾಧ್ಯವಾಗಬಹುದಾಗಿದೆ.

ಮಾನವೀಯತೆ ಮಾಯವಾದಾಗ ಶೋಷಣೆಗೀಡಾದಾಗ ಮನುಷ್ಯ ಜಾಗತೀಕರಣಕ್ಕೆ ವಾಲುತ್ತಿರುತ್ತಾನೆ. ಜಾಗತೀಕರಣದಿಂದ ಲಾಭವೂ ಇದೆ. ಆದರೆ ಜನತೆ ಅದರ ಸದುಪಯೋಗಕ್ಕಿಂತ ಹೆಚ್ಚಾಗಿ ದುರುಪಯೋಗ ಮಾಡಿಕೊಳ್ಳುವುದರಿಂದಾಗಿ ಸಂಕಷ್ಟದಲ್ಲಿ ಸಿಲುಕಿಕೊಳ್ಳುತ್ತೇವೆ. ಜಾಗತೀಕರಣ ವ್ಯವಸ್ಥೆಯಲ್ಲಿ ಎಲ್ಲವೂ ಕೆಟ್ಟದಾಗಿಲ್ಲ, ಹೊರಗಿನದನ್ನು ಸ್ವೀಕರಿಸುವಾಗ ನಮ್ಮದನ್ನೂ ಅರಿತು, ಉಳಿಸಿ, ಬೆಳೆಸಿಕೊಂಡು ಹೋಗಬೇಕಾಗುತ್ತದೆ. ಅದನ್ನು ಜಗತ್ತಿಗೆ ಪರಿಚಯಿಸಬೇಕಾಗುತ್ತವೆ. ಈ ನಿಟ್ಟಿನಲ್ಲಿ ಕರ್ನಾಟಕದ ಜನಪದರ ಕಲೆ, ಸಾಹಿತ್ಯ-ಸಂಸ್ಕೃತಿಯ ಸೊಬಗನ್ನು ಜಗತ್ತಿಗೆ ಹರಿಯಬಿಡಬೇಕು. ಮಾನವೀಯ ಮೌಲ್ಯಗಳಿಂದ ಶ್ರೀಸಾಮಾನ್ಯರನ್ನು ಪಾರುಮಾಡಲು ಪಣತೊಡುವುದಾಗಬೇಕು.

ಜಾಗತೀಕರಣದಿಂದ ನಿರುದ್ಯೋಗ ನಿವಾರಣೆಯಾಗಬಹುದಾಗಿದೆ. ಅದಕ್ಕಾಗಿ ಪ್ರತಿಯೊಬ್ಬರೂ ಪ್ರಾಮಾಣಿಕರಾಗಿ ದುಡಿಯಬೇಕು. ಅದುವೆ ಶರಣ ಸಂಸ್ಕೃತಿಯ ಕಾಯಕವಾಗಿದೆ. ಆ ಕಾಯಕವೇ ಕೈಲಾಸವೆನಿಸುತ್ತದೆ. ಶಿಕ್ಷಣಕ್ರಮದಲ್ಲಿ ಸಹಜವಾಗಿ ಸುಧಾರಣೆಯಾಗುತ್ತದೆ. ಔದ್ಯೋಗಿಕ ಕ್ಷೇತ್ರದಲ್ಲಿಯೂ ಸಹಜವಾಗಿ ಬೆಳವಣಿಗೆಯಾಗುತ್ತದೆ. ಸ್ವದೇಶಿ ಉತ್ಪನ್ನಗಳಿಗೆ ಒಳ್ಳೆಯ ಮಾರುಕಟ್ಟೆ ದೊರೆತು ತರುಣರಲ್ಲಿ ಶಿಸ್ತು ಪ್ರಾಮಾಣಿಕತೆ ಸ್ಪರ್ಧಾತ್ಮಕ ಮನೋಭಾವ ಬೆಳೆದುಬರುತ್ತದೆ. ಇದೆಲ್ಲವೂ ನೈತಿಕ ನೆಲಗಟ್ಟಿನ ಮೇಲೆ ನಡೆಯುವಂತಾಗಬೇಕು. ಸಾಮಾಜಿಕ ಸಂಘಟನೆ ಗಟ್ಟಿಗೊಂಡು, ಮಾನವೀಯ ಮೌಲ್ಯಗಳು ಹಾಸುಹೊಕ್ಕಾದಾಗ ಜನಪದ ಸಾಹಿತ್ಯ ಸಂಸ್ಕೃತಿ ಜಗತ್ತಿಗೆ ಮಾರ್ಗದರ್ಶನ ನೀಡಬಲ್ಲದು. ಅಂಥ ಕಾರ್ಯವನ್ನು ಜಾನಪದ ಅಕಾಡೆಮಿ ಕೈಗೆತ್ತಿಕೊಂಡು ಜಾನಪದದ ಸೊಗಡನ್ನು ಬಿತ್ತರಿಸುವಂತಾಗಲಿ ಎಂದು ಹಾರೈಸುತ್ತ ಈ ನಿಟ್ಟಿನಲ್ಲಿ ಜಾನಪದ ವಿದ್ವಾಂಸರು ಕಾರ್ಯೋನ್ಮುಖರಾಗುವಂತಾಗಲೆಂದು ಹೃದಯಾರೆ ಹಾರೈಸುವೆ.

'ಜಾತಿ ಹೀನನ ಮನೆಯ ಜ್ಯೋತಿ ತಾ ಹೀನವೆ?
ಜಾತಿ ವಿಜಾತಿಯೆನಬೇಡ' ದೇವನೊಲಿದಾತನೆ
ಜಾತ ಸರ್ವಜ್ಞ'

ಈ ಹೊತ್ತಿನ ೩೧-೧೨-೨೦೦೭ರ ವಿಚಾರ ಸಂಕಿರಣದಲ್ಲಿ ನಡೆಯಲಿರುವ ಗೋಷ್ಠಿಗಳು ಯಶಸ್ವಿಯಾಗಿ ಜರುಗಲೆಂದು ಶುಭಾಶಯಗಳನ್ನು ಕೋರುವೆ ಈ ಅವಕಾಶ ನೀಡಿದ ಶ್ರೀ ಮುನಿರಾಜು ಮತ್ತು ಶ್ರೀ ಗವೀಶ ಹಿರೇಮಠರಿಗೂ ನನ್ನ ವಂದನೆಗಳು.

❖

# ಅಧ್ಯಕ್ಷೀಯ ಭಾಷಣ

ಕೆರೆಮನೆ ಶಂಭು ಹೆಗಡೆ

◆

ವಿಚಾರ ಸಂಕಿರಣ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಗುಲಬರ್ಗಾ ವಿಶ್ವವಿದ್ಯಾಲಯದ ಕುಲಸಚಿವರಾದ ಮಾನ್ಯ ಟಿ. ಬಿ. ಕೋಳಿಯವರೆ, ಪ್ರಾಸ್ತಾವಿಕ ಮಾತನಾಡಿದ ಡಾ. ವ್ಹಿ. ಜಿ. ಪೂಜಾರ ಅವರೆ, ಅತಿಥಿ ಉಪನ್ಯಾಸ ನೀಡಿದ ಡಾ. ಎಂ. ಎಸ್. ಲಠ್ಠೆ ಅವರೆ, "ಜಾಗತೀಕರಣ ಮತ್ತು ಜಾನಪದ ಕಲೆಗಳು" ವಿಷಯದಲ್ಲಿ ದೀರ್ಘವಾಗಿ ವಿವರವಾಗಿ ಮಾತನಾಡುತ್ತ ಉಪಯುಕ್ತವಾದ ವಿಚಾರಗಳನ್ನು ತಿಳಿಸಿದ ವಿದ್ವಾಂಸರೆ, ಗುಲಬರ್ಗಾ ವಿಶ್ವವಿದ್ಯಾಲಯ ಶಿಕ್ಷಕರೆ, ಶಿಕ್ಷಕೇತರ ವಿದ್ಯಾರ್ಥಿ-ವಿದ್ಯಾರ್ಥಿನಿಯರೆ, ನಿಮ್ಮೆಲ್ಲರಿಗೂ ನಮಸ್ಕಾರ.

ಇತ್ತೀಚಿನ ದಿನಗಳಲ್ಲಿ ಜಾಗತೀಕರಣ ಎಂಬ ಭೂತ ನಮ್ಮೆಲ್ಲರನ್ನೂ ಕಾಡುತ್ತಿದೆ. ಜಗತ್ತಿನ ಪ್ರಬಲ ರಾಷ್ಟ್ರಗಳ ಉದ್ಯಮ, ಉತ್ಪಾದನೆ, ಆಲೋಚನೆ, ರಾಜಕೀಯ ವ್ಯವಸ್ಥೆ, ಕಲೆ, ರಂಗಭೂಮಿ, ಸಾಹಿತ್ಯ, ಸಂಸ್ಕೃತಿ, ಬದುಕಿನ ವಿಧಾನ ಇವೆಲ್ಲ ಸಣ್ಣ-ಪುಟ್ಟ ದೇಶಗಳ ಮೇಲೆ ಪ್ರಭಾವ ಬೀರಿ ಸಣ್ಣ-ಪುಟ್ಟ ದೇಶಗಳ ಅಸ್ತಿತ್ವವೆಲ್ಲ ನಶಿಸಿಹೋಗುತ್ತಿವೆ ಎಂಬ ಭಯ ಭೂತವಾಗಿ ನಮ್ಮನ್ನು ಮೆಟ್ಟಿಕೊಂಡಿವೆ. ಇದರಿಂದಾಗಿ ಸ್ಥಳೀಯ ಜೀವನ ವಿಧಾನಗಳೆಲ್ಲ ಬೆಲೆ ಕಳೆದುಕೊಳ್ಳುತ್ತಿವೆ ಎನ್ನಿಸಿಬಿಟ್ಟಿವೆ. ಜಗತ್ತಿನ ಯಜಮಾನ ರಾಷ್ಟ್ರಗಳ ಯಜಮಾನಿಕೆ ಸಿಕ್ಕಿ ನಾವು ಅವುಗಳ ಗುಲಾಮರಾಗುತ್ತಿದ್ದೇವೆ ಎಂದು ಕೊಳ್ಳುತ್ತಿದ್ದೇವೆ. ಈ ಮನಸ್ಥಿತಿಯಿಂದಾಗಿ ಒಟ್ಟಾರೆಯಾಗಿ ಎರಡು ಅಲೆಗಳು ಕಂಡುಬರುತ್ತಿವೆ. ಜಾಗತೀಕರಣ ತುಂಬ ಅಪಾಯದ್ದು ಅದನ್ನು ಸಾರಾಸಗಟಾಗಿ ವಿರೋಧಿಸಿ ನಿರಾಕರಿಸಬೇಕೆನ್ನುವ ಧೋರಣೆ ಒಂದು ಕಡೆಗೆ, ಜಾಗತೀಕರಣ ಅನಿವಾರ್ಯ, ಶ್ರೇಷ್ಠವಾದುದನ್ನು ಬರಮಾಡಿಕೊಳ್ಳುವ ಅದೊಂದು ಸದವಕಾಶ ಆದ್ದರಿಂದ ಅದನ್ನು ಗೌರವದಿಂದ ಬರಮಾಡಿಕೊಂಡು ಅಂಗೀಕರಿಸಬೇಕೆಂಬುದು ಇನ್ನೊಂದು ಮನೋಧರ್ಮ, ಎರಡೂ ಅತಿಯಾದುದೆಂಬುದನ್ನು ಮರೆಯುವಂತಿಲ್ಲ.

ಹಾಗೆ ನೋಡಿದರೆ ಜಗತ್ತಿನ ಸರ್ವಶ್ರೇಷ್ಠವಾದುದಕ್ಕೆ ಮಾರು ಹೋಗಿ ಅದನ್ನು ಸ್ವೀಕರಿಸುವುದು ಇಂದು ನಿನ್ನೆಯ ಕಾರ್ಯವಲ್ಲ. ಅಂಥ ಶ್ರೇಷ್ಠವಾದುದೆಂಬ ಭ್ರಮೆಗೆ ಒಳಗಾಗಿ ನಮ್ಮ ತನವನ್ನು ಕಳೆದುಕೊಂಡ ಉದಾಹರಣೆಗಳೂ ಇವೆ. ಅಂಥವನ್ನು ನೋಡಿ ನಮ್ಮದಾದದ್ದನ್ನು ಸುಧಾರಿಸಿಕೊಂಡ ಉದಾಹರಣೆಗಳೂ ಇವೆ. ಅಸ್ತಿತ್ವ ನಾಶವಾದುದೂ ಇದೆ. ಅಸ್ತಿತ್ವ ಬಲಶಾಲಿಯಾದ ಉದಾಹರಣೆಯೂ ಇದೆ. ಆದ್ದರಿಂದ ಜಾಗತೀಕರಣ ಎನ್ನುವುದನ್ನು ಪೂರ್ತಿ ಅಪಾಯಕಾರಿಯೆಂದು ನಿರಾಕರಿಸುವುದೂ ವಿಹಿತ ಅಲ್ಲ; ಅದೇ ಶ್ರೇಷ್ಠ ಎಂದು ಆಲಂಗಿಸಿಕೊಳ್ಳುವುದೂ ಸುರಕ್ಷಿತವಲ್ಲ. ಈ ವಿಷಯದಲ್ಲಿ ವಿವೇಚನಾ ಪೂರ್ಣವಾದ ಒಂದು ನಿಲುವು ಅತ್ಯಗತ್ಯ ಎಂಬುದನ್ನು ಮನವರಿಕೆ ಮಾಡಿಕೊಳ್ಳಬೇಕಾಗುತ್ತದೆ.

ಜಾಗತೀಕರಣವೊಂದು ನೈಸರ್ಗಿಕ ಪ್ರಕ್ರಿಯೆ ಎಂದೇ ಇವತ್ತಿನ ಸಂದರ್ಭದಲ್ಲಿ ಭಾವಿಸೋಣ. ಒಂದು ಕಾಲದಲ್ಲಿ ಜಗತ್ತಿನ ಖಂಡ-ಖಂಡಗಳೆಲ್ಲ ಪರಸ್ಪರವಾಗಿ ನಿರಂತರ ಪ್ರತ್ಯೇಕ-ಪ್ರತ್ಯೇಕವಾಗಿದ್ದವು. ಇವುಗಳ ನಡುವೆ ಸಂಪರ್ಕಗಳು, ಸಾರಿಗೆಗಳು ಇಲ್ಲವಾಗಿದ್ದವು. ಒಂದರ ಪ್ರಭಾವ ಇನ್ನೊಂದರ ಮೇಲೆ ಉಂಟಾಗುವ ಸಂದರ್ಭವೇ ಇರಲಿಲ್ಲ. ಆದರೆ ಇಂದು ಹಾಗಲ್ಲ ವಿಜ್ಞಾನ ಮತ್ತು ತಂತ್ರಜ್ಞಾನದ ಬೆಳವಣಿಗೆಯಿಂದ ಜಗತ್ತು ಸಣ್ಣದಾಗಿದೆ. ಸಾರಿಗೆ-ಸಂಪರ್ಕಗಳು ನಿರ್ಮಾಣಗೊಂಡಿವೆ. ಕೆಲವೇ ಕೆಲವು ಕ್ಷಣಗಳಲ್ಲಿ ಜಗತ್ತಿನ ಯಾವ ಮೂಲೆಯನ್ನಾದರೂ ಸಂಪರ್ಕಿಸಬಹುದು. ಮನುಷ್ಯ ಪ್ರವೇಶಿಸದ ಭೂಗೋಲ ಭಾಗ ಇಂದು ಇರಲಾರದು. ಖಂಡಾಂತರ್ಗತ ಸಂಪರ್ಕವಷ್ಟೇ ಅಲ್ಲ ಗ್ರಹಾಂತರ್ಗತ ಸಂಪರ್ಕ-ಸಂಬಂಧವೂ ಇಂದು ಸಾಧ್ಯವಾಗುತ್ತಿದೆ. ಇಂಥ ಪರಿಸ್ಥಿತಿಯಲ್ಲಿ ಪರಸ್ಪರ ಪ್ರಭಾವ, ಪ್ರೇರಣೆ, ಮಾರ್ಗದರ್ಶನ, ಆಕರ್ಷಣೆ, ಕೊಡು-ಕೊಳ್ಳುವಿಕೆ ತೀರ ಸಹಜ ಮತ್ತು ನೈಸರ್ಗಿಕ. ಆದರೆ ಆರ್ಥಿಕವಾಗಿ, ರಾಜಕೀಯವಾಗಿ, ವಿಜ್ಞಾನ ಮತ್ತು ತಂತ್ರಜ್ಞಾನ ದೃಷ್ಟಿಯಿಂದ ಜಾಗತಿಕವಾಗಿ ಬಲಶಾಲಿಯಾದ ರಾಷ್ಟ್ರ ತನ್ನ ಉತ್ಪಾದನೆ ಮತ್ತು ಆಲೋಚನೆಗಳೇ ಶ್ರೇಷ್ಠ ಎಂಬ ಭ್ರಮೆ ನಿರ್ಮಿಸಿ ಅವನ್ನು ಅಭಿವೃದ್ಧಿಶೀಲ ರಾಷ್ಟ್ರಗಳ ಮೇಲೆ ಹೇರುವುದು ಮಾತ್ರ ಅಮಾನವೀಯ ಮತ್ತು ಖಂಡನೀಯ. ಈ ವಿಷಯದಲ್ಲಿ ಎಚ್ಚರವಾಗಿರುವುದು ಅಗತ್ಯ, ಆದರಿಂದ ಜಾಗತೀಕರಣದ ಭಯ ಕೇವಲ ಭಾರತೀಯರಿಗೆ ಮಾತ್ರವಲ್ಲ; ಇಡೀ ಜಗತ್ತಿನ ಸಣ್ಣ-ಮಟ್ಟ ರಾಷ್ಟ್ರದವರಿಗೂ ಇದೆ.

ಒಂದೆರಡು ನಿದರ್ಶನವನ್ನು ನೋಡಬಹುದು. ಇಂದು ಭಾರತೀಯ ಚಲನಚಿತ್ರ ಇಂದು ಹೆಚ್ಚು-ಹೆಚ್ಚು ಜಾಗತೀಕರಣಗೊಂಡ ಕ್ಷೇತ್ರವಾಗಿದೆ. ಕ್ರೀಡಾ ಜಗತ್ತಿನಲ್ಲಿಯೂ ಹಾಗೇ, ಕ್ರಿಕೆಟ್‌ನಂಥ ಜಾಗತಿಕ ಕ್ರೀಡೆಗಳಿಗೆ ಮಾರುಹೋದ ನಾವು ಸ್ಥಳೀಯವಾದ ಅನೇಕ ಕ್ರೀಡೆಗಳನ್ನು ಸಾಯಿಸಿದ್ದೇವೆ. ನೃತ್ಯ, ಸಂಗೀತ ಕ್ಷೇತ್ರಗಳೂ ಇವಕ್ಕೆ ಹೊರತಲ್ಲ. ಈ ಎಲ್ಲ ವಿಷಯಗಳಲ್ಲಿ ಮಹಾತ್ಮಾಗಾಂಧೀಜಿಯವರಂಥವರ ಆದರ್ಶ, ಚಳವಳಿ, ಉಪದೇಶ ನಮಗೆ

ಪಥ್ಯವಾಗಿಲ್ಲ. ಅವು ಮಾಡಬೇಕಾದ ಪರಿಣಾಮ ಮಾಡಿಲ್ಲ. ಅವರ ದೇಶೀಯ ಕಲ್ಪನೆಗಳಿಗೆ ನಾವು ಮನ್ನಣೆ ಕೊಟ್ಟಿಲ್ಲ. ಬದಲು ವಿದೇಶದದ್ದೆಲ್ಲ ಒಳ್ಳೆಯದು, ಸ್ವದೇಶದದ್ದೆಲ್ಲ ಕನಿಷ್ಟ ಎಂಬ ಮನೋಧರ್ಮವನ್ನು ಬೆಳೆಸಿಕೊಂಡೆವು. ಇದರ ಪರಿಣಾಮವನ್ನು ಇಂದು ನಾವು ಬದುಕಿನ ಪ್ರತಿಯೊಂದು ಕ್ಷೇತ್ರದಲ್ಲಿಯೂ ಅನುಭವಿಸುತ್ತಿದ್ದೇವೆ.

ಜಾಗತೀಕರಣಕ್ಕೆ ಬಲಿಯಾಗುವವರಲ್ಲಿ ಬಹುಷಃ ಭಾರತೀಯರಾದ ನಾವೇ ಮುಂದಾಗಿರಬಹುದು. ಇದಕ್ಕೆ ವಿವೇಚನಾ ರಹಿತವಾದ ನಮ್ಮ ಮನೋಧರ್ಮವೇ ಕಾರಣ. ನಮ್ಮ ಆತ್ಮವಿಶ್ವಾಸದ ಕೊರತೆ ಎದ್ದು ಕಾಣುತ್ತದೆ. ನಮ್ಮತನದಲ್ಲಿರುವ ಶ್ರೇಷ್ಠಗುಣಗಳನ್ನು ಗುರುತಿಸುವಲ್ಲಿ ಅನೇಕ ಸಲ ನಾವು ಸೋಲುತ್ತೇವೆ. ಸುಲಭವಾಗಿ ಅನ್ಯರ ಆಕರ್ಷಣೆಗೆ ಅನುಕರಣೆಗೆ ಒಳಗಾಗುತ್ತೇವೆ. ಇದರಿಂದಾಗಿ ನಾವು ದೇಶೀಯವಾದ ಅನೇಕ ಶ್ರೇಷ್ಠ ಸಂಗತಿಗಳಿಂದ ವಂಚಿತವಾದ ಸಂದರ್ಭಗಳಿವೆ.

ಈ ವಿಷಯದಲ್ಲಿ ನಮ್ಮ ಜಾನಪದ ಕಲಾಪ್ರಕಾರಗಳೂ ಹೊರತಾಗಿಲ್ಲ. ಜಗತ್ತಿನ ಬಹುಮುಖ್ಯ ಖಂಡಗಳಲ್ಲಿ ಏಶಿಯಾಖಂಡ ಬಹಳ ಪ್ರಾಚೀನ ಕಾಲದಿಂದಲೇ ತನ್ನದೇ ಆದ ಜೀವನ ವಿಧಾನವನ್ನು ರೂಪಿಸಿಕೊಂಡು ಅನುಸರಿಸುತ್ತ ಬಂದಿದೆ. ಅನುಕ್ರಮಣಿಕೆಯಲ್ಲಿ ಭರತ ಖಂಡ, ದೇಶದ ಎಲ್ಲಾ ರಾಜ್ಯಗಳು, ರಾಜ್ಯಗಳ ಪ್ರಾದೇಶಿಕ ಪ್ರಭೇದಗಳು ಎಲ್ಲವೂ ಸ್ಥಳೀಯವಾದ ಜೀವನ ವಿಧಾನವನ್ನೂ ಅದನ್ನು ಅನುಸರಿಸಿ ಬಂದ ಕಲಾಪ್ರಕಾರವನ್ನೂ ರೂಪಿಸಿಕೊಂಡು ಬಂದಿವೆ. ಖಂಡ ಒಂದು ತುದಿಯ ಘಟಕವಾದರೆ ಗ್ರಾಮ, ಮುಜರೆಗಳು ಇನ್ನೊಂದು ಘಟಕವಾಗಬಹುದು. ಇಂದು ಈ ಎಲ್ಲ ಮಟ್ಟದ ಜೀವನ ವಿಧಾನಗಳು ಜಾಗತೀಕರಣದ ಅಪಾಯಕ್ಕೆ ಸಿಲುಕಿ ನಾಶವಾಗಿಬಿಡಬಹುದಾದ ಸೂಚನೆಯನ್ನು ನೀಡುತ್ತಲಿವೆ.

ಜಾಗತೀಕರಣವೆನ್ನುವುದು ವಿಶ್ವಮಟ್ಟದ ಸ್ಪರ್ಧೆ, ಪೈಪೋಟಿ ಪ್ರಭಾವಕ್ಕೆ ಇನ್ನೊಂದು ಹೆಸರು. ಈ ಅರ್ಥದಲ್ಲಿ ಜಾಗತಿಕ ಮಟ್ಟದ ಸಂಗತಿಗಳೊಂದಿಗೆ ಸ್ಪರ್ಧೆ ಇರುವ ಹಾಗೆಯೇ ಸ್ಥಳೀಯವಾಗಿಯೂ ಬಲಶಾಲಿಗಳಾಗಿ ಬೆಳೆದ ಕಲಾಮಾಧ್ಯಮಗಳ ಜೊತೆಗೆ ನಮ್ಮ ಸ್ಪರ್ಧೆ ಇದೆ ಎಂಬುದನ್ನು ಮರೆಯಬಾರದು. ಇದನ್ನು ಪರಕೀಯ ಸ್ಪರ್ಧೆಯಾಗಿ ವಿರೋಧಿಸುವುದಲ್ಲ. ಇವುಗಳನ್ನು ಜಾನಪದ ಕಲಾಪ್ರಕಾರಗಳು ಗುಣಾತ್ಮಕವಾಗಿ ಎದುರಿಸಬೇಕಾಗಿದೆ. ಇಂದು ಭಾರತೀಯವಾದ ಅಭಿಜಾತ ಕಲಾಪ್ರಕಾರಗಳೆರಡು ಹೇಳಿಸಿಕೊಂಡ ಸಂಗೀತ, ನೃತ್ಯ, ವಾದನದು ಮುಂತಾದವು ಜಾಗತಿಕ ಪೈಪೋಟಿಗೆ ಸಿದ್ಧವಾಗುತ್ತಿವೆ. ಈ ಪೈಪೋಟಿಗೆ ಅವುಗಳ ಸಾಮರ್ಥ್ಯವೇ ಕಾರಣ. ಜಾನಪದ ಕಲಾಪ್ರಕಾರಗಳು ಇಂಥ ಶಕ್ತಿಯನ್ನು ವೃದ್ಧಿಸಿ ಕೊಳ್ಳಬೇಕಾಗಿದೆ. ಭಾರತೀಯವಾದ ಅಭಿಜಾತ ಕಲಾಪ್ರಕಾರಗಳ ನಡುವೆ ಜಾನಪದ ಕಲಾಪ್ರಕಾರಗಳು ತಮ್ಮ ಅಸ್ತಿತ್ವ ಮತ್ತು ಅಭಿವೃದ್ಧಿಗಾಗಿ ಹೋರಾಡಬೇಕಾಗಿವೆ.

ಜಾನಪದ ಕಲಾಪ್ರಕಾರಗಳೆಲ್ಲ ಆಯಾ ಪ್ರದೇಶದ ಜೀವನ ವಿಧಾನದ ಹಿನ್ನೆಲೆಯಲ್ಲಿ ಹುಟ್ಟಿವೆ ಎಂಬುದು ನಿಜ. ಈ ಕಾರಣಕ್ಕಾಗಿ ಅಂಥ ಕಲಾಪ್ರಕಾರವನ್ನು ಬದುಕಿಸಿಕೊಳ್ಳಲು ಅಂಥ ಜೀವನ ವಿಧಾನವನ್ನು ಕಾಪಾಡಿಕೊಳ್ಳಬೇಕೆಂಬ ವಾದವಿದೆ. ಜಾನಪದ ಕಲಾಪ್ರಕಾರವೊಂದರ ಹುಟ್ಟಿಗೆ ಕಾರಣವಾದ ಜೀವನಕ್ರಮ ನಶಿಸಿಬಿಟ್ಟರೆ ಅಂಥ ಜೀವನಕ್ರಮದಿಂದ ಉದ್ಭವವಾದ ಕಲಾಪ್ರಕಾರವೂ ನಶಿಸಿ ಹೋಗುತ್ತದೆಂಬ ತಿಳುವಳಿಕೆ ಇದೆ. ಉದಾಹರಣೆಗೆ ಚೌಡಿಕೆಯಂಥ ಕಲಾಪ್ರಕಾರ ದೇವದಾಸಿ ಪದ್ಧತಿಯಂತಹ ಜೀವನ ಕ್ರಮದಿಂದ ಹುಟ್ಟಿದಂತಹುದು. ದೇವದಾಸಿ ಪದ್ಧತಿ ನಶಿಸಿದರೆ ಚೌಡಿಕೆಯಂಬ ಜಾನಪದ ಕಲಾಪ್ರಕಾರವೂ ನಶಿಸುತ್ತದೆ. ಅಂಥ ಸಂದರ್ಭದಲ್ಲಿ ಚೌಡಿಕೆಯೆನ್ನುವ ಕಲಾಪ್ರಕಾರವನ್ನು ರಕ್ಷಿಸಿಕೊಳ್ಳಲು ದೇವದಾಸಿ ಪದ್ಧತಿಯನ್ನೂ ಉಳಿಸಿಕೊಳ್ಳಬೇಕಾಗುತ್ತದೆ. ಬೀಸುವ, ಕುಟ್ಟುವ ಹಾಡುಗಳನ್ನು ಉಳಿಸಿಕೊಳ್ಳಲು ಬೀಸುವಕಲ್ಲು, ಕುಟ್ಟುವ ಉಪಕರಣಗಳನ್ನು ರಕ್ಷಿಸಿಕೊಳ್ಳಬೇಕೆನ್ನುವ ವಾದದ ಹಾಗೆಯೇ, ಈ ವಾದವನ್ನೇ ಅವಲಂಬಿಸಿದರೆ ಬದಲಾಗುತ್ತಿರುವ ಜೀವನಕ್ರಮದಲ್ಲಿ ಯಾವ ಜಾನಪದ ಕಲಾಪ್ರಕಾರವೂ ಉಳಿಯಲು ಸಾಧ್ಯವಿಲ್ಲ.

ಆದರೆ ಜಾನಪದ ಕಲಾಪ್ರಕಾರವನ್ನು ಉಳಿಸಿ, ಬೆಳೆಸಿ, ಅಭಿಜಾತ ಕಲಾಪ್ರಕಾರಗಳ ಸ್ಪರ್ಧೆಗೆ ಎದುರಾಗುವ ಕ್ರಮ ಇದಲ್ಲ. ಜಾಗತೀಕರಣದ ವಿರುದ್ಧ ಹೋರಾಡುವ ರೀತಿಯೂ ಅಲ್ಲ. ಇದರ ಬದಲಿಗೆ ಆ ಆ ಜಾನಪದ ಕಲಾಪ್ರಕಾರಗಳನ್ನು ಅವುಗಳ ಹುಟ್ಟಿನ ಹಿನ್ನೆಲೆ ಮತ್ತು ಸಂದರ್ಭಗಳನ್ನು ಬೇರ್ಪಡಿಸಿ ಪೋಷಿಸಬೇಕಾಗುತ್ತದೆ. ಹೀಗೆ ಅವುಗಳನ್ನು ಬೇರ್ಪಡಿಸಿದಾಗ ಅವು ಬದುಕುವ ಲಕ್ಷಣಗಳನ್ನು ತೋರಿಸಿದರೆ ಸ್ವತಂತ್ರವಾಗಿ ಬದುಕುವ ಅಂಥವಕ್ಕೆ ಕಲಾಸಾಮರ್ಥ್ಯ ಇದೆ ಎಂದು ಅರ್ಥ. ಬೇರ್ಪಡಿಸಿದಾಗ ಸತ್ತುಹೋಗಿ ಬಿಟ್ಟರೆ ಸಾಯಲಿಕ್ಕೇ ಯೋಗ್ಯವಾದವು ಎಂದು ಅರ್ಥ. ಜೀವನದ ಸಂದರ್ಭ ಮತ್ತು ಹಿನ್ನೆಲೆಯಿಂದ ಹುಟ್ಟಿದ ಜಾನಪದ ಕಲಾಪ್ರಕಾರಗಳ ಗಾಯನಶಕ್ತಿ, ಲಯಶಕ್ತಿ, ಸಾಹಿತ್ಯಶಕ್ತಿ ಮುಂತಾದವುಗಳನ್ನು ಗುರುತಿಸಿ ಪ್ರತ್ಯೇಕಿಸಿ ಅಂಥ ಪ್ರಕಾರಗಳನ್ನು ಅಭಿವೃದ್ಧಿಪಡಿಸಿ ಜಾಗತಿಕ ಪೈಪೋಟಿಗೆ ಸಜ್ಜುಗೊಳಿಸಬೇಕಾಗುತ್ತದೆ. ಅಭಿಜಾತವೆನಿಸಿಕೊಂಡ ಕಲಾಪ್ರಕಾರಗಳೆಲ್ಲ ಹೀಗೇ ಬೆಳೆದು ನಿಂತಿವೆ ಎಂಬುದು ನನ್ನ ನಂಬಿಗೆ.

ಜಾನಪದ ಕಲಾಪ್ರಕಾರಗಳ ಸದ್ಯದ ಸ್ಥಿತಿ ಇಂಥ ವಿಶಾಲವಾದ ಸ್ಪರ್ಧೆಗೆ ಸಶಕ್ತವಾದುದಲ್ಲ. ಹಾಗಾಗಿಯೇ ಇಂದು ಆ ಕಲಾಪ್ರಕಾರಗಳ ಅಸ್ತಿತ್ವದ ಬಗ್ಗೆ, ಭವಿಷ್ಯದ ಬಗ್ಗೆ ಅನುಮಾನಗಳು, ಆತಂಕಗಳು ಉಂಟಾಗುವುದು ಸಹಜ. ಎಲ್ಲರೂ ಜಾಗತೀಕರಣದ ಭೂತದ ಬಗ್ಗೆ ವೈಭವೀಕರಿಸಿ ಮಾತನಾಡುವಾಗ ಜಾನಪದ ಕಲೆಯನ್ನು ನೆಚ್ಚಿಕೊಂಡವರಿಗೆ ಭಯವಾಗುವುದೂ ಸಹಜವೇ. ಕೆಲವು ಸಲ ಜಾಗತೀಕರಣವೆಂಬುದು ಒಂದು ನೆಪವಾಗಿಯೂ ಪರಿಣಮಿಸಬಹುದು. ಅದೇ ಕಾರಣವಾಗಿಯೂ ಒದಗಬಹುದು.

ಆದ್ದರಿಂದ ಜಾಗತೀಕರಣವನ್ನು ಎದುರಿಸಲಿಕ್ಕಾಗಿ ಅಲ್ಲ; ತನ್ನನ್ನು ತಾನು ಬೆಳೆಯಬೇಕೆಂಬ ಸಂಕಲ್ಪ ಮುಖ್ಯವಾಗುತ್ತದೆ. ಜಾನಪದ ಕಲೆಯನ್ನು ಹಚ್ಚಿಕೊಂಡ, ನೆಚ್ಚಿಕೊಂಡ ಹಲವು ನಮ್ಮ ಕಲಾವಿದ ಮಿತ್ರರು ತಮ್ಮ ಬಡತನವನ್ನೂ ಅನಕ್ಷರತೆಯನ್ನೂ ನೆಪವಾಗಿ ಮುಂದೊಡ್ಡುವ ಸಂದರ್ಭಗಳಿವೆ. ಹಾಗೆ ನೋಡಿದರೆ ನನ್ನ ತಲೆಮಾರಿನ ಅನೇಕ ಯಕ್ಷಗಾನ ಕಲಾವಿದರು ಸಾಂಪತ್ತಿಕವಾಗಿ ದರಿದ್ರಾಗಿಯೇ ಇದ್ದರು. ಅನಕ್ಷರಸ್ಥರೂ ಹೌದೇ ಹೌದು. ಆದರೆ ಈ ಸ್ಥಿತಿಗತಿ ಅವರ ಕಲಾಮಾಧ್ಯಮದ ಬೆಳವಣಿಗೆಗೆ ಆತಂಕವಾಗಿ ಪರಿಣಮಿಸಿದ ಉದಾಹರಣೆಗಳಿಲ್ಲ. ಇಂಥ ಸ್ಥಿತಿಗತಿಯನ್ನು ಮಿಕ್ಕಿ ಮೀರಿ ಕಲಾವಿದ ಬೆಳೆಯಬೇಕಾಗಿದೆ. ಇಂಥ ಆತ್ಮವಿಶ್ವಾಸ ಜಾನಪದ ಕಲಾವಿದರಿಗೆ ಅಗತ್ಯ. ಅಭಿಜಾತ ಕಲಾವಿದರ ಶ್ರಮ, ಪ್ರಯತ್ನ, ಸಾಧನೆ ಜಾನಪದ ಕಲಾವಿದರಿಗೆ ಮಾದರಿಯಾಗಬೇಕಾಗಿದೆ. ಸರಕಾರ ಅಥವಾ ಅಕಾಡೆಮಿ ನಮ್ಮನ್ನು ಉಳಿಸಿ ಬೆಳೆಸುತ್ತದೆ ಎಂದು ನಂಬಿಕೊಳ್ಳಬೇಕಾಗಿಲ್ಲ. ಸಾಂದರ್ಭಿಕವಾಗಿ ಅವು ನೆರವಾಗಬಹುದು. ಅದನ್ನೇ ನೆಚ್ಚಿಕೊಂಡು ಕಲಾವಿದ ಮಿತ್ರರು ನಿಷ್ಕ್ರಿಯಗೊಳ್ಳಬೇಕಾಗಿಲ್ಲ. ತಮ್ಮ ಕಲಾಶಕ್ತಿಯನ್ನು ಕುಂಠಿತಗೊಳಿಸಿಕೊಳ್ಳಬೇಕಾಗಿಲ್ಲ. ಇದು ಜಾಗತೀಕರಣಕ್ಕೆ ಒಂದು ಪರಿಹಾರ ಆಗಬಹುದು ಎಂದು ಹೇಳುತ್ತ ಕೊನೆಯದಾಗಿ ಈ ಅವಕಾಶ ಕಲ್ಪಿಸಿಕೊಟ್ಟ ಗುಲಬರ್ಗಾ ವಿಶ್ವವಿದ್ಯಾಲಯದ ಅಧಿಕಾರಿಗಳಿಗೆ ನಮ್ಮ ಅಕಾಡೆಮಿ ಸದಸ್ಯ ಸ್ನೇಹಿತ ಗವೀಶ ಅವರಿಗೂ ಕೃತಜ್ಞತೆ ಹೇಳುತ್ತ ನನ್ನ ಅಧ್ಯಕ್ಷೀಯ ಭಾಷಣ ಮುಗಿಸುತ್ತೇನೆ.

❖

# ಗೋಷ್ಠಿ : ೧

# ಜನಪದ ಪ್ರದರ್ಶಕ ಕಲೆಗಳು ಮತ್ತು ಜಾಗತೀಕರಣ

ಡಾ. ಜಿ. ಆರ್. ತಿಪ್ಪೇಸ್ವಾಮಿ

◆

ಕಲೆಯನ್ನು ಕುರಿತಂತೆ ಅನೇಕರು ಅನೇಕ ರೀತಿಯಲ್ಲಿ ವ್ಯಾಖ್ಯಾನ ಮಾಡಿದ್ದಾರೆ. ಟಾಲ್‌ಸ್ಟಾಯ್ (ಮಾನವನ ಕಲ್ಯಾಣಕ್ಕೆ ಹೇತುವಾದುದು) ಹೆಗೆಲ್ (ಮಾನವನ ಚಿತ್ರರಂಗ ದರ್ಶನವೇ ಕಲೆ) ಬಾಲ್‌ಜಾಕ್ (ನಿಸರ್ಗದ ......... ಕಲೆ) ಅರವಿಂದರು (ಆತ್ಮ ದರ್ಶನ ಮೂಡಿಸುವುದೇ ಕಲೆ) ಮುಂತಾದವರು ಕಲೆಯನ್ನು ಕುರಿತು ಮಾತನಾಡಿದ್ದಾರೆ. ಅನೇಕರು ಕಲೆ ಎಂಬುದು 'ಸೌಂದರ್ಯ ದರ್ಶನ' ಎಂದದ್ದುಂಟು.

ಕಲಾವಿದ ಮತ್ತು ನೋಡುಗರಿಗೆ ಯಾವುದು ಸಂತಸವನ್ನುಂಟು ಮಾಡುತ್ತದೋ ಅದು ಕಲೆ. ಇದು ಎಲ್ಲಾ ರೀತಿಯ ಕಲೆಗಳಿಗೂ ಅನ್ವಯವಾಗುವ ಮಾತು. ಜನಪದ ಕಲೆಗಳೂ ಇದಕ್ಕೆ ಹೊರತಾಗಿಲ್ಲ. ಮನಸ್ಸಿಗೆ ನೆಮ್ಮದಿಯನ್ನುಂಟು ಮಾಡುವುದರ ಜೊತೆಗೆ ಮನುಷ್ಯನಲ್ಲಿ ಸಂಸ್ಕಾರ ಉಂಟಾಗುವುದಕ್ಕೂ ಕಲೆ ಕಾರಣವಾಗಿರುತ್ತದೆ. ಆಧುನಿಕ ಯುಗದಲ್ಲಿ ಕೆಲವು ನಾಗರಿಕವೆನ್ನಬಹುದಾದ ಸಾಧನಗಳು ಮಾಡಲಾಗದ ಕೆಲಸವನ್ನು ಜನಪದ ಕಲೆಗಳ ಮಾಡಿ ತೋರಿಸುತ್ತವೆ.

" In Gandhijis times mass communication was achieved by non mass media" ಎಂಬ ಮಾತೊಂದಿದೆ. ಗಾಂಧೀಜಿಯ ಕಾಲದಲ್ಲಿ ಇದ್ದ ಸುಮಾರು ನೂರು ಪತ್ರಿಕೆಗಳು ಆರು ರೇಡಿಯೋ ಕೇಂದ್ರಗಳು ಬ್ರಿಟಿಷರ ವರ್ಚಸ್ಸಿನಲ್ಲಿ ಇದ್ದಂಥವು. ಅಂತಹ ಅತೀ ಬಲಿಷ್ಠ ಆಂಗ್ಲರ ಮೇಲೆ ಬಂಡಾಯ ಹೂಡಲು ಬಾಲ ಗಂಗಾಧರ ತಿಲಕರಿಗೆ, ಗಾಂಧೀಜಿಯವರಿಗೆ, ಪ್ರೇರಣೆ ಒದಗಿ ಬಂದವೆಂದರೆ ಗ್ರಾಮೀಣ ದರ್ಶನ, ಪ್ರದರ್ಶನ ಕಲೆಗಳಾದ ಕರ್ನಾಟಕದ ಗೀಗಿ, ಲಾವಣಿ, ಮಹಾರಾಷ್ಟ್ರದ ಪೊವಾಡಿ ತಮಾಷಾ, ಗುಜರಾತಿನ ಭವಾಯಿ, ಉತ್ತರದ ನೌಟಾರಿಕೆ ಮತ್ತು ಖ್ಯಾಲ್, ಬಂಗಾಳದ ಜಾತ್ರಾ ತಮಿಳುನಾಡಿನ ತೆರುಕೂತ್ತು, ಆಂಧ್ರಪ್ರದೇಶದ ಬುರ್ರ ಕಥಾ, ಕೇರಳದ ತುಳ್ಳಲ್ ಮೊದಲಾದುವು. ಅದರಲ್ಲಿಯೂ ಹರಿಕಥೆ ಅಥವಾ ಕಥಾ ಕೀರ್ತನ ಮತ್ತು ಬೊಂಬೆಯಾಟಗಳು ರಾಷ್ಟ್ರೀಯ ಆಂದೋಲನದ ಪ್ರಸರಣದಲ್ಲಿ ಅತ್ಯಂತ ಪ್ರಭಾವ

ಪೂರ್ಣವಾದ ಪಾತ್ರವನ್ನು ನಿರ್ವಹಿಸಿದವು"[೧] . 'ಸಂವಹನ ಕ್ರಿಯೆಯಲ್ಲಿ ಜಾನಪದ ಕಲೆಗಳು' ಎಂಬ ತಮ್ಮ ಪ್ರಬಂಧದಲ್ಲಿ ಡಾ. ಎಚ್. ಕೆ. ರಂಗನಾಥ್ ಅವರು ಈ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಸ್ವಾತಂತ್ರ್ಯ ಮಾಧ್ಯಮವನ್ನಾಗಿ ಬಳಸಿಕೊಳ್ಳಲಾದದ್ದನ್ನು ಸ್ಮರಿಸಬಹುದು. ಆ ರೀತಿ ಬಳಕೆಯಾಗುವುದರ ಮೂಲಕ ಭಾರತದ ಜನಪದ ಕಲೆಗಳಿಗೆ ಗೌರವ ಸಂದಂತಾಯಿತು. ಜನಸಂಖ್ಯಾ ಬೆಳವಣಿಗೆಯ ನಿಯಂತ್ರಣ, ಕುಟುಂಬ ಯೋಜನಾ ತತ್ವ, ಅಕ್ಷರ ಕಲಿಕೆಯಿಂದಾಗುವ ಲಾಭಗಳು, ಹೆಬ್ಬೆರಳಿನ ಸಹಿಯಿಂದಾಗಿ ಅನಾಹುತಗಳು, ಶಿಕ್ಷಣದ ಮಹತ್ವ, ರಸ್ತೆ ಅಪಘಾತದ ಬಗೆಗಿನ ಜಾಗೃತಿ – ಈ ಎಲ್ಲಾ ಕೆಲಸಗಳನ್ನು ಜನಪದ ಕಲೆಗಳು ಕಲಾ ಮೇಳಗಳು ಅತ್ಯಂತ ಯಶಸ್ವಿಯಾಗಿ ನಿರ್ವಹಿಸಿದವು.

ನಮ್ಮ ಸಂಸ್ಕೃತಿಯ ಜೀವ ಕೇಂದ್ರವೇ ಜಾನಪದವಾಗಿರುವಾಗ ಜನಪದ ಪ್ರದರ್ಶಕ ಕಲೆಗಳು ಸಮುದಾಯಗಳ ಜೀವನ ವಿಧಾನವನ್ನು ಅರ್ಥ ಮಾಡಿಕೊಳ್ಳಲು ನೆರವಾಗುವಂಥವು. ಪ್ರಾಚೀನ ಮಾನವನ ಜೀವನದ ಹಾದಿ ಯಾವ ರೀತಿಯಲ್ಲಿ ಸಾಗಿ ಬಂತೆಂಬುದನ್ನು ಇವತ್ತಿನ ಪ್ರದರ್ಶಕ ಕಲೆಗಳು ಮನವರಿಕೆ ಮಾಡಿಕೊಡಬಲ್ಲವು. "ಆರಾಧನೆ ಮತ್ತು ಆಚರಣೆಗಳ ಕ್ರಿಯೆಗಳೇ ಕಲೆಗಳಾಗಿ ಜನನ ಹೊಂದಿ ಪೂರ್ಣ ಸ್ವರೂಪದ ಕಲೆಗಳಾದದ್ದು, ಒಂದು ಬಗೆಯಾದರೆ, ಧರ್ಮ ಅಥವಾ ಪಂಥ ಪ್ರಸಾರಕ್ಕಾಗಿ ಹುಟ್ಟಿದ ಕಲೆಗಳು ನಂತರ ಧರ್ಮ ಪಂಥದ ಉದ್ದೇಶ ಮೀರಿ ಸಾರ್ವಜನಿಕ ಕಲೆಗಳಾದದ್ದು ಇನ್ನೊಂದು ಬಗೆ, ಕಲೆಯೇ ವೃತ್ತಿಯಾಗಿ ನಂತರ ಅದೊಂದು ಪರಂಪರೆಯಾಗಿ ಬೆಳೆದದ್ದು ಒಂದು ಬಗೆಯಾದರೆ, ಇರುವ ವ್ಯವಸ್ಥೆಗೆ ಪ್ರತಿಭಟನೆಯಾಗಿ ಹೊಸ ಕಲೆಗಳೇ ಹುಟ್ಟಿಕೊಂಡದ್ದು, ಮತ್ತೊಂದು ಬಗೆ. ಹೀಗೆ ಹಲವು ಕುತೂಹಲವನ್ನು ಕೆರಳಿಸುವ ಕರ್ನಾಟಕದ ಕಲೆಗಳು ನಮ್ಮ ಸಂಸ್ಕೃತಿಯ ಅಧ್ಯಯನಕ್ಕೆ ಪ್ರಧಾನ ಆಕರಗಳಾಗುತ್ತವೆ. ಇಂಥ ಕಲೆಗಳ ಶೋಧನೆಯಿಂದ ಬಹುತೇಕ ದುಡಿಯುವ ವರ್ಗದ ಜನರ ಮೌಖಿಕ ಇತಿಹಾಸವನ್ನು ನಿಜ ಸ್ವರೂಪದಲ್ಲಿ ಅರ್ಥೈಸಿಕೊಳ್ಳಲು ಸಾಧ್ಯ. ಅಲ್ಲದೇ ಈ ಮೂಲಕ ಇತಿಹಾಸವನ್ನು ಕೂಡ ಸತ್ಯದ ಒರೆಗಲ್ಲಿಗೆ ಹಚ್ಚಿ ಪುನರೂಪಿಸಬಹುದಾಗಿದೆ"[೨]. ನಂಬಿಕೆ, ಸಂಪ್ರದಾಯ, ಧರ್ಮನಿಷ್ಠೆ, ಮನರಂಜನೆ, ರಂಗಭೂಮಿ ನೀತಿ, ಆರಾಧನೆ ಇತ್ಯಾದಿಗಳತ್ತ ಕೈ ತೋರಿಸುವ ಕಲೆಗಳಿರುವಂತೆ ಇವುಗಳಿಗೆ ಭಿನ್ನವಾದ ಗಿರಿಜನರ ಕಲೆಗಳೂ ಇವೆ. ಜೊತೆಗೆ ಕುಣಿತ, ವಾದ್ಯ ಹಾಗೂ ಹಾಡು ಪ್ರಧಾನವಾದ ಕಲೆಗಳೂ ಇವೆ.

ನಮ್ಮ ಸಂಸ್ಕೃತಿಯ ವಾಹಕವಾಗಿ ಕಾರ್ಯ ನಿರ್ವಹಿಸುವ ಇಂಥ ಕಲೆ ಮತ್ತು ಸಂಸ್ಕೃತಿ ಇವತ್ತಿನ ದಿನಗಳಲ್ಲಿ ಶ್ರೀಮಂತರಿಗೆ ಅನುಭವ ಗ್ರಾಹ್ಯವಾಗುತ್ತಿಲ್ಲ. ಬದಲಾಗಿ, ಲಕ್ಷುರಿಯಾಗಿ ಕಾಣಿಸುತ್ತಿದೆ. ಇಂಥ ಸರಕು ಸಂಸ್ಕೃತಿ ಪ್ರಸಕ್ತ ದಿನಗಳಲ್ಲಿ ಸರ್ವವ್ಯಾಪಿಯಾಗಿ ಆವರಿಸಿಬಿಟ್ಟಿದೆ. ಈ ವಿಷಯದಲ್ಲಿ ಇಡೀ ವಿಶ್ವವೇ ಏಕರೂಪದ ಮಾರುಕಟ್ಟೆಯಾಗಿ

ಪರಿವರ್ತನೆಗೊಂಡಿರುವುದನ್ನು ಕಾಣಬಹುದು. ಈ ರೀತಿ ಆದುದರಿಂದ ಏಕ ಮಾದರಿಯ ವಸ್ತುಗಳು ಮಾರುಕಟ್ಟೆಯನ್ನು ಪ್ರವೇಶಿಸುವಂತಾಗಿದೆ. ಹಾಗಾಗಿ ಈ ನೆಲ ಸಂಸ್ಕೃತಿಯ ಭಾಗವಾಗಿರುವ ವಿಭಿನ್ನ ಮಾದರಿಯ ವಸ್ತುಗಳು ಕಣ್ಮರೆಯಾಗ ತೊಡಗಿದವು. ಇದರಿಂದಾಗಿ ಏಕರೂಪದ ಮತ್ತು ಬಹುರೂಪದ ಸಂಸ್ಕೃತಿಯ ಸಂಘರ್ಷ ನಡೆಯ ತೊಡಗುತ್ತದೆ. ಪರಿಣಾಮವಾಗಿ ನೆಲದ ಸಂಸ್ಕೃತಿ ಅದರೊಂದಿಗೆ ಪೈಪೋಟಿ ಎದುರಿಸಲು ಸಾಧ್ಯವಾಗದೇ ಮೂಲೆ ಗುಂಪಾಗಿ ಬಿಡುತ್ತದೆ. ಬೆಟ್ಟಿಂಗ್, ಕುದುರೆ ಜೂಜು, ಷೇರು ಮಾರುಕಟ್ಟೆ – ಇತ್ಯಾದಿಗಳದೇ ಪಾರುಪತ್ಯವಾಗಿ ಕೃಷಿಕ್ಷೇತ್ರ ತೀರಾ ತಾತ್ಸಾರಕ್ಕೆ ಗುರಿಯಾಗಿದೆ. ಜೀವ ಪರ ದೃಷ್ಟಿ ಇಲ್ಲದಿರುವುದರಿಂದ ಮನುಷ್ಯನಲ್ಲಿ ಜೀವನೋತ್ಸಾಹ ಕಡಿಮೆಯಾಗಿದೆ. ಅದರ ಭಾಗವಾದ ಕಲಾ ಪ್ರಕಾರಗಳು ನಾಶವಾಗುತ್ತಿವೆ. ಸುಗ್ಗಿ ಕುಣಿತ, ಕೋಲಾಟ, ಡೊಳ್ಳು ಕುಣಿತ, ದೊಡ್ಡಾಟ, ಯಕ್ಷಗಾನ ಮುಂತಾದ ಕಲೆಗಳೆಲ್ಲ ಕೃಷಿಕ್ಷೇತ್ರದಿಂದ ಪ್ರೋತ್ಸಾಹಿಸಲ್ಪಟ್ಟಂಥವೇ. ಸಂಪತ್ತಿನ ದುರಾಸೆಯಿಂದಾಗಿ ಕಲೆಗಳನ್ನು ಶಿಥಿಲಗೊಳಿಸಲಾಗುತ್ತಿದೆ. ಕಲೆಗಳು ವ್ಯಾಪಾರೀಕರಣಗೊಂಡು ಯಾಂತ್ರೀಕರಣವಾಗ ತೊಡಗಿವೆ. ಅದರಿಂದಾಗಿ ದೊರಕುವ ಜೀವನೋತ್ಸಾಹ ಮರೆಯಾಗಿ ಏಕಮುಖಿಯಾದ ಚಿಂತನೆ ನಮ್ಮ ಬದುಕನ್ನು ಆವರಿಸಿ ಬಿಟ್ಟಿದೆ.

ವ್ಯಾಪಾರ ಮತ್ತು ಲಾಭವೇ ಜಾಗತೀಕರಣದ ಮುಖ್ಯ ಉದ್ದೇಶವಾಗಿರುವುದರಿಂದ ಜಾನಪದದ ಮೇಲೆ ಅದರ ಪ್ರಭಾವ ದಟ್ಟವಾಗಿದೆ. 'ಜಾನಪದ ಎಂಬುದು ಸಂಸ್ಕೃತಿಯ ಉತ್ಪನ್ನ ಹಾಗೆಯೇ ಸಂಸ್ಕೃತಿಯೆಂಬುದು ಸಾಮಾಜಿಕ ಮತ್ತು ಆರ್ಥಿಕ ಚಟುವಟಿಕೆಯಿಂದ ಮೂಡಿ ಬಂದು ಉತ್ಪನ್ನ' ವರ್ಣ ವ್ಯವಸ್ಥೆಯ ಪಾರುಪತ್ಯದಲ್ಲಿ ಸಮಾಜ ಗುಂಪುಗಳಾಗಿ ಬೇರ್ಪಟ್ಟಿತು. ಆದ್ದರಿಂದ, ಸಂಸ್ಕೃತಿಗಳು ಗುಂಪುಗಳಾಗಿ, ದ್ವೀಪಗಳಾಗಿ ವಿಭಜನೆಗೊಂಡವು. ಒಂದರ ರೀತಿ ನೀತಿಗಳು ಇನ್ನೊಂದು ಗುಂಪಿನವರಿಗೆ ಅಪರಿಚಿತವೆಂಬಂತೆ ಗೋಚರವಾದವು. ವರ್ಣ ವ್ಯವಸ್ಥೆಯ ಈ ತಾರತಮ್ಯ ಜನಪದ ಕಲೆಗಳ ಮೇಲೂ ಪರಿಣಾಮ ಬೀರದೇ ಇರಲಿಲ್ಲ. ಅಕ್ಷರ ಸಂಸ್ಕೃತಿಯ ಅವಕಾಶ ದೊರಕದಂತೆ ಬದುಕಿನ ನಿರ್ವಹಣೆಗೆ ಅದು ಪರ್ಯಾಯ ವ್ಯವಸ್ಥೆಯಾಗಿ ಕಂಡು ಬಂದದ್ದರಿಂದಲೂ ದಿಢೀರನೇ ಕಲೆಗಳು ಅವಕೃಪೆಗೆ ಗುರಿಯಾಗಿ ಬಿಟ್ಟವು. ಶಿಕ್ಷಣ ಲಾಭ ಪಡೆದಂತೆಲ್ಲ ಕಲೆಗಳ ಹಿಂದಿದ್ದ ಬಿಗಿ ಕಟ್ಟು ಸಡಿಲಗೊಂಡಿತು. ಗ್ರಾಮಾಂತರಿಗಳು ಜೀವನ ನಿರ್ವಹಣೆಗಾಗಿ ನಗರದತ್ತ ಧಾವಿಸಿದ್ದರಿಂದ ಧಾರ್ಮಿಕ ಉತ್ಸವಗಳು ಆ ಬಗೆಗಿನ ಸಂಭ್ರಮಗಳ ಕಡಿಮೆಯಾದವು. ಪರಿಣಾಮವಾಗಿ ಕಲಾ ಪ್ರದರ್ಶನಗಳಿಗೆ ಪ್ರೋತ್ಸಾಹವಿಲ್ಲದಂತಾಯಿತು. ಕಲೆಗಳ ಸ್ವರೂಪ ಇಲ್ಲವೇ ಪ್ರದರ್ಶನಗಳಲ್ಲಿ ಏನಾದರೂ ಬದಲಾವಣೆ ಕಾಣಿಸಿಕೊಂಡರೆ ಮಾತ್ರ ಅಂಥವು ಜನರ ಬೆಂಬಲ ಗಿಟ್ಟಿಸಿಕೊಳ್ಳಬಹುದು. ಅದಕ್ಕಾಗಿಯೇ ವೀರಗಾಸೆ ಮೇಳ, ಕರಾವಳಿ ಯಕ್ಷಗಾನ, ಮೂಡಲ ಪಾಯ – ಮುಂತಾದ ಕಲೆಗಳನ್ನು ಅಲ್ಪ ಸ್ವಲ್ಪ ಬದಲಾವಣೆಗಳೊಂದಿಗೆ ಪರಿಚಯಿಸುವ ಅಭ್ಯಾಸದ ಕೇಂದ್ರಗಳು ಹುಟ್ಟಿಕೊಳ್ಳತೊಡಗಿದವು.

ಆದರೆ, ಕೆಳ ಸಮುದಾಯದ ಕಲೆಗಳಿಗೆ ಇಂಥ ಅವಕಾಶಗಳಿಲ್ಲ. ಹರಿ ಜನರು ಬಾರಿಸುವ ಹಲಗೆಯ ಬಗ್ಗೆ ಮುಂದುವರಿದ ಜಾತಿಗಳಲ್ಲಿ ಸಕಾರಾತ್ಮಕವಾದ ಭಾವನೆಗಳಿಲ್ಲ. ಚರ್ಮ ವಾದ್ಯಗಳನ್ನು ಊದುವುದಾಗಲೀ – ಬಡಿಯುವುದಾಗಲೀ ಸಾಮಾನ್ಯವಾಗಿ ಹಿಂದುಳಿದ ಜಾತಿಗಳವರೇ ಮಾಡುತ್ತಾರೆ. ಇದನ್ನು ನೋಡಿದರೆ, ಚರ್ಮವನ್ನು ಹದ ಮಾಡಿ ವ್ಯವಸ್ಥಿತ ರೂಪಕ್ಕೆ ತರುವ ಹೊಣೆಗಾರಿಕೆಯನ್ನು ನೀಡಿರುವ 'ವರ್ಣವ್ಯವಸ್ಥೆಯ ಸ್ಥಿರೀಕರಣ ಮುಂದುವರಿದಿರುವುದು ಕಂಡು ಬರುತ್ತದೆ'.

ಅವಕೃಪೆಗೆ ಗುರಿಯಾದ ಸಮುದಾಯಗಳಿಂದ ಬಂದ ವಿದ್ಯಾವಂತರು ತಮ್ಮ ಜಾತಿಯ ಕಲೆಗಳ ಬಗ್ಗೆ ತಿರಸ್ಕಾರ ಹೊಂದುವುದಲ್ಲದೇ ಮೇಲ್ಜಾತಿಗಳ ಕಲೆಗಳ ಬಗ್ಗೆ ಆಸಕ್ತಿ ಹೊಂದುತ್ತಾರೆ ಅಥವಾ ಆಧುನಿಕ ತಂತ್ರಜ್ಞಾನಕ್ಕೆ ಬಳುವಳಿ ಸಿನಿಮಾ, ಟಿ.ವಿ.ಗಳ ಕಡೆಗೆ ವಾಲಿ ಬಿಡುತ್ತಾರೆ. ಹಿರಿಯರಿಗೆ ತಮ್ಮ ಕುಲ ಕಸುಬುಗಳು ಪವಿತ್ರವಾಗಿ ಕಂಡರೆ, ಅವರ ಮಕ್ಕಳಿಗೆ ಅವಮಾನಿತ ಕಸುಬುಗಳಾಗಿ 'ಪೀಳಿಗೆ ಘರ್ಷಣೆ' ಆರಂಭವಾಗುತ್ತದೆ. ಇವತ್ತಿನ ಶಿಕ್ಷಣ ಕ್ರಮದಲ್ಲೂ ಕುಲ ಕಸುಬುಗಳನ್ನು ಗೌರವದಿಂದ ನೋಡಬೇಕಾದ ಕಲೆಗಳ ಮಟ್ಟಕ್ಕೆ ಏರಿಸಿಲ್ಲ. ಆದ್ದರಿಂದ ಜನಪದ ಕಲೆಗಳು ಆಧುನಿಕತೆಯಿಂದ ನರಳುವ ಸ್ಥಿತಿ ಬಂದಿದೆ. ಇದರಿಂದಾಗಿಯೂ ನಮ್ಮ ಬಹಳಷ್ಟು ವೃತ್ತಿ ಗಾಯನ ಪರಂಪರೆಗಳು, ಸಂಬಂಧಿಸಿದ ಕಲೆಗಳು ಮೂಲೆ ಗುಂಪಾಗಿವೆ. ಕರಪಾಲ ಮೇಳದ ಬಗೆಗಿನ ಪ್ರಚಾರ ಹೆಳವರ ಕಲೆಗೆ, ಗೊರವರ ಕಲೆಗಿಲ್ಲ. ಕರಪಾಲ ಮೇಳಕ್ಕೆ ವೀರಶೈವರ ಪ್ರವೇಶದಿಂದಾಗಿ ಜೀವಂತಿಕೆ ಉಳಿಸಿಕೊಂಡಿದೆ. ತೊಗಲು ಗೊಂಬೆಯಾಟ ಕಿಳ್ಳೇಕ್ಯಾತರಿಗೆ ಸೇರಿದ್ದು. ಪ್ರೋತ್ಸಾಹವಿಲ್ಲದೇ ಅದರ ಕಲಾವಿದರು ಇಲ್ಲವಾಗಿದ್ದಾರೆ. ಮರದಲ್ಲಿ ಮಾಡಿದ ಗೊಂಬೆಗಳನ್ನು ಕುಣಿಸುವ ಕಲೆಯಾಗಿ ಕಾರ್ನಾಡರು, ಎ. ಎಸ್. ಮೂರ್ತಿ ಮಾಡಿದ್ದಾರೆ. ಶಿವರಾಮ ಕಾರಂತರು ಯಕ್ಷಗಾನ ಕಲಿತರು, ಕಲಿಸಿದರು, ಮೇಲ್ಜಾತಿಯ ಅತೀ ಬುದ್ಧಿವಂತರು ಮಾಡಿದ್ದರಿಂದ ಅದು ಶಿಕ್ಷಣದ ಮಟ್ಟಕ್ಕೇರಿತು. ಇಂದು ಏಕಮುಖವಾದ ಸಂಸ್ಕೃತಿಯ ಪ್ರಭಾವ ಬಹುರೂಪಿ ಸಂಸ್ಕೃತಿಗಳ ಮೇಲಾಗುತ್ತಿದೆ. ಜನಪದ ಪ್ರದರ್ಶಕ ಕಲೆಗೂ ಇದರ ಪ್ರಭಾವಕ್ಕೆ ಒಳಪಟ್ಟಿವೆ. ಪರಿಣಾಮದಿಂದ ಬಹಳಷ್ಟು ಕಲೆಗಳು ನಶಿಸುವ ಇಲ್ಲವೇ ಬೇರೆ ರೂಪಾಂತರ ಪಡೆದು ಮೂಲ ಸಂಸ್ಕೃತಿಯೇ ಅಳಿದು ಹೋಗುವಂತಹ ಪರಿಸ್ಥಿತಿ ನಿರ್ಮಾಣವಾಗುತ್ತಿದೆ. ಕೋಲಾಟ, ಯಕ್ಷಗಾನ, ಬಯಲಾಟ ಇವೆಲ್ಲವೂ ಏಕರೂಪ ಸಂಸ್ಕೃತಿಯಲ್ಲಿ ತನ್ನ ಸ್ವರೂಪವನ್ನು ಬದಲಿಸಿಕೊಳ್ಳಬೇಕಾದ ಅನಿವಾರ್ಯತೆಯನ್ನು ಹೊಂದಿವೆ. ಯಕ್ಷಗಾನ, ಬಯಲಾಟ, ಜನಪದ ಕಲೆಯಾಗಿ ಒಂದೊಂದು ಸಂಸ್ಕೃತಿಯಲ್ಲಿ ಒಂದೊಂದು ರೀತಿಯಲ್ಲಿ ಪ್ರದರ್ಶನಗೊಳ್ಳುತ್ತದೆ. ಆದರೆ, ಜಾಗತೀಕರಣದಿಂದಾಗಿ ಇದರ ಸ್ವರೂಪವೇ ಬದಲಾಗುತ್ತದೆ. ಕುಟ್ಟಲು, ಬೀಸಲು, ಉಳುಮೆ ಮಾಡಲು, ಕಳೆ ಕೀಳಲು ಎಲ್ಲದಕ್ಕೂ ಯಂತ್ರಗಳೇ ಬಂದಿರುವುದರಿಂದ ಅವುಗಳ ಬಳಕೆ ಗೊತ್ತಿರುವುದರಿಂದ ಮನುಷ್ಯನಿಗೆ ದೈಹಿಕ ಶ್ರಮವೆಂಬುದಿಲ್ಲ. ಹಾಗಾಗಿ, ಕೃಷಿ ಸಂಸ್ಕೃತಿಯ ಭಾಗವಾಗಿ ಮೂಡಿ

ಬರುತ್ತಿದ್ದ ಸುಗ್ಗಿ ಕುಣಿತ, ಕೋಲಾಟ, ಡೊಳ್ಳು ಕುಣಿತ ಮುಂತಾದ ಜನಪದ ಕಲೆಗಳನ್ನು ನೋಡಿ ಆನಂದಿಸಲು ಸಾಧ್ಯವಾಗುತ್ತಿಲ್ಲ. ಸದಾ ಟಿ. ವಿ. ಸೀರಿಯಲ್ ಗಳ ಮುಂದೆ ಕುಳಿತುಕೊಳ್ಳುವುದರಿಂದ ಯಾವಾಗಲೂ ಮನರಂಜನೆಯ ಭಾಗ್ಯವೇ ಆಗುತ್ತಿದೆ. ಹಾಗಾಗಿ, ಖುಷಿಗಾಗಿ, ಮನರಂಜನೆಗಾಗಿ ಪ್ರದರ್ಶನಗೊಳ್ಳುತ್ತಿದ್ದ ಸಾಹಿತ್ಯ ಮತ್ತು ಕಲೆಗಳು ಪ್ರದರ್ಶನಗೊಳ್ಳುತ್ತಿದ್ದ ಅವಕಾಶಗಳೇ ತಪ್ಪಿ ಹೋದಂತಾಯಿತು. ಆಧುನಿಕ ಮನುಷ್ಯನಿಗೆ ಯಾಂತ್ರೀಕ ದರ್ಶನಗಳಿಂದಾಗಿ ಮಾಯಾಲೋಕ ಇಷ್ಟವಾಯಿತೇ ಹೊರತು ವಾಸ್ತವ ಲೋಕ ಇಷ್ಟವಾಗುತ್ತಿಲ್ಲ. ಯಾಂತ್ರಿಕ ಸರಕುಗಳು ಆ ಮೂಲಕ ಬರುವ ಸಿನಿಮಾ, ದೂರದರ್ಶನ ಇತ್ಯಾದಿ ಮಾಧ್ಯಮಗಳ ಮುಂದೆ ಜನ ಕುಳಿತರೆ ಅದರ ತಾಂತ್ರಿಕ ಆಕರ್ಷಣೆಯಿಂದಾಗಿ ಕಲೆಗಳು ತಮ್ಮ ಆಕರ್ಷಣೆಯನ್ನು ಕಳೆದುಕೊಂಡು ನೋಡುವುದಕ್ಕೂ ಇಲ್ಲದೇ ಹೋಗುತ್ತಿವೆ. ಡಿಸ್ಕೊ, ಕ್ಯಾಬರೆ ಬಂದದ್ದರಿಂದ , ಇಂಥ ಕಲೆಗಳನ್ನು ನೋಡಲು ಸಾಧ್ಯವಾಗುತ್ತಿಲ್ಲ. ಹಾಗೆಯೇ ಭಜನೆ, ಭೂತಾರಾಧನೆ ಡೊಳ್ಳು ಕುಣಿತ ಮುಂತಾದ ಕಲೆಗಳೂ ಸಹ ಇವುಗಳ ಪರಿಣಾಮವನ್ನು ಎದುರಿಸಬೇಕಾಗಿದೆ. ಯಾಂತ್ರಿಕ ಸಲಕರಣೆಗಳು ಬಂದು ಬೇರೊಂದು ರೂಪದಲ್ಲಿ ಅವನ್ನ ನಮಗೆ ನೋಡುವಂತೆ ಪ್ರೇರೇಪಿಸುತ್ತಿವೆ. ಹಳ್ಳಿಗಳಲ್ಲಿ ಹಬ್ಬದ ಸಂಭ್ರಮ ಇಲ್ಲವಾಗುತ್ತದೆ. ಅವೇ ಇಲ್ಲದಿರುವಾಗ ಪ್ರದರ್ಶಕ ಕಲೆಗಳ ಪರಿಸ್ಥಿತಿ ಏನು ? ಹಳ್ಳಿಗಳಲ್ಲಿ ಜನ  ಅವನ್ನ ಪ್ರದರ್ಶಿಸಲೆತ್ನಿಸುವುದು ಕಡಿಮೆಯಾಗಿದೆ. ಪಟ್ಟಣಗಳಲ್ಲಿ ಅವುಗಳ ಪ್ರದರ್ಶನ ಬೇರೊಂದು ರೂಪದಲ್ಲಿ ಏರ್ಪಾಡಾಗುತ್ತಿದೆ. ಯಾಂತ್ರಿಕ ತಂತ್ರಜ್ಞಾನವನ್ನು ರೂಪಿಸಿ ಕೋರಿಯೋಗ್ರಫಿಯನ್ನು ಉಪಯೋಗಿಸಿಕೊಂಡು ಟಿಕೇಟ್ ಗಳನ್ನು ಇಟ್ಟು ಹಣ ಸಂಪಾದನಾ ಮಾರ್ಗ ಹಿಡಿಯಲಾಗುತ್ತಿದೆ. ಕಲಾವಿದನ ಸಹಜ ಉಡುಪಿನಿಂದ ಬಿಡಿಸಿ ಕಾಸ್ಟ್ಯೂಮ್ ಹಾಕಿಸಿದ್ದರಿಂದ ಅಸಲೀ ಜೀವನದ ಪರಿಚಯವಾಗದಂತೆ ಮಾಡಿದೆ. ಈ ಬದಲಾವಣೆ ಅನಿವಾರ್ಯ. ಹಿಂದೆ ಜೇರುಂಡೆ ರೆಕ್ಕೆಗಳನ್ನು ಬಳಸುತ್ತಿದ್ದರು. ಆದರೆ, ಈ ಝಗಝಗಿಸುವ ಲೈಟ್ ಬೆಳಕಿನಲ್ಲಿ ಈ ಉಡುಪು ಅನಿವಾರ್ಯ.

ಹಳ್ಳಿಗಳಲ್ಲಿ ಹಬ್ಬ ಹರಿದಿನಗಳನ್ನು ಏರ್ಪಡಿಸುತ್ತಿದ್ದ ಜನ ಅದರ ಭಾಗವಾಗಿ ಕಲೆಗಳನ್ನು ಪ್ರದರ್ಶಿಸಿ ಒಗ್ಗಟ್ಟನ್ನು ಸೌಹಾರ್ದವನ್ನು ವ್ಯಕ್ತಗೊಳಿಸುತ್ತಿದ್ದರು. ಅಂಥ ಸಂದರ್ಭಗಳನ್ನು ಜಾಗತೀಕರಣ ಇಲ್ಲದಂತೆ ಮಾಡಿದೆ. ಮಾದೇಶ್ವರನ ಜಾತ್ರೆಯಲ್ಲಿ ಭಕ್ತಿ ಸಮೂಹದ ನಡುವೆ ಕಂಸಾಳೆ ನೃತ್ಯ ಪ್ರದರ್ಶನ ಗೊಂಡರೆ, ಅದು ಆರಾಧನಾ ಕಲೆ ಎನಿಸಿಕೊಳ್ಳುತ್ತದೆ. ನಗರಗಳಲ್ಲಿ ಸಾರ್ವಜನಿಕ ಸ್ಥಳಗಳಲ್ಲಿ ಅದೇ ಕಲೆ ಪ್ರದರ್ಶನಗೊಂಡರೆ, ಅದೊಂದು ಹವ್ಯಾಸಿ ಕಲೆ ಎನಿಸಿಬಿಡುತ್ತದೆ. ಬೆಟ್ಟದಲ್ಲಿ ಗಂಟೆಗಟ್ಟಲೇ ಪ್ರದರ್ಶನಗೊಳ್ಳುವ ಕಂಸಾಳೆ ಆರಾಧನಾ ಕಲೆಯಾಗಿ ಕಂಡರೆ ನಗರದವರಿಗೆ ಬರೀ ಕಲೆಯಾಗಿ ಕಂಡು ಸೀಮಿತ ಅವಧಿಯಲ್ಲಿ ಕೊನೆಗೊಳ್ಳುತ್ತದೆ. ಅಭಿವೃದ್ಧಿ ಹೊಂದಿದ ಜಾತಿ ಸಮುದಾಯಗಳಲ್ಲಿ ಇಂಥ ಪ್ರದರ್ಶಕ ಕಲೆಗಳಿಗೆ ಮರುಗುವ ಸ್ಥಿತಿ ಬರುವುದು . ಸಾಮಾಜಿಕವಾಗಿ

ಮೇಲ್ಪಟ್ಟದಲ್ಲಿರುವ ಸಾಹಿತ್ಯ ಕಲೆಗಳಿಗೆ ಗೌರವ ಜಾಸ್ತಿ. ಪ್ರತಿಷ್ಠೆ, ಗೌರವಗಳಿರುವುದರಿಂದಲೇ ಆ ವರ್ಗದ ತರುಣರು ಅವನ್ನ ಅಭ್ಯಸಿಸಲು ಮುಂದಾಗುತ್ತಾರೆ. ಉದಾಹರಣೆಗೆ ಜನಮದ ಜೋಡಿ ಸಿನಿಮಾದಲ್ಲಿ

ಕೋಲುಮಂಡೆ ಜಂಗಮ ದೇವರು
ಗುರುವೇ ಕ್ವಾರಣ್ಯಕ್ಕೆ ದಯಮಾಡವರೇ..
ಕ್ವಾರಣ್ಯ ನೀಡವ್ವ ಕೋಡುಗಲ್ಲ ಮಾದೇವನಿಗೆ.

ಇಲ್ಲಿ ಕೇವಲ ಕಲೆಯಾಗಿ ಕಂಸಾಳೆ ಪ್ರದರ್ಶನಗೊಂಡಿರುವುದನ್ನು ಕಾಣುತ್ತೇವೆಯೇ ಹೊರತು ನಿಜವಾದ ಪ್ರದರ್ಶನ ನೋಡುತ್ತಿರುವ ಅನುಭವವಾಗುವುದಿಲ್ಲ.

'ಜೋಗಿ' ಸಿನಿಮಾದಲ್ಲಿ ಒಂದು ರೂಪಕದಲ್ಲಿಟ್ಟು ತಮಗೆ ಬೇಕಾದ ಹಾಗೆ ಹಾಡುಗಳನ್ನು ವ್ಯಾಪಾರೀಕರಣ ಮಾಡಿಕೊಳ್ಳಲಾಗಿದೆ.

ಎಲ್ಲೋ ಜೋಗಪ್ಪ ನಿನ್ನರಮನೆ..
ಎಲ್ಲೋ ಜೋಗಪ್ಪ ನಿನ್ನ ತಳ ಮನೆ
ಎಲ್ಲೋ ಜೋಗಪ್ಪ ನಿನ್ನ ತಳ ಮನೆ

ಬೇಡುವೆನು ವರವನ್ನು ಕೊಡೆ ತಾಯೆ ಜನಮವನು
ಕಡೆತನಕ ಮರೆಯಲ್ಲ ಜೋಗೀ
ಕಡೆತನಕ ಮರೆಯಲ್ಲ ಜೋಗೀ

ಭೂಮಿ ತಾಯಿಯ ನೋಡೋ ಆಸೆಯ
ಹೊತ್ತು ದಿನವೂ ಆ ಸೂರ್ಯ ಬರುತಾನೊ
ಸವಿ ಲಾಲಿಯ ತಾಯಿ ಹೇಳೆಯಾ ಎಂದೂ

ಧರೆಗೆ ಆ ಚಂದ್ರ ಬರುತಾನೊ
ಕಣಿ ಕೇಳದೇನು...... ಕಣಿ ಕೇಳದೇನು ಕೇಳಯ್ಯ ನೀನು
ಈ ತಾಯಿ ಎದೆ ಕೂಗನು
ಈ ತಾಯಿ ಎದೆ ಕೂಗನು

ಅದರ ಲಯ ಧಾಟಿಗಳನ್ನು ಬಳಸಿ ಯಥೇಚ್ಛವಾಗಿ ಜನರನ್ನು ಆಕರ್ಷಿಸಲಾಗಿದೆ. ಇದರಿಂದ ಮೂಲ ಜನಪದ ಕಲೆ ಮಾಯವಾಗಿ ಅದರ ಲಯ ಮಾತ್ರ ಉಳಿದುಕೊಂಡಂತಾಯಿತು; ಕಲೆ ನಾಶವಾಯಿತು. ಇದನ್ನು ಉಳಿಸಿಕೊಂಡವರು ಆರ್ಥಿಕವಾಗಿ ಸಬಲರಾದರು. ಜನಪದರ ಕರಕುಶಲ ಕಲೆಗಳನ್ನು ನೋಡಿದರೂ ಇದೇ ಗತಿ ಬಂದಿದೆ.

ಮಡಕೆ, ಚಾಪೆ, ಹೂಜಿ ಇವುಗಳಿಗೆ ವಿನ್ಯಾಸ ಕೊಟ್ಟು ಹೈಟೆಕ್ ವಸ್ತುಗಳೆಂದು ದುಪ್ಪಟ್ಟು ಮಾರಿ ಹಣ ಮಾಡುತ್ತಾರೆ. ಅದನ್ನು ತಯಾರಿಸುವವರಿಗೆ ಆದಷ್ಟು ಬೇಗ ಅವನ್ನು ನಾವೂ ಕೊಳ್ಳಬೇಕು ಎನ್ನುವಂತೆ ಜಾಗತೀಕರಣ ಪ್ರಭಾವ ಬೀರಿದೆ. ಜನಪದ ಕಲೆಗಳಲ್ಲಿ, ಕರಕುಶಲ ಕಲೆಗಳಲ್ಲಿ ಮಾನವನ ಕೌಶಲ್ಯಕ್ಕೆ ಪ್ರಾಧಾನ್ಯವಿದ್ದರೆ, ಹೈಟೆಕ್ ವಸ್ತು ನಿರ್ಮಾಣದಲ್ಲಿ ಯಂತ್ರ ಕೌಶಲ್ಯಕ್ಕೆ ಪ್ರಾಧಾನ್ಯ. ಮಾನವನ ಕೈ ಕೆಲಸವನ್ನು ಜಾನಪದದಲ್ಲಿ ಕಂಡರೆ ಹೈಟೆಕ್ ವಸ್ತು ನಿರ್ಮಾಣದಲ್ಲಿ ಯಂತ್ರದಲ್ಲಿನ ಆಕರ್ಷಣೆಯನ್ನು ಕಾಣುತ್ತೇವೆ.

ಜನಪದ ಕಲೆಗಳು ಸಾಂದರ್ಭಿಕ ಬಳಕೆಯ ಕಲೆಯಾಗಿ ಉಳಿಯುತ್ತಿಲ್ಲ. ಆರಾಧನಾ ಹಿನ್ನೆಲೆಯಾಗಿ ಉಳಿಯುತ್ತಿಲ್ಲ. ಸಿನಿಮಾ, ಟಿ.ವಿ., ಸಭೆ ಸಮಾರಂಭ, ಮೆರವಣಿಗೆಯಲ್ಲಿ ಬಳಕೆಗೊಳ್ಳುತ್ತಿವೆ. (ಜನಮದ ಜೋಡಿ, ಜೋಗಿ, ಬೇರು ) ತನ್ನ ಮೂಲ ಬೇರುಗಳನ್ನು ಬಿಟ್ಟು ಅಸ್ತಿತ್ವವನ್ನು ಕಳೆದುಕೊಳ್ಳುತ್ತಿವೆ. ಅವನ್ನು ನೋಡುವ ಗತಿಯೆಲ್ಲಾ ಬೇರೆಯಾಗುತ್ತಿದೆ. ನಂದೀಧ್ವಜ ಕುಣಿತ, ಕಂಸಾಳೆ, ಗೊರವರ ಕುಣಿತ, ಕರಗ, ಮಳೆಯ ನೃತ್ಯ – ಇವೆಲ್ಲ ಪರಿಸರದಿಂದ ಬೇರೆಯಾದಾಗ ಅದರ ಘನತೆಯಿಂದ ವಂಚಿತಗೊಳ್ಳುತ್ತವೆ, ತಳ್ಳಿ ಹಾಕಲ್ಪಟ್ಟ ವಸ್ತುವಾಗಿ ಬಿಡುತ್ತವೆ. ಯಾವುದೇ ಕಲೆ ಸಾಂದರ್ಭಿಕತೆಯನ್ನು ಕಳೆದುಕೊಂಡರೆ, ಒಟ್ಟಾರೆ, ಕಲೆಗೆ ಗೌರವಿಲ್ಲದಂತಾಗುತ್ತದೆ. ಈಗ ಆಗುತ್ತಿರುವುದು ಇದೇನೇ.

ಸಿನಿಮಾಗಳಲ್ಲಿ ಬಳಕೆಯಾದರೂ ಥ್ರಿಲ್ ಇರಲ್ಲ. ಮುಖ್ಯ ವಸ್ತುವಿಗೆ ಪ್ರೇರಣೆಯಾಗಷ್ಟೇ ಅದಕ್ಕೆ ಬೆಲೆ. ಹಾಗಾಗಿ ತಳ್ಳಿ ಹಾಕಲ್ಪಟ್ಟ ಕಲೆಗಳೆನ್ನಿಸಿಬಿಡುವ ಸಾಧ್ಯತೆಗಳೇ ಹೆಚ್ಚು. ನಂದೀ ಧ್ವಜ ಕುಣಿತ, ಡೊಳ್ಳು ಕುಣಿತ, ತಂಬೂರಿನ ಮೇಳ ಇವೆಲ್ಲ ಆಚರಣೆ ನಂಬಿಕೆಯ ದೃಷ್ಟಿಯಿಂದ ಮುಖ್ಯವಾಗಿದ್ದವು. ಉದಾರೀಕರಣ, ವ್ಯಾಪಾರೀಕರಣದಲ್ಲಿ ಇವೆಲ್ಲ ಅಮುಖ್ಯವೆನಿಸಿದವು. ಕಲಾ ಪ್ರದರ್ಶನದ ಹಿನ್ನೆಲೆಯಾಗಿದ್ದೆ ಭಾವನೆ ಮತ್ತು ಭಕ್ತಿ ಬಹು ರಾಷ್ಟ್ರೀಯ ಕಂಪನಿಗಳಿಗೆ ಮುಖ್ಯವೆನಿಸುವುದೇ ಇಲ್ಲ. ಸಿನಿಮಾ ಮಾಧ್ಯಮದಲ್ಲಾದರೂ ಕೊಂಚ ಬೆಲೆ ಇರುತ್ತದೆ. ಬಹುರಾಷ್ಟ್ರೀಯ ಕಂಪನಿಗಳಲ್ಲಿ ಇವು ಭಿಕ್ಷುಕ ಕಲೆಗಳಾಗಿಯೇ ಉಳಿಯುವುದಿಲ್ಲ. ಆರಂಭದಲ್ಲಿ ಭಕ್ತಿಯ ಕಲೆಗಳಾಗಿದ್ದವು, ಕರುಣೆಯ ಪರಿತವನ್ನು ತಲುಪಿದವು. ಈಗಂತೂ ಸ್ಥಳೀಯ ವಾತಾವರಣದ ಮಹತ್ವವನ್ನು ಕಳೆದುಕೊಳ್ಳುತ್ತಿರುವದರಿಂದ, ಅವು ರಕ್ಷಣಾವಸ್ಥೆಯ ಕಲೆಗಳಾಗಿವೆ. ಕೌಟುಂಬಿಕ ಮಹತ್ವದ ವಾತಾವರಣವನ್ನು ಕಳೆದುಕೊಳ್ಳುತ್ತಿವೆ. ಶ್ರೀಮಂತಿಕೆ ಬಂದದ್ದರಿಂದ ನಂಬಿಕೆಗಳೆಲ್ಲ ಹೋಗುತ್ತಿವೆಯಾದರೂ ಭೌತಿಕ ಶ್ರೀಮಂತಿಕೆ ಬಂದರೂ ಅಂತರು......... ಶ್ರೀಮಂತಿಕೆ ಹೋಗುತ್ತಿಲ್ಲ. ಆದರೆ, ಶ್ರೀಮಂತ ರಾಷ್ಟಗಳಿಗೆ ಈ ಬಗೆಗೆ ನಂಬಿಕೆ ಇದ್ದಂತಿಲ್ಲ.

ಶಿಷ್ಟ ಸಂಗೀತವನ್ನು ಉಳಿಸಿದಂತೆ ಜನಪದ ಕಲೆಗಳನ್ನು ಉಳಿಸಬೇಕಾಗಿದೆ. ಎಲ್ಲದಕ್ಕೂ ಹಣದಿಂದಲೇ ಬೆಲೆ ಇರುವಾಗ ಕಲಿಯುವವನಿಗೆ ಮಾಸಾಶನ ನೀಡಿದರೆ

ಅವನ ಬದುಕು ಸುಧಾರಿಸುತ್ತದೆ, ಕಲೆಯೂ ಉಳಿಯುತ್ತದೆ. ಕಲಿಯುವವನಿಗೂ ಗೌರವ ಬರುತ್ತದೆ. ಈ ದೃಷ್ಟಿಯಲ್ಲಿ ಯಕ್ಷಗಾನಕ್ಕಿರುವ ಶಕ್ತಿ ಉಳಿದ ಕಲೆಗಳಿಗಿಲ್ಲ, ಪ್ರೋತ್ಸಾಹವಿಲ್ಲ. ಸರಕಾರವೂ ಆಸಕ್ತಿ ತೋರುತ್ತಿಲ್ಲ. ಮಾಧ್ಯಮಗಳಲ್ಲಿ ಜಾನಪದ ಬಳಕೆಯಾಗುತ್ತಿದ್ದರೂ, ಜೀವಂತಿಕೆ ಇಲ್ಲ. ಪ್ರದರ್ಶನದ ಕಾಲಾವಧಿ ನಿಗದಿಗೊಂಡಿದ್ದರಿಂದ ಹೇಳಬೇಕಾದದಕ್ಕೆಲ್ಲ ಕತ್ತರಿ ಬಿದ್ದಂತಾಯಿತು. ಭಾಷೆಯಲ್ಲೂ ಬದಲಾವಣೆ ಕಾಣಿಸಿತು. ಜನಪದ ಭಾಷೆಗೆ ಬದಲಾಗಿ ಆಧುನಿಕ ಪರಿಭಾಷೆ ಬಂದದ್ದರಿಂದ ಸಂಶೋಧನೆಯಲ್ಲಿ ತೊಡಗುವವರಿಗೆ ನಿರಾಶೆಯೂ ಆಯಿತು. ವಿವಾಹ ಸಂಪ್ರದಾಯಗಳು ಸರಳೀಕರಣಗೊಂಡಿವೆಯಾದರೂ ಬಹುಕಾಲ ನೆನಪಿನಲ್ಲಿ ಉಳಿಯುವ Episode ಒಂದನ್ನು ತಯಾರು ಮಾಡಬಹುದಾದ ಸಂದರ್ಭಗಳು ಒದಗಿ ಬರಬೇಕಾಗಿದೆ. ಜನಪದ ಕಲಾ ಪ್ರದರ್ಶನಗಳನ್ನು ಪ್ರದರ್ಶಿಸುವವರಿಗೂ, ನೋಡುವವರಿಗೂ, ಹಾಡುವವರಿಗೂ ಆರೋಗ್ಯ ಚೆನ್ನಾಗಿರುತ್ತಿತ್ತು.

ಅವನ್ನು ದೂರದರ್ಶನದಲ್ಲಿ ನೋಡುತ್ತಿರುವುದರಿಂದ ಆರೋಗ್ಯಕ್ಕೆ ಹಾನಿವುಂಟಾಗುತ್ತಿದೆ. ಮನಸ್ಸಿನ ಮೇಲೆ ಯಾವುದೇ ಪರಿಣಾಮ ಉಂಟಾಗಿದೆ. ಲಾಭ – ನಷ್ಟವಷ್ಟೇ ಮುಖ್ಯವಾಗುತ್ತಿದೆ. "ಬದುಕಿನ ಎಲ್ಲ ರಂಗಗಳಲ್ಲೂ ಆರ್ಥಿಕತೆಯೊಂದೇ ಪ್ರಧಾನವಾದಾಗ ಆರ್ಥಿಕ ಸಂಸ್ಕೃತಿಯೊಂದರ ನಿರ್ಮಾಣವಾಗುತ್ತದೆ. ಈ ತೆರನಾದ ಬಂಡವಾಳಶಾಹಿ ಆರ್ಥಿಕ ಸಾಂಸ್ಕೃತಿಕತೆ ಪಶ್ಚಿಮದಿಂದ ಬಂದುದಾಗಿರುವಾಗ ಮತ್ತು ಅದು ಒಡೆತನವನ್ನು ಸ್ಥಾಪಿಸಿರುವಾಗ ನಾವು ಕಂಡುಕೊಳ್ಳುವ ಆರ್ಥಿಕ ಸಂಸ್ಕೃತಿಗೂ ಸಹ ಏಕ ರೂಪದ್ದಾಗಿರುತ್ತದೆ ಹಾಗೂ ಅದು ಪಶ್ಚಿಮದ ಬಂಡವಾಳಶಾಹಿ ಸಂಸ್ಕೃತಿಯಷ್ಟೇ ಆಗಿರಬೇಕಾಗುತ್ತದೆ. ಇಂತಹ ಸಂಸ್ಕೃತಿ ರೂಪು ತಳೆಯುವಲ್ಲಿ ಪ್ರಧಾನ ಪಾತ್ರ ವಹಿಸುತ್ತಿರುವುದು ಇಂಗ್ಲೀಷ್. ಉದಾಹರಣೆಗೆ ನಮ್ಮ ಸಾಂಪ್ರದಾಯಕ ಕಲೆಗಳಲ್ಲೊಂದಾದ ಯಕ್ಷಗಾನವನ್ನು ಇಂಗ್ಲೀಷ್‌ನಲ್ಲಿ ಪ್ರಸ್ತುತಪಡಿಸಲಾಗುತ್ತಿರುವುದು. ಅದರ ಉದ್ದೇಶ ನಮ್ಮ ಕಲಾ ಪ್ರಕಾರವೊಂದನ್ನು ಸಾಗರದಾಚೆಗೆ ಪರಿಚಯಿಸುದೇ ಆಗಿದ್ದರೆ, ಈ ಪ್ರಯತ್ನ ನಿಜಕ್ಕೂ ಶ್ಲಾಘನೀಯ. ಆದರೆ, ಸಾಂಪತ್ತಿಕವಾಗಿ ಬಲಾಢ್ಯವಾದ ಪಶ್ಚಿಮವು ಪ್ರಾಕಾರದ ಮೇಲೂ ಒಡೆತನ ಸಾಧಸಬಹುದು. ಅದನ್ನು ಕೊಂಡುಕೊಳ್ಳಲೂಬಹುದು. ಇಂಗ್ಲೀಷ್‌ಗೆ ಮಾನ್ಯತೆ ಹೆಚ್ಚುತ್ತಾ ಹೋದಂತೆ ಆ ಭಾಷೆಯಲ್ಲಿ ಪ್ರಸ್ತುತ ಪಡಿಸಲಾಗುವ ಈ ಕಲಾ ಪ್ರಕಾರ ಪ್ರಾಧಾನ್ಯ ಪಡೆಯುತ್ತ ಹೋಗಿ ದೇಶ ಭಾಷೆಯಲ್ಲಿ ಪ್ರಸ್ತುತ ಪಡಿಸದೇ ಇರುವ ದಿನ ಬಂದರೂ ಬರಬಹುದು. ಹೀಗಾದಾಗ ಒಂದು ಕಲಾ ಪ್ರಕಾರ ಯಾವ ಸಾಂಸ್ಕೃತಿಕ ವಾತಾವರಣದಲ್ಲಿ ನೈಜ ಸಂವೇದನೆ ಹೊರಗೆ .... ಮನುಷ್ಯನನ್ನು ತಲುಪಬಹುದು ಆ ಸಾಧ್ಯತೆಯನ್ನು ಅದು ಕಳೆದುಕೊಳ್ಳಬೇಕಾಗುತ್ತದೆ. ಅಸಹಜವಾಗುತ್ತ ಸಾಗಬೇಕಾಗುತ್ತದೆ."[೨] ಈ ಸಂದರ್ಭದಲ್ಲೊ ಒಂದಂತೂ ನಿಜ, ನಮ್ಮ ಪೂರ್ವಿಕರಿಗೂ ನಮಗೂ ಬಹಳ ಅಂತರವಿದೆ ಹಾಗೆಯೇ ನಮಗೂ ನಮ್ಮ ಮುಂದಿನ ಪೀಳಿಗೆಗೂ ಅಂತರವಿದೆ. ಈ ಅಂತರದಲ್ಲಿ

ಎಷ್ಟೋ ವಿಚಾರಗಳು ಬಂದು ಹೋಗುತ್ತವೆ. ಒಬ್ಬ ಸಂಘಟನೇಕಾರ ಯಾವುದಕ್ಕೆ ಹೆಚ್ಚು ಒತ್ತು ಕೊಡಬೇಕು ಎಂಬುದನ್ನು ಬಹು ಎಚ್ಚರದಿಂದ ಕಾಯ್ದುಕೊಳ್ಳಬೇಕು.

ಆಧುನೀಕರಣ, ಜಾಗತೀಕರಣ ಹಿಂಸೆಯ ರೂಪದತ್ತ ತಿರುಗಿವೆ. ವಸಾಹತುಶಾಹಿ ಸಂದರ್ಭದಲ್ಲಿ ನವೋದಯ ಕಾಲದಲ್ಲಿ ಕುಟುಂಬ ಗ್ರಾಮ, ದೇಶದ ಹಿತ ಮುಖ್ಯವಾಗಿತ್ತು. ಆ ಸಂಬಂಧವಾದ ಸಾಹಿತ್ಯ ಹೊರ ಬಂತು. ಆ ಸಂದರ್ಭದಲ್ಲಿ ಬಂದ ಸಿನಿಮಾಗಳೂ ಅದೇ ಆಶಯವನ್ನು ಹೊತ್ತಿದ್ದವು. ನಂದಾದೀಪ, ಗೌರಿ, ಸತ್ಯ ಹರೀಶ್ಚಂದ್ರ, ಬಸವಣ್ಣ, ಬಂಗಾರದ ಮನುಷ್ಯ, ಮಹಾಕವಿ ಕಾಳಿದಾಸ ಈ ಸಿನಿಮಾಗಳಲ್ಲಿ ಸಂಸ್ಕೃತಿಯನ್ನು ಬಿಟ್ಟು ಅಲುಗಾಡಿರಲಿಲ್ಲ. ಸಾಹಿತ್ಯ ಮತ್ತು ಸಂಸ್ಕೃತಿಯ ಸಂಬಂಧ ಇದ್ದೇ ಇತ್ತು. ಅವೆರಡರ ನಡುವೆ ಒಪ್ಪಂದವಿರದಿದ್ದರೂ, ಅವೆರಡರಲ್ಲೂ ಸಂಬಂಧವಿದ್ದೇ ಇತ್ತು.

ಈಗ ವ್ಯಾಪಾರೀಕರಣದ ಹಿನ್ನೆಲೆಯಲ್ಲಿ ಹಿಂಸೆಯ ಪ್ರಚೋದನೆ ಇಷ್ಟೆ.

'ಬಡಿ ಮಗ ಬಡಿ ಮಗ ಬಡಿ ಮಗ ಬಿಡಬೇಡ ಅವನ್ನ<br>
ಶ್ರೀರಾಂಪುರ ಗಲ್ಲಿಸುತ್ತು ಮುಂದಕ್ ಬಂದ್ರೆ ಮಚ್ಚ ಎತ್ತು<br>
ಬಿಡಬೇಡ ಅವನ್ನ<br>
ಈ ಭೂಮಿ ಮ್ಯಾಲೆ ಹುಟ್ಟಿದ ಮ್ಯಾಗೆ ಸಾವೇ ಕಣೋ,<br>
ಈ ಕೈಗೆ ಮಚ್ಚು ಎತ್ತಿದ ಮೇಲೆ ಬದುಕು ಕಣೋ ......... (ಜೋಗಿ)

ಇಂತಹ ಹಾಡುಗಳು ಹುಟ್ಟಿ ಕೊಳ್ಳುತ್ತಿವೆ. ಬದುಕಿನ ಭಾಗವಾಗಿ ಭಯೋತ್ಪಾದನೆ ಬೆಳೆಯುತ್ತಿದೆ. ಇತಿಹಾಸದ ಮರುಕಳಿಕೆಯಾಗಿದೆ. ಬಂಡವಾಳ ಶಾಹಿಯ ಕೈಯಲ್ಲಿ ವ್ಯಾಪಾರ ಗೆಲ್ಲುವುದೆಂದರೆ ಹಿಂಸೆಯೇ ಆಗಿದೆ. ಇಂದು ಹಿಂಸೆಯ ನೆಲೆಯಲ್ಲಿ ಎಲ್ಲವೂ ನರಳುತ್ತಿವೆ. ಹಣ ಮಾಡುವುದು ಮತ್ತು ಗೆಲ್ಲುವುದು ಎಂದರೆ ಹಿಂಸೆ. ಇಂದು ಸಂಸ್ಕೃತಿಯ ಪ್ರತಿನಿಧಿಯಾಗಿ ಸಿನಿಮಾ ನಿಲ್ಲುವುದಿಲ್ಲ. ಹಾಗೊಮ್ಮೆ ನಿರ್ಮಿಸಿದ್ದಾದರೆ, ನಗೆ ಪಾಟಲಾಗುತ್ತದೆ. ಬಾಲ ನಾಗಮ್ಮ, ಬೇಡರ ಕಣ್ಣಪ್ಪನಂಥ ಸಿನಿಮಾಗಳು ಇವತ್ತು ಸಾಧ್ಯವಿಲ್ಲ. ಹಿಂಸೆಯ ನೆಲೆಯಲ್ಲಿರುವುದರಿಂದ ಅಂಥವ ಸಾಧ್ಯವಾಗುತ್ತಿಲ್ಲ. ಹಾಗಾಗಿ ಈ ಕಲೆಯನ್ನು ಉಳಿಸಲಾಗಲೀ ಗೌರವದಿಂದ ಕಾಣಲಾಗಲೀ ಸಾಧ್ಯವಿಲ್ಲ. ಹೀಗಾಗಿ ಜನಪದ ಕಲೆಗಳನ್ನು ಉಳಿಸಲು ಅಸಾಧ್ಯ. ಆದ್ದರಿಂದ, 'Culture' ನರಳುತ್ತಿದೆ ಎನಿಸುತ್ತದೆ.

Culture ನರಳಿದರೆ ಜನಪದ ಕಲೆಗಳು ಉಳಿಯೋದೇ ಇಲ್ಲ. 'ಶಿಷ್ಟ ಕಲೆಗಳೇ' ಉಳಿಯುತ್ತಿಲ್ಲ ಇನ್ನು ಜನಪದ ಕಲೆಗಳ ಗತಿ ಏನು ? ತ್ರಿಶೂಲ, ಬಾಣಬಿಲ್ಲು, A.K. 47 ಇವುಗಳದೇ ಪಾರುಪತ್ಯವಾಗಿದೆ. ಇಂಥವುಗಳ ಪ್ರಭಾವದ ಸಂದರ್ಭದಲ್ಲಿ ಜಾಗತೀಕರಣದ ಫಲಿತಾಂಶ ಹಿಂಸೆಯಲ್ಲದೆ ಮತ್ತೇನಿಲ್ಲ. ಶಿವರಾಮ ಸೇನೆ, ಸಿದ್ಧರಾಮ ಸೇನೆ, ಕನಕ ಸೇನೆ, ವಿಷ್ಣು ಸೇನೆ – ಮುಂತಾದವು ಸೈನ್ಯಗಳಾಗಿ ರೂಪುಗೊಳ್ಳುತ್ತಿವೆ. ಸೇನೆ ಶುರುವಾದರೆ,

ಕಲೆಗೆ ಜಾಗವಿಲ್ಲ. ಕತ್ತಿಯನ್ನು ಹಿಡಿದಿದ್ದ ಕನಕದಾಸನಂಥವರು ಆಧ್ಯಾತ್ಮದತ್ತ ವಾಲಿದರು. ಸೇನೆ ಪರಿಕಲ್ಪನೆ ಹೋಗಬೇಕೆಂದು ಬಯಸಿದವರು. ಇವತ್ತು ಮತ್ತೇ ಸೇನೆಗಳು ಸೃಷ್ಟಿಯಾಗುತ್ತಿವೆ. ವಿರೋದಾಭಾಸಗಳ ನೆಲೆಯಲ್ಲಿ ಶ್ರೀಸಾಮಾನ್ಯನ ಬದುಕು ಸಾಗುತ್ತಿದೆ. ಬುದ್ಧ, ಬಸವ, ಗಾಂಧಿ, ಅಂಬೇಡ್ಕರ್ ಧ್ಯೇಯೋದ್ದೇಶಗಳು ನಮ್ಮ ನಿಜವಾದ ನೆಲೆಗಳಾಗಬೇಕಾಗಿದೆ. ಹಾಗಾದಾಗ ಕಲೆ, ಸಾಹಿತ್ಯ ಎಲ್ಲವು ಸಂಸ್ಕೃತಿಯ ಭಾಗವಾಗುತ್ತವೆ. ಇಷ್ಟಾಗಿಯೂ ಜಾಗತೀಕರಣದಿಂದ ಆಗುವ ಲಾಭಗಳನ್ನು ಅಲ್ಲಗಳೆಯುವಂತಿಲ್ಲ. ಪ್ರೋತ್ಸಾಹವು ಯಾವ ಮಾದರಿಯದ್ದಾಗಿರಬೇಕು ಎಂಬುದು ತಿಳಿದರೆ, ಬಹುಶಃ ಜಾಗತೀಕರಣದ ಸಂದರ್ಭದಲ್ಲಿ ಪ್ರದರ್ಶನ ಕಲೆಗಳು ಸೊರಗುವುದಿಲ್ಲ ಎಂಬುದು ನಿಜ. ಜಾಗತಿಕ ಮಟ್ಟದಲ್ಲಿ ಜನ ನಿರೀಕ್ಷಿಸುವ ಮಾರ್ಪಾಡನ್ನು ಪ್ರದರ್ಶನ ಕಲೆಗಳಲ್ಲಿ ತರಬೇಕು. ಎಲೆಕ್ಟ್ರಾನಿಕ್ ಮಾಧ್ಯಮದ ಬಳಕೆ ಸಂಪೂರ್ಣ ಆಗಬೇಕು.

ವಿಶ್ವವೇ ಒಂದು ಪುಟ್ಟ ಹಳ್ಳಿಯಾಗಿ ಪ್ರತಿಯೊಂದು ಮಾಹಿತಿಯು ಶರವೇಗದಲ್ಲಿ ತಲುಪಬೇಕಾದ ಅಗತ್ಯತೆ ಇರುವಾಗ ಪ್ರದರ್ಶನ ಕಲೆಗಳ ಮೂಲ ಉದ್ದೇಶಗಳನ್ನು ಮಾಹಿತಿ ತಂತ್ರಜ್ಞಾನದ ಜೊತೆ ಜೊತೆಗೆ ಕೊಂಡೊಯ್ಯುವ ಕಾರ್ಯವನ್ನು ಕಲೆಯ ಬಗ್ಗೆ ಅಪಾರ ಕಾಳಜಿ ಇರುವ ಅಕಾಡೆಮಿಗಳು, ಸಂಘ ಸಂಸ್ಥೆಗಳು ಅಷ್ಟೇ ತ್ವರಿತವಾಗಿ ಕಾರ್ಯೋನ್ಮುಖರಾಗಬೇಕು. 'It is Just like Art of living' ಕಾರ್ಯಕ್ರಮ ಹೇಗೆ ವಿಶ್ವದ ಜನರೆಲ್ಲರನ್ನು ಆಧ್ಯಾತ್ಮಿಕ ಹಿನ್ನೆಲೆಯಲ್ಲಿ ಸಂಮೋಹನಗೊಳಿಸಿದೆಯೋ ಹಾಗೆಯೇ, ಜಾನಪದಾಸಕ್ತರು ಮುಂದೆ ಬರಬೇಕು. ಸರಕಾರದ ಅನುದಾನಗಳಿಂದ, ವಿಶ್ವವಿದ್ಯಾನಿಲಯಗಳ ಅನುದಾನದಿಂದ, ಧನ ಸಹಾಯ ಆಯೋಗಗಳಿಂದ ನಿರಂತರವೂ ಕಾರ್ಯಪ್ರವೃತ್ತರಾಗಬೇಕಾಗಿದೆ.

ಇಂದಿನ ಜಾಗತೀಕರಣವೂ ಸಹ ಸಂಸ್ಕೃತಿಯ ಒಂದು ಅವಿಭಾಜ್ಯ ಅಂಶವೇ ಆಗಿದೆ. ಸಂಸ್ಕೃತಿ ಎಂದರೆ, ಮಾನವ ನಿರ್ಮಿತ, ತನಗಾಗಿ ತನ್ನಿಂದ, ತನಗೋಸ್ಕರವಾಗಿ ವಿಶ್ವವನ್ನು ತಲುಪಬೇಕು. ಆದ್ದರಿಂದರ, ಜಾಗತೀಕರಣವನ್ನು ಒಂದು ಶಾಪವಾಗಿ ಪರಿಗಣಿಸಬಾರದು. ಹಾಗಾಗಿ, ತಂತ್ರಜ್ಞಾನದಿಂದ ಏನೆಲ್ಲಾ ಸಾಧಿಸಬಹುದು. ದೇಶೀಯತೆಯನ್ನು ಕೂಡ ಉಳಿಸಿಕೊಳ್ಳಬಹುದು. ಉದಾ : ಕೊಳಾಯಿಯಿಂದ ಬರುವ ನೀರನ್ನು ಸೇದುವ ತಾಳ್ಮೆ ಯಾರಿಗೆ ಇದ್ದೀತು. ಮಾನವ ತನ್ನ ಬದುಕಿನಲ್ಲಿ ಹಂತ ಹಂತವಾಗಿ ತಂತ್ರಜ್ಞಾನವನ್ನು ಅಳವಡಿಸಿಕೊಂಡಂತೆ ಪ್ರದರ್ಶನ ಕ್ಷೇತ್ರದಲ್ಲೂ ಇತರ ಮಾಧ್ಯಮಗಳಿಗೆ ಸವಾಲಿನಂತೆ ಜನಪದ ಮಾಧ್ಯಮವನ್ನು ವಿಸ್ತರಿಸಿಕೊಳ್ಳಬೇಕಾದ ಅವಶ್ಯಕತೆ ಇದೆ.

ಸಿನಿಮಾ ನಿರ್ದೇಶಕ ನಿಜಕ್ಕೂ ಚತುರನೇ ಸರಿ. ಆತನಿಗೆ ಜನರ ಅಭಿರುಚಿ ಯಾವುದು ಇದೆ ಎಂಬುದನ್ನು ಅರಿತು ತನ್ನ ಚಿತ್ರ ಬಾಕ್ಸ್ ಆಫೀಸಿನಿಂದ ಹಿಟ್ ಆಗಲೀ ಎಂದೇ ಕಲೆಯನ್ನು ಬಳಸುತ್ತಾನೆ. ಕೊನೆ ಪಕ್ಷ ಸಂಸ್ಕೃತಿಯ ವಾಹಕನಾಗಿದ್ದಾನೆ.

ಕಣ್ಮರೆಯಾಗುತ್ತಿರುವ ಎಷ್ಟೋ ಸಾಂಸ್ಕೃತಿಕಾಂಗಗಳನ್ನು ಅಲ್ಪ ಸ್ವಲ್ಪ ಬಳಸಿಯೇ ಇದ್ದಾನೆ. ಜನರಿಗೆ ಹೇಗಾದರೂ ತಲುಪಿಸುವ ಕಲೆಯ ಅವಶ್ಯಕತೆ ಇಂದು ತುಂಬಾ ಅಗತ್ಯವಾಗಿದೆ. ಅವರ ದೇಶ, ನಾಡು, ನುಡಿ, ಕಲೆಗಳ ಬಗ್ಗೆ ಈ ಮೂಲಕ ಅರಿವು ಮೂಡಿಸುವುದು ಹಾಗೂ ಏಕ ಕಾಲದಲ್ಲಿ ಎಲ್ಲರಿಗೂ ತಲುಪಿಸುವ ಕಾರ್ಯ ಈ ಜಾಗತೀಕರಣದಿಂದಲೇ ಅಲ್ಲದೇ ಬೇರೆ ಅಲ್ಲ. ಕೂಡಲೇ ಫೋನಾಯಿಸುವವರು ಮೊಬೈಲ್ ಗೆ ಶರಣಾಗುವರು ಜಾಗತೀಕರಣದ ಬಗ್ಗೆ ಅಸಡ್ಡೆ ಏಕೆ ? ನಮ್ಮ ಜನಪದರಿಗೆ ತಂತ್ರಜ್ಞಾನದ ಅರಿವು ಅಗತ್ಯ. ಕ್ಷೇತ್ರದಲ್ಲಿ ಆಸಕ್ತಿಯಿಂದ ದುಡಿಯುವವರನ್ನು ಗುರುತಿಸಿ ಸಂಘಟಿಸುವ ಅವಶ್ಯಕತೆ ಇಂದು ಬೇಕಾಗಿದೆ. ಇದನ್ನು ನಾವು ಅರಿತುಕೊಳ್ಳದಿದ್ದರೆ, ನಾಯಿ ಕೊಡೆಗಳಂತೆ ಇನ್ನೂ ಅಪಾಯಕಾರಿಯಾದ ಸಂಗತಿಗಳು ಯುವ ಪೀಳಿಗೆಯನ್ನು ಕಬಳಿಸುವ ಸಾಧ್ಯತೆ ಇದೆ.

❖

ಅಡಿ ಟಿಪ್ಪಣಿಗಳು :

೧. ಜಾನಪದ ೯೨, ಪುಟ ೨೩೮ ಹಿ. ಚಿ. ಬೋರಲಿಂಗಯ್ಯ (ಸಂ)
೨. ಕರ್ನಾಟಕ ಜನಪದ ಕಲೆಗಳ ಕೋಶ, ಕನ್ನಡ ವಿ. ವಿ. ಪ್ರಸ್ತಾವನೆ
೩. ಅರವಿಂದ ಚೊಕ್ಕಾಡಿ ಅನ್ವಯ ಪುಟ ೧೪-೧೫.

# ಜನಪದ ಕರಕುಶಲ ಕಲೆಗಳು

## ಜಾಗತೀಕರಣ

ಡಾ. ಬಿ. ಎಸ್. ತಲವಾಡಿ

◆

ಜನಪದ ಭೂಮಿಕೆಯ ಮೇಲೆ ರೂಪು ತಾಳಿದ ಕೌಶಲ್ಯ ಪೂರ್ಣ ಕರಗೆಲಸದ ಕಲೆಗಳನ್ನು ಕರಕುಶಲ ಕಲೆಗಳು ಎನ್ನಬಹುದು. ಕರಕುಶಲ ಕಲೆಗಳು ಮುಖ್ಯವಾಗಿ ಕೈಗೆಲಸದ ವಸ್ತುಗಳಾಗಿದ್ದು, ಅವು ಕಲಾಕಾರನ ನೈಪುಣ್ಯ, ಕೈಚಳಕಗಳಿಂದ ಸೌಂದರ್ಯವನ್ನು ಒಳಗೊಂಡಿರಬೇಕು. ಕಲೆ ಎನ್ನುವುದೇ ಸೌಂದರ್ಯಾನುಭವದ ಅಭಿವ್ಯಕ್ತಿ. ಹದಿನೈದನೇ ಶತಮಾನದ ಬಹುದೊಡ್ಡ ಕಲಾವಿದ ಲಯೋನಾರ್ಡೊದವಿಂಚಿ ಕೂಡ ಈ ಮಾತನ್ನು ಅನುಮೋದಿಸುತ್ತಾನೆ. ಕಲೆ ದೃಷ್ಟಿಯಲ್ಲಿ ಅರಳಿ ಸಮಷ್ಟಿಯದಾಗಬೇಕು. ಶಿಷ್ಟ ಕಲೆಗಳಲ್ಲಿ ವ್ಯಷ್ಟಿ ಉಳಿದುಕೊಂಡರೆ, ಜನಪದ ಕಲೆಗಳಲ್ಲಿ ಸಮಷ್ಟಿ ಪ್ರಧಾನವಾಗುತ್ತದೆ. ಇಲ್ಲಿ ಸಮೂಹ ಬಹಳ ಮುಖ್ಯ. ಕಲೆ ಸಂಪರ್ಕ ಸಾಧನ ಹೇಗೋ ಸಮಾಜ ಸುಧಾರಕವೂ ಹೌದು. ಈ ಕಾರಣದಿಂದ ಕಲೆಯನ್ನು ಕೇವಲ ಸದುದ್ದೇಶಕ್ಕಾಗಿ ಬಳಸಬೇಕೆಂದು ಟಾಲ್‌ಸ್ಟಾಯ್ ಎಚ್ಚರಿಕೆ ನೀಡುತ್ತಾನೆ.

ಈ ಲೇಖನದ ಸ್ಪಷ್ಟ ಕಲ್ಪನೆಗೆ ಕಲೆಯ ಬಗ್ಗೆ ಇನ್ನೂ ಸ್ವಲ್ಪ ವಿವರಣೆ ಅನಿವಾರ್ಯ. 'ಕಲೆ' ಎಂದರೆ 'ಅಂಶ' ಎಂಬ ಅರ್ಥ ಋಗ್ವೇದದಲ್ಲಿದೆ. ಕಲೆ ಎಂಬುದು ಆ ದಿವ್ಯ ಶಕ್ತಿಯ ಒಂದು ಕಾಂತಿಯ ಕಿರಣ. ಕಲೆ ಎಂಬುದರ ಸಾಮಾನ್ಯ ಅರ್ಥ ಉಪಾಯ, ಕೌಶಲ ಎಂದು. ಆದ್ದರಿಂದ, "ಕಲೆ ಎಂದರೆ, ಉಪಾಯ ಅಥವಾ ಕೌಶಲದಿಂದ ಮನುಷ್ಯ ತನ್ನ ಭಾವನೆಗಳನ್ನು, ಆಲೋಚನೆಗಳನ್ನು ಮನ ಮುಟ್ಟುವ ಹಾಗೆ, ಅಭಿವ್ಯಕ್ತಿಸುವ ಒಂದು ವಿಧಾನ" ಎನ್ನಬಹುದು. ಈ ತಾತ್ಪರ್ಯವನ್ನು ಮತ್ತೂ ಸರಳಗೊಳಿಸಿದರೆ, "ಮಾನವನ ಕ್ರಿಯಾ ಶಕ್ತಿಯ ಕುಶಲ ಅಭಿವ್ಯಕ್ತಿ ಕಲೆ" ಎಂದಾಗುತ್ತದೆ. ಮೊದಲೇ ಹೇಳಿದ ಹಾಗೆ ಕಲೆ ಸೌಂದರ್ಯವನ್ನು ಅಂತರ್ಗತ ಮಾಡಿಕೊಂಡಿರುತ್ತದೆ. ಆ ಸೌಂದರ್ಯ ಸೌಂದರ್ಯಕ್ಕಾಗಿ ಇರದೇ, ಅದು ಸತ್ಯವಾಗಿರಬೇಕು, ಸತ್ಯವನ್ನು ಪ್ರತಿನಿಧಿಸಬೇಕು. ಸೌಂದರ್ಯ ಸತ್ಯವಾಗಿ, ಸತ್ಯ ಶಿವವಾಗಬೇಕು.  ಈ ಮೂರೂ ಗುಣಗಳು ಸೇರಿದಾಗ ಮಾನವನ ಮನಸ್ಸಿಗೆ ಆನಂದವನ್ನುಂಟು ಮಾಡುತ್ತವೆ. ಅದಕ್ಕೇ ನಮ್ಮಲ್ಲಿ 'ಸತ್ಯಂ ಶಿವಂ ಸುಂದರಂ' ಎಂಬ

ವಾತಿರುವುದು. ಇಲ್ಲಿ ಆಂಗ್ಲ ಕವಿ ಕೀಟ್ಸ್ ನ "ಸತ್ಯವಾದುದೆಲ್ಲ ಸುಂದರ, ಸುಂದರವಾದುದೆಲ್ಲ ಸತ್ಯ" ಎಂಬ ಮಾತು ( Beauty is truth and the truth is beauty) ನೆನಪಾಗುತ್ತದೆ. ಸೌಂದರ್ಯ ವ್ಯಕ್ತಿಯಿಂದ ವ್ಯಕ್ತಿಗೆ, ಕಾಲದಿಂದ ಕಾಲಕ್ಕೆ ಭಿನ್ನವಾಗುತ್ತದೆ. ಸತ್ಯವು ಈ ಮಾತಿಗೆ ಹೊರತಲ್ಲ (ಹಲವು ಬಗೆಯ ಕಲೆಗಳನ್ನು ನೋಡಿದಾಗ ಈ ಭಿನ್ನತೆ ತಿಳಿಯುತ್ತದೆ). ಇದು ಚರ್ಚಾಸ್ಪದ ವಿಚಾರ, ಇರಲಿ. ಒಟ್ಟಿನಲ್ಲಿ ಕಲೆ ಮಾನವ ಮನಸ್ಸಿಗೆ ರಸಾನಂದವನ್ನುಂಟು ಮಾಡಬೇಕು. ಈ ರಸಾನಂದ ಬ್ರಹ್ಮಾನಂದ ಸೋದರಃ" ಎಂದಿರುವುದು. ಈ ರಸಾನಂದ ಗುಣ ಎಲ್ಲಾ ಕಲೆಗಳಿಗೂ ಏಕ ಪ್ರಕಾರವಾಗಿರುವುದಿಲ್ಲ. ಕೆಲವು ಕಲೆಗಳಿಗೆ ಹೆಚ್ಚಾಗಿರುತ್ತದೆ, ಮತ್ತೆ ಕೆಲವು ಕಲೆಗಳಿಗೆ ಕಡಿಮೆ ಪ್ರಮಾಣದಲ್ಲಿರುತ್ತದೆ. ಉದಾ : ಚಿತ್ರಕಲೆ, ನೃತ್ಯಕಲೆ, ಸಂಗೀತ ಕಲೆ, ಶಿಲ್ಪ ಕಲೆಗಳಿಗೆ ರಸಾನಂದ ಗುಣ ಅಧಿಕವಾಗಿರುತ್ತದೆ. ಈ ಕಾರಣದಿಂದ ಇವನ್ನು ಲಲಿತ ಕಲೆಗಳು (Fine Arts) ಎಂದು ಗುರುತಿಸಲಾಗಿದೆ. ಉಪಯುಕ್ತತೆ ಮೂಲವಾದ ಅಥವಾ ಕೃಷಿ ಸಹಾಯಕವಾದ ಕಲೆಗಳನ್ನು ಕರಕುಶಲ ಕಲೆಗಳು (Crafts) ಎಂದು ಕರೆಯುತ್ತೇವೆ. ಲಲಿತ ಕಲೆಗಳು ಭಾವ ಪೂರ್ವಕ ನಿರ್ಮಿತಿಯಾದರೆ, ಜನಪದ ಕರಕುಶಲ ಕಲೆಗಳು ಪ್ರಜ್ಞಾಪೂರ್ವಕ ನಿರ್ಮಿತಿ. ಲಲಿತ ಕಲೆಗಳದು ಹೆಚ್ಚಾಗಿ ಮಾನಸಿಕ ದುಡಿಮೆ. ಜನಪದ ಕರಕುಶಲ ಕಲೆಗಳದು ದೈಹಿಕ ದುಡಿಮೆ. ಇಷ್ಟಿದ್ದರೂ, ಲಲಿತ ಕಲೆ ಹಾಗೂ ಕರಕುಶಲ ಕಲೆಗಳ ಮಧ್ಯೆ ನಿರ್ಣಾಯಕ ಗೆರೆ (Demartration) ಎಳೆಯುವುದು ಸಾಧ್ಯ ವಾಗುವುದಿಲ್ಲ. ಅಧ್ಯಯನದ ಅನುಕೂಲದೃಷ್ಟಿಯಿಂದ ಹೀಗೆ ಬೇರ್ಪಡಿಸಬಹುದು ಅಷ್ಟೇ.

ಭಾರತೀಯ ಸಾಂಪ್ರದಾಯಿಕ ೬೪ ಕಲೆಗಳಲ್ಲಿ ಕರಕುಶಲ ಕಲೆಗಳೂ ಸೇರಿವೆ. ಯಂತ್ರ ನಿರ್ಮಿತ ವಸ್ತುಗಳಲ್ಲದ ದೇಶೀಯ ರಚನೆಗಳನ್ನೊಳಗೊಂಡ ಉಪಯುಕ್ತ ಕಲೆಗಳನ್ನು ಮಾತ್ರ ಇಂದು ಜನಪದ ಕರಕುಶಲ ಕಲೆಗಳೆಂದು ಗುರುತಿಸಲಾಗುತ್ತಿದೆ. ಇವು ಮಾನವ ನಿರ್ಮಿತ ಕಲಾ ವಸ್ತುಗಳಾದರೂ ಇವುಗಳ ಉಗಮ ದೈವ ಮೂಲದ್ದು.

ಕರಕುಶಲ ಕಲೆಗಳು ಮೊದಲು ತ್ರಿಮೂರ್ತಿಗಳಿಂದು ಋಷಿಗಳಿಗೂ, ಋಷಿಗಳಿಂದ ದೇವ ಮಾನವ ಶಿಲ್ಪಿಗಳಿಗೂ ಬೋಧಿಸಲ್ಪಟ್ಟು ಅವು ಲೋಕದಾದ್ಯಂತ ವಿಕಸನ ಹೊಂದಿದವು ಎಂದು ವೇದಶಾಸ್ತ್ರ ಪುರಾಣಗಳು ಹೇಳುತ್ತವೆ. ಈ ಹಿನ್ನೆಲೆಯಲ್ಲಿ ಸೃಜನ ಶೀಲ ವ್ಯಕ್ತಿ ರೂಪವಾದ 'ವಿಶ್ವ ಕರ್ಮ' ವನ್ನು ಸೃಷ್ಟಿಸಿವೆ. ಪುರಾಣಗಳ ಪ್ರಕಾರ ವಿಶ್ವ ಕರ್ಮ ತ್ವಷ್ಟ ಹಾಗೂ ರಿಭು. ತ್ವಷ್ಟ ಹಾಗೂ ರಿಭು ಭಿನ್ನ ಭಿನ್ನ ವ್ಯಕ್ತಿಗಳು. ತ್ವಷ್ಟ ಎಂದರೆ ರೂಪಕಾರ (Shaper) ರಿಭು ಎಂದರೆ ಕುಶಲಿ (Skilfull) ಎಂಬ ಅರ್ಥ ಗಮನೀಯ. ಸ್ವರ್ಗ – ಮರ್ತ್ಯ, ದೇವ – ಮಾನವ, ಪ್ರಾಣಿ–ಸಸ್ಯ–ಜಡ ಇವೆಲ್ಲವುಗಳ ನಿರ್ಮಾತೃ ವಿಶ್ವಕರ್ಮ. ಹಾಗಾಗಿ ಆತ ವಿಧಾತ್ರ (Creater) ನಿರ್ಮಾತೃ ಅಥವಾ ರಚನಾಕಾರ (Workman) ಕರ್ತೃ ಅಥವಾ ತಕ್ಷಕ (Carver) ಕೆತ್ತನೆಗಾರ ಎಂಬ ಅವನ ಅನ್ವರ್ಥನಾಮಗಳು 'ಕುಶಲಿ' ಎಂಬುದನ್ನು ಸೂಚಿಸುತ್ತವೆ.

ವಿಶ್ವ ಕರ್ಮ ಜನಿತ – ಕುಶಲ ಕಲೆಗಳೆಲ್ಲವೂ ವಂಶಸ್ಥವಾಗಿ ವಿಕಸನಗೊಂಡವು ಎಂಬುದನ್ನು ಸೂತ್ರೀಕರಿಸಲು ವಿಶ್ವಕರ್ಮನಿಗೆ ಐದು ಮಕ್ಕಳಿದ್ದವು ಎಂದು ಆರೋಪಿಸಿದೆ. ಆ ಐದು ಮಕ್ಕಳು ಕ್ರಮವಾಗಿ ತ್ವಷ್ಟ, ಮನು, ಮಯ, ಶಿಲ್ಪಿ ಮತ್ತು ವಿಶ್ವಜ್ಞ, ಇವರು ಅನುಕ್ರಮವಾಗಿ ಕಬ್ಬಿಣ, ಮರ (ಕಾಷ್ಟ), ತಾಮ್ರ, ಶಿಲೆ ಮತ್ತು ಚಿನ್ನ – ಹೀಗೆ ಪಂಚ ಸಾಮಗ್ರಿಗಳಲ್ಲಿ ಕುಶಲಿಗಳಾಗಿದ್ದರೆಂದು, ಸ್ಕಂದ, ಬ್ರಹ್ಮಾಂಡ, ವಶಿಷ್ಠ ಪುರಾಣಗಳಲ್ಲಿ ಹೇಳಿದೆ.

ಕರ ಎಂದರೆ ಕೈ ಅಥವಾ ಕೈಗಳು ಕಚ್ಚಾ ಸಾಮಗ್ರಿ (ಕಲ್ಲು, ಮಣ್ಣು, ಮರ, ಚರ್ಮ, ಕಾಗದ, ಪ್ಲಾಸ್ಟಿಕ್, ಹುಲ್ಲು, ಜೊಂಡು ಯಾವುದೇ ಆಗಿರಬಹುದು) ಯನ್ನು ಉಪಯೋಗಿಸಿ, ನಿರ್ದಿಷ್ಟ ಉದ್ದೇಶದ ಹಿನ್ನೆಲೆಯಲ್ಲಿ ಆಕರ್ಷಕವೂ, ಉಪಯುಕ್ತವೂ ಆದ ಒಂದು ವಸ್ತುವನ್ನು ರೂಪಿಸುವ ಕುಶಲತೆಯನ್ನೇ ಕರಕುಶಲ ಕಲೆ ಎನ್ನಲಾಗುವುದು.

ಕರ ಕುಶಲ ಕಲೆಗಳು ಪ್ರಮುಖವಾಗಿ : ಲೋಹ ಶಿಲ್ಪ, ಆಭರಣ, ಮರದ ಕೆತ್ತನೆ, ಕಲ್ಲು ಕೆತ್ತನೆ, ಕುಂಭ ಕಲೆ, ಮಣ್ಣಿನ ಮೂರ್ತಿ, ಕೈ ಮಗ್ಗದ ಜವಳಿ, ಕಸೂತಿ, ಬಟ್ಟೆ ನೆಯ್ಗೆ, ಚಾಪೆ, ಬುಟ್ಟಿ ಹೆಣಿಕೆ, ಚರ್ಮದ ವಸ್ತುಗಳು ಇತ್ಯಾದಿ, ಇತ್ಯಾದಿ ........

ಮಾನವನ ಬೆಳವಣಿಗೆಯ ವಿಕಾಸದ ಜತೆ ಜತೆಗೆ ಜನಪದ ಕರಕುಶಲ ಕಲೆಗಳ ವಿಕಾಸವೂ ಆಯಿತು. ಮಾನವ ನಾಗರಿಕನಾದಂತೆ ಅವರ ಅಗತ್ಯಗಳು ಹೆಚ್ಚಾದವು. ಕರಕುಶಲ ವಸ್ತುಗಳು ಕೇವಲ ಉಪಯೋಗ ವಸ್ತುವಾಗದೇ ಅಲ್ಲಂಕಾರಿಕ ವಸ್ತುಗಳೂ ಆಗಿರಬೇಕೆಂಬ ನಿರೀಕ್ಷೆ ಅತಿಯಾಯಿತು. ಮಾನವಾಪೇಕ್ಷೆಯ ಅನುಗುಣ್ಯೆ ಕರಕುಶಲ ಕರ್ಮಿಗಳು ವಸ್ತು ನಿರ್ಮಾಣಕ್ಕೆ ತೊಡಗಿದರು. ಇವು ಭೋಗದ ವಸ್ತುಗಳೂ ಆಗಬೇಕೆಂಬ ಬಯಕೆಯಿಂದಾಗಿ ಈಚಲು ಚಾಪೆ, ಜೊಂಡಿನ ಮಂದಲಿಗೆಯಾಯಿತು, ಜೊಂಡಿನ ಮಂದಲಿಗೆ ಹತ್ತಿಯ ಮೆತ್ತೆಯ ಹಾಸಿಗೆಯಾಯಿತು, ಈಗ ಅದು ಜಾಗತೀಕರಣದ ಮಾಯಾ ಜಾಲಕ್ಕೆ ಸಿಲುಕಿ ಫೋಂ ಹಾಸಿಗೆಯಾಗಿ ಜನಪ್ರಿಯತೆ ಪಡೆದಿದೆ. ಈ ಮಾತನ್ನು ನಾವು ಎಲ್ಲಾ ಕರಕುಶಲ ವಸ್ತುಗಳಿಗೂ ಅನ್ವಯಿಸಬಹುದು (ಪಾಲಿತಿನ್ ಅಥವಾ ಪ್ಲಾಸ್ಟಿಕ್ ಚಾಪೆಗಳೂ ಆಗಿವೆ).

ಪ್ರಾಚೀನ ಹಾಗೂ ಪ್ರಮುಖ ಕುಶಲ ಕಲೆಗಾರರಾದ ಕುಂಬಾರ (ಮೃತ್ತಿಕಾ ಶಿಲ್ಪಿ), ಕಲ್ಕುಟಿಗ (ಶಿಲ್ಪಿ), ಬಡಿಗ (ಕಾಷ್ಠ ಶಿಲ್ಪಿ), ವಸನಕಾರ (ವಸ್ತ್ರ ಶಿಲ್ಪಿ) ಹಾಗೂ ಕಮ್ಮಾರ (ಲೋಹ ಶಿಲ್ಪಿ) ಮೊದಲಾದವರು ಇಂದು, ಪ್ರಮುಖವಾದ ಸಾಮಗ್ರಿಗಳ ಬಳಕೆ ಹಾಗೂ ಗ್ರಾಹಕರ ಬೇಡಿಕೆಗಳಿಗನ್ವಯ ಹೊಸ ಹೊಸ ಸಾಮಗ್ರಿಗಳ ಅನ್ವೇಷಣೆಯ ಜೊತೆಗೆ ವ್ಯಾಪಕ ವೈವಿಧ್ಯತೆಯನ್ನು ತರಬೇಕಾದ ಪರಿಸ್ಥಿತಿ ಜಾಗತೀಕರಣದಿಂದ ಉಂಟಾಗಿದೆ.

ಇಂದು ಎಂದಿಗಿಂತಲೂ ಹೆಚ್ಚಾಗಿ, ಪರಿಣಾಮಕಾರಿಯಾಗಿ, ತ್ವರಿತವಾಗಿ ಏಡ್ಸ್ ರೋಗದ ರೀತಿ ಕರಕುಶಲ ಕಲೆಗಳ ಮೇಲೆ ದಾಳಿ ಇಟ್ಟಿರುವ ಜಾಗತೀಕರಣದ ಜೊತೆ

ನಮ್ಮ ಕುಶಲ ಕರ್ಮಿಗಳು ಸದಾ ಸೆಣಸಬೇಕಾಗಿದೆ. ಏಕೆಂದರೆ, ಜಾಗತೀಕರಣಕ್ಕೆ ತನ್ನದೇ ಆದ ಉಪಯುಕ್ತತೆ ಇರುವಂತೆ ಹಿನ್ನೆಡೆಯೂ ಇದೆ. (It has its benefits and also serious setback).

## ಹಾಗಾದರೆ ಈ ಜಾಗತೀಕರಣ ಎಂದರೇನು ?

ಇಂದು ಮಧ್ಯಮ ವರ್ಗದವರೂ ಮಾಧ್ಯಮದವರೂ ಒಪ್ಪಿಕೊಂಡ ಒಂದು ತತ್ವ ಜಾಗತೀಕರಣ. ಸ್ವತಂತ್ರ ಮಾರುಕಟ್ಟೆಯ ಹೆಸರಿನಲ್ಲಿ ಪ್ರಪಂಚದಾದ್ಯಂತ ಏಕ ರೂಪದ ಸಂಸ್ಕೃತಿ ಹಾಗೂ ಆರ್ಥಿಕ ನೀತಿಯನ್ನು ಹೇರುವುದು ಇದರ ಮೂಲ ಉದ್ದೇಶ.

"ಪ್ರಪಂಚದಾದ್ಯಂತ ಮಾನವನ ಜೀವನವನ್ನು ಸುಧಾರಿಸುವುದು" (Improvement in the quality of human life all over the world) ಜಾಗತೀಕರಣದ ಗುರಿ ಎಂದು ಇದರ ಪ್ರಚಾರಕರು, ಜಾಗತೀಕರಣಕ್ಕೆ ವಿಶೇಷ ಅರ್ಥವನ್ನು ಆರೋಪಿಸುವರು. ಇದು ಬಂಡವಾಳಶಾಹಿಗಳ ಆರ್ಥಿಕ ನೀತಿಯ ಪ್ರತಿರೂಪ. ಜಾಗತಿಕ ಮಟ್ಟದಲ್ಲಿ ಬಂಡವಾಳಶಾಹಿತ್ವಕ್ಕೆ ಪ್ರತಿಯಾಗಿ ಹುಟ್ಟಿಕೊಂಡ ಜಾಗತೀಕರಣ ಯಾವ ಬಗೆಯಲ್ಲೂ ಸಮಾಜದ ಸಾಂಸ್ಕೃತಿಕ ಮೌಲ್ಯಗಳನ್ನಾಗಲೀ, ನಾಗರಿಕ ತತ್ವಗಳನ್ನಾಗಲೀ ಪ್ರತಿನಿಧಿಸುವುದಿಲ್ಲ. ನೋವಿಗೆ ವಿಮುಖವಾದ ಸುಖಾಪೇಕ್ಷಿತ ಸೌಖ್ಯ ತತ್ವವನ್ನು ಇದು ಪ್ರಚಾರ ಮಾಡುತ್ತದೆ. (........ it is bound to propagate headonism seeking pleasure and escape pain) .

ನೋವು ವಿಮುಖ ಸುಖಾಪೇಕ್ಷೆ (Painless pleasure) ಯನ್ನು ಇದು ಪ್ರಚೋದಿಸುವುದರಿಂದ ಕರಕುಶಲ ಕರ್ಮಿಗಳು ನಿರಾಪೇಕ್ಷಿತರಾಗಿ ಸುಲಭ ಹಣ ಸಂಪಾದನೆಗೆ ಅವರವರಲ್ಲೇ ಕತ್ತು ಕೊಯ್ಯುವ ಪೈಪೋಟಿ ನಡೆಸಲು ಅನುವು ಮಾಡಿ ಕೊಡುತ್ತದೆ. ಸೋಮಾರಿತನ ಪ್ರಾಪ್ತವಾಗುತ್ತದೆ. ಆರ್ಥಿಕ ಉತ್ಪತ್ತಿಯ ಹಂಚಿಕೆಯಿಂದ ಸಂಪಾದನೆ ಕಡಿಮೆಯಾಗುತ್ತದೆ. ಈ ಮಾತು ಎಲ್ಲಾ ಕ್ಷೇತ್ರಕ್ಕ ಅನ್ವಯಿಸುತ್ತದೆ. ಒಂದು ಕೆ. ಜಿ. ತೆಂಗಿನೆಣ್ಣೆಗೆ ಎಪ್ಪತ್ತು ರೂ. ಸಿಗುತ್ತಿದ್ದುದು, ಜಾಗತೀಕರಣದಿಂದಾಗಿ ಕೇವಲ ಮೂವತ್ತು ರೂ. ಗೆ ಇಳಿದಿದೆ ಎಂದು ಕೇರಳದ ರೈತರು ಜಾಗತೀಕರಣದ ವಿರುದ್ಧ ಮೊನ್ನೆ ಮೊನ್ನೆ ಚಳುವಳಿ ನಡೆಸಿದ್ದಿದೆ. ಪಾಶ್ಚಾತ್ಯದ (Western) ಈ ಹೊಸ ಘೋಷಣೆ ಜಾಗತಿಕಮಟ್ಟದಲ್ಲಿ ಕ್ಷಿಪ್ರವಾಗಿ ವ್ಯಾಪಿಸಿದೆಯಾದರೂ, ಅದು ಪಾಶ್ಚಾತ್ಯ ಸಮುದಾಯಕ್ಕೆ ಮಾತ್ರ ಲಾಭವಾಗುತ್ತದೆ. (..... the model of development that they prescribe for the rest of the world is one which has been found by them to have been very beneficially applied in their our societies - Srinivas Rao).

ಜೇಡಿ ಮಣ್ಣಿನಿಂದ ತಯಾರಿಸುತ್ತಿದ್ದ ಮಡಕೆ, ಪಾಸಾಲೆ, ಮುಚ್ಚಳ, ಗಡಿಗೆ, ಗುಂಬ, ಕುಡಿಕೆ ಮುಂತಾದ ಪಾತ್ರೆ ಪರಿಕರಗಳು ಇಂದು ಮಾಯವಾಗುತ್ತಿವೆ. ಹೂಜಿ,

ಬಟ್ಟಲು, ತಟ್ಟೆ. ಹಂಚು, ಕಾಳು ಸಂಗ್ರಹ ವಾಡೆ (ಕೊಂಬೆ) ದೀಪಗಂಭಗಳು ಕಾಣ ಸಿಗುವುದಿಲ್ಲ. ಧಾರ್ಮಿಕ ವಸ್ತುಗಳಾದ ಧೂಪಾರತಿ, ಹಣತೆ, ಹರಕೆಯ ಗೊಂಬೆಗಳು ಸಜೀವ ಗಾತ್ರದ ಹಾಗೂ ಸಣ್ಣ ಗಾತ್ರದ ಸತ್ವಪೂರ್ಣ ಮೃತ್ತಿಕಾ ರಚನೆಗಳೆಲ್ಲ ಕರ್ನಾಟಕದಲ್ಲಿ ವಿಶೇಷವಾಗಿ ಮರೆಯಾಗುತ್ತಿದೆ. ಅವುಗಳಿಗೆ ಪರ್ಯಾಯವಾಗಿ ಪಿಂಗಾಣಿ, ಗಾಜು, ಸುಡಾವೆ ಕಲಾ ವಸ್ತುಗಳು ಕಾಣಿಸಿಕೊಳ್ಳುತ್ತಿವೆ.

ಬಳಪದ ಕಲ್ಲಿನ ಅಡಿಗೆ ಸಾಮಗ್ರಿಗಳು, ದೀಪ, ಗೊಂಬೆಗಳು ಬೆಣಚುಗಲ್ಲಿನ ಕೊಡಲಿ, ಚಾಕು, ಉಳಿ ಮುಂತಾದವು ಇರಲಿ ಮಣಿಗಳು ಆಭರಣ ಪರಿಕರಗಳು ಹೇಳ ಹೆಸರಿಲ್ಲದಂತಾಗಿವೆ. ಮೂರ್ತಿಗಳ ನಿರ್ಮಾಣವೂ ಕಡಿಮೆಯಾಗುತ್ತಿದೆ. ಕಾಷ್ಠ ಶಿಲ್ಪಗಳಿಗೂ ಇದೇ ಗತಿ ಬಂದಿದೆ. ಲಖನೌ, ಕಾಶ್ಮೀರ, ಗುಜರಾತ್. ಸೌರಾಷ್ಟ್ರ ಹಾಗೂ ನಾಸಿಕ್‌ಗಳಲ್ಲಿ ಕಟ್ಟಿಗೆಯಿಂದ ತಯಾರಿಸಲಾದ ಜಾಲಿ, ಪಿಂಜರಾ (ಕಿಡಕಿ)ಗಳು, ತೊಲೆ, ಬೋಧಿಗೆ, ಕಿಟಕಿಗಳು ತುಂಬಾ ಪ್ರಖ್ಯಾತವಾದವು. ಹಾಗೆಯೇ ಪಂಜಾಬ, ಉತ್ತರ ಪ್ರದೇಶ, ಅಳಘರ, ಅಜಮಘರ, ಬರೇಲಿ, ಮಥುರಾ, ಬುಲಂದಶಹರ, ಗಾಜಿಪುರ ಮುಂತಾದೆಡೆಗಳಲ್ಲಿನ ಪೀಠೋಪಕರಣಗಳು, ಅಲಂಕಾರದ ಕೆತ್ತನೆಗಳು, ಕೊಡಗು, ಮೈಸೂರು, ಸಾಗರ, ಕುಮಟಾ, ಶಿವಮೊಗ್ಗ, ಉತ್ತರ ಕನ್ನಡ, ಟ್ರಾವಂಕೂರು, ತಿರುಚಿನಾಪಳ್ಳಿ ಮುಂತಾದೆಡೆಗಳ ಶ್ರೀಗಂಧದ ತಯಾರಿಕೆಗಳು ಅಂದು ಲೋಕ ವಿಖ್ಯಾತವಾಗಿದ್ದವು. ಚನ್ನಪಟ್ಟಣದ ಬಣ್ಣದ ಗೊಂಬೆಗಳು ಈಗ ಜಾಗತೀಕರಣದಿಂದಾಗಿ ನೆಲ ಕಚ್ಚಿವೆ. ನಿತ್ಯ ಬಳಕೆಯ ಕುರ್ಚಿ, ಮೇಜು, ಬೆಂಚು -ಕಪಾಟುಗಳು ಕಬ್ಬಿಣ ಅಥವಾ ಸ್ಟೀಲಿನಿಂದ ನಿರ್ಮಾಣವಾಗುತ್ತವೆ. ಮನೆಯ ಬಾಗಿಲಿನಾದಿಯಾಗಿ ಎಲ್ಲವೂ ಕಬ್ಬಿಣಮಯವಾಗಿವೆ. ಕಬ್ಬಿಣದ ಕೆಲಸಗಾರರು ಹೆಚ್ಚಾಗುತ್ತಿದ್ದಾರೆ. ಒಂದು ಕಡೆ ಆದ ನಷ್ಟ ಮತ್ತೊಂದು ಕಡೆಗೆ ಆದ ಲಾಭ ಹೌದು, ಆದರೆ, ಕಬ್ಬಿಣದ ವಸ್ತುಗಳು ಹೆಚ್ಚು ಯಂತ್ರ ನಿರ್ಮಿತವಾದುವು. ಇದು ಮಾನವನ ಕೆಲಸವನ್ನು ಕಸಿಯುತ್ತದೆ. ಅದರಿಂದ ಉತ್ಪಾದನೆ ಹೆಚ್ಚಾಗಿ ಸಂಪಾದನೆ ಕಡಿಮೆಯಾಗುತ್ತದೆ. ಇದಕ್ಕೆ ಮುಖ್ಯ ಕಾರಣ ಜಾಗತೀಕರಣ.

ಒಂದು ಕಾಲಕ್ಕೆ ಉಣ್ಣೆ, ರೇಷ್ಮೆ, ಜಿಂಕೆ ನವಿಲು, ಗಿಡದ ತೊಗಟೆ, ಮರದ ನಾರುಗಳಿಂದ ತಯಾರಿಸುತ್ತಿದ್ದ ಬಟ್ಟೆಗಳು ಈಗ ಮಶ್ಲೀನ್, ನೈಲಾನ್ ಮುಂತಾದ ವಸ್ತುಗಳಿಂದ ತಯಾರಾಗುತ್ತಿವೆ. ಅರಳೆ, ಮಕಮಲ್ ಮತ್ತು ರೇಷ್ಮೆ ಬಟ್ಟೆಗಳು ಒಂದು ಕಾಲಕ್ಕೆ ವಿಪರೀತವಾಗಿ ರಫ್ತಾಗುತ್ತಿದ್ದವು. ಕರ್ನಾಟಕದ ರೇಷ್ಮೆಯಂತೆ ಢಾಕಾದ ಮಲ್ ಮಲ್ ಲೋಕ ಪ್ರಸಿದ್ಧವಾಗಿದ್ದವು.

ಕಮ್ಮಾರಿಕೆ ಇಂದಿಗೂ ಹೊಸ ಹೊಸ ರೀತಿಯ ವಸ್ತು ವಿಶೇಷಗಳೊಂದಿಗೆ ತನ್ನತನ ಉಳಿಸಿಕೊಂಡಿದೆ. ಲೋಹದ ವಿಗ್ರಹಗಳು ಸರ್ವಶ್ರೇಷ್ಠ ಕಲಾ ಕೌಶಲ್ಯಗಳೆನಿಸಿವೆ. ವಿಶೇಷವಾಗಿ ಕಂಚಿನ ವಸ್ತುಗಳು ಒಂದು ಕಲಾ ಪ್ರಪಂಚವನ್ನೇ ನಿರ್ಮಿಸಿವೆ. ತಮಿಳುನಾಡು

ಕುಶಲಕರ್ಮಿಗಳ, ಕರಕೌಶಲ್ಯದ ನೂರಾರು ವಿನ್ಯಾಸಗಳ ಮೇಳ ಈಗಲೂ ಬೆಂಗಳೂರಿನ 'ಪೂಂಪುಹಾರ್' ನಲ್ಲಿ ನಡೆಯುತ್ತದೆ. ಕಂಚು, ತಾಮ್ರ, ಇನ್ ಲೇ ಮಾಡಿದ ಉತ್ಪನ್ನಗಳು, ನವಿರು ಕೆತ್ತನೆಯ ಕಾರ್ವಿಂಗ್ ನ ಕಾಷ್ಠ ಶಿಲ್ಪಗಳು, ಗೂಬೆ, ಆನೆ, ಕುದುರೆ, ಒಂಟೆಗಳು ಕೇವಲ ಕರ ಕೌಶಲದಿಂದಲೇ ಇವನ್ನು ಕೆತ್ತುತ್ತ ಜಾಲಾಂಧ್ರಗಳಂತೆ ಅವುಗಳ ಹೊಟ್ಟೆ ಸೀಳಿ, ಹೊಟ್ಟೆಯೊಳಗೊಂದು ಮರಿಯನ್ನು ಮಾಡುವ ಚಾತುರ್ಯಕ್ಕೆ ಯಾರೂ ತಲೆಬಾಗಬೇಕು. ಟೆರ್ರಾಕೊಟ್ಟಾದ ವಸ್ತು ವಿಶೇಷಗಳು ಇಂದು ರೂಢಿಯಿವೆ. ಸಮಕಾಲೀನ ಟ್ರೆಂಡ್ ಇದನ್ನೇ ಬಯಸುತ್ತದೆ. ಇಂದು ಜಾಗತೀಕರಣದ ಬೇಡಿಕೆಯನ್ವಯ ಕರಕುಶಲ ಕಲೆಗಳು ಉತ್ಪನ್ನವಾಗುತ್ತಿವೆ. ಜೂಟ್ ಉತ್ಪನ್ನಗಳು, ಟೆರ್ರಾಕೊಟ್ಟಾ ಆಭರಣಗಳು, ಬ್ಲೂ ಆರ್ಟ್ ಪಾಟರಿ, ಚಿಕನ್ ಕಸೂತಿಗಳ ವಸ್ತ್ರ ವಿನ್ಯಾಸಗಳು, ಪೀಠೋಪಕರಣಗಳು, ಕಟ್ಟಿಗೆಯ ಆಟಿಕೆಗಳು ಇವೆಲ್ಲಾ ಇಂದು ಜಂಬೋ ಆಫರ್ ಗಳಾಗಿ ದೊರೆಯುತ್ತಿವೆ. ಕಾಲ್ಪನಿಕ ಶಕ್ತಿಯನ್ನೂ ಸೃಜನ ಶೀಲ ಮನಸ್ಸನ್ನು ಉತ್ತೇಜಿಸುವ ನೂರಾರು ಬಗೆಯ ಕರಕುಶಲ ವಸ್ತುಗಳು ಇಂದು ಲಭ್ಯವಿವೆ. ಅವು ಜಾಗತಿಕ ಮಟ್ಟದಲ್ಲಿ ಗುರುತಿಸಿಕೊಳ್ಳಲು ಜಾಗತೀಕರಣ ನೆರವಾಗುವುದರ ಜೊತೆಗೆ ಉತ್ಪಾದನಾ ವೆಚ್ಚವನ್ನು ಕಡಿತಗೊಳಿಸಿ ಲಾಭಾಂಶವನ್ನು ಮೊಟಕುಗೊಳಿಸುತ್ತದೆ ಎಂಬುದು ಕುಶಲಕರ್ಮಿಗಳ ಅಭಿಪ್ರಾಯ.

ಜನಪದ ಕರಕುಶಲ ಕಲೆಗಳು ವಿಸ್ತರಣೆಗಳಾಗಿ ಇಂದು ಬೇರೆ ಬೇರೆ ಬಗೆಯ ಉತ್ಪನ್ನಗಳಿಂದ ತಯಾರಾಗುವ ನೂರಾರು ವಸ್ತು ವಿಶೇಷಗಳು ಜಾಗತೀಕರಣದಿಂದಾಗಿ ಪ್ರಚಾರಗೊಂಡು ಬಳಕೆಗೆ ಬಂದಿವೆ. ಬಣ್ಣದ ದಾರ, ಶುಭ ಕೋರಲು ಬಳಸುತ್ತಿದ್ದ ಅಕ್ಕಿ ಕಾಳಿನಾದಿಯಾಗಿ ಪ್ಲಾಸ್ಟಿಕ್ ಮಾಯವಾಗಿದೆ. ಇಂದಿಗೂ ಮೂಲ ಕಲೆಯನ್ನು ಉಳಿಸುವ ಕೆಲವು ಪ್ರಯತ್ನಗಳು ನಡೆಯುತ್ತಿವೆ. ಆದರೆ, ಅವಕ್ಕೆ ಜನಮನ್ನಣೆ ಇಲ್ಲದೆ ಸೊರಗುವ ಸ್ಥಿತಿ ಉಂಟಾಗಿದೆ. ಮದುವೆ ಮೊದಲಾದ ಮಂಗಳ ಕಾರ್ಯಗಳಲ್ಲಿ ಉಪಯೋಗಿಸುತ್ತಿದ್ದ ಭೂಭಪತ್ರಿ ಕೊಡೆಯ ಅಲಂಕರಣ, ಕಂಬಳಿ ಹಾಸಿ ಸೇಸಕ್ಕಿ ಹೊಯ್ಯುವುದು, ಅಕ್ಕಿ, ಬೇಳೆ, ಹೆಸರು ಕಾಳುಗಳ ಅಲಂಕಾರಿಕ ಆರತಿ ಹೋಲುವುದು, ಕೈಕಾಲು, ಅಂಗಾಲುಗಳಿಗೆ ಮದರಂಗಿ ಬರೆಯುವುದು, ದೇವರು ತರುವ ಕಾರ್ಯದಲ್ಲಿ ಗಂಗೆ ತರುವ ಗಡಿಗೆಗಳಿಗೆ ಸುಣ್ಣದಿಂದ ಚಿತ್ತಾರ ಬರೆಯುವುದು, ಮದುವೆ ಮನೆಯ ಗೋಡೆ ಮೇಲೆ ಹಸೆ ಬರೆಯುವುದು, ಗೋಡೆ ಗೂಡುಗಳಿಗೆ ಕೆಮ್ಮಣ್ಣಿನ ಹಾಗೂ ಮಡಕೆ ಮಸಿಯಿಂದ ಚಿತ್ರ ಬರೆಯುವುದು, ಮಾತಿನ ಗಿಣಿ, ಅರಗಿಣಿಗಳಿಗೆ ಹಸಿರು ಹಚ್ಚಿ ಗೋಡೆಗೇರಿಸುವುದು ಇದೆಲ್ಲಾ ಯಾಂತ್ರೀಕ ವಸ್ತುಗಳ ವಿಸ್ತರಣೆಯಾಗಿ ಶ್ರಮ ಸಂಸ್ಕೃತಿಯನ್ನು ಹತ್ತಿಕ್ಕುತ್ತಿವೆ. ಇದರಿಂದ ಸಾಮಾಜಿಕ ಕೊಡು-ಕೊಳುವ ಕ್ರಿಯೆ ಮೊಟಕಾಗಿ ಮಾನವ ಬಾಂಧವ್ಯ ಕಡಿಮೆಯಾಗಿ ದ್ವೇಷಾಸೂಯೆಗಳು ಗ್ರಾಮೀಣ ಜನರಲ್ಲಿ ಹೆಚ್ಚಾಗಲು ಕಾರಣವಾಗಿವೆ.

ಜನಪದ ಅಡಿಗೆಗಳದೂ ಅದೇ ಗತಿ. ಲವಂಗ ಕಡ್ಡಿ, ಸಕ್ಕರೆ ಕಡ್ಡಿ, ಗಾರಿಗೆ, ಹಪ್ಪಳ, ಕೋಡುಬಳೆ, ಖರ್ಜಿಕಾಯಿ, ಮಜ್ಜಿಗೆ, ಮೆಣಸಿನಕಾಯಿ, ಕುರುಡಗಿ, ರೊಟ್ಟಿ,

ಶಾವಗೆ, ತಂಬಿಟ್ಟು, ಹಾಲಿಟ್ಟು, ವಿವಿಧ ಬಗೆಯ ಸಂಡಿಗೆ ಇವುಗಳನ್ನೆಲ್ಲ ಇಂದು ಮಾರುಕಟ್ಟೆಯಲ್ಲಿ ಕೊಂಡು ತರಬಹುದು. ಅವುಗಳ ಅಂದ ಚೆಂದವೂ ಮೋಹಕವಾಗಿರುತ್ತವೆ. ಇದರಿಂದ ಸಮಾಜದ ಹೆಣ್ಣುಮಕ್ಕಳು ಒಟ್ಟಾಗಿ ಕಲೆತು ಆನಂದಿಸುವ, ಅಭಿಮಾನದಿಂದ ಬೀಗಿ ಬಡಿಸುವ ಸುಯೋಗ ತಪ್ಪಿ ಹೋಗಿದೆ. ಸಂಕ್ರಾಂತಿಯಲ್ಲಿ ಹಂಚುವ ಬಣ್ಣ ಬಣ್ಣದ ಸಕ್ಕರೆ ಗೊಂಬೆಗಳನ್ನು ಹೆಂಗಳೆಯರು ಕಲೆತು ತಿಂಗಳಾನುಗಟ್ಟಲೇ ಮಾಡುತ್ತಿದ್ದರು. ಇದರಿಂದ ಸ್ನೇಹ, ಸೌಹಾರ್ದತೆ ಹೆಚ್ಚಾಗಿ ಪ್ರೀತಿ ವಿಶ್ವಾಸ ಅಧಿಕವಾಗುತ್ತಿತ್ತು. ದುರಂತ ಎಂದರೆ, ಇದೆಲ್ಲವೂ ಇಂದು ಮಾರುಕಟ್ಟೆಯಲ್ಲಿ ಸುಲಭವಾಗಿ ದೊರೆಯುವ ವಸ್ತುಗಳಾಗಿವೆ. ಯಾವುದೋ ಯಂತ್ರ, ಎಲ್ಲೋ ಮೂಲೆಯಲ್ಲಿ ಇವನ್ನು ತಯಾರಿಸಿ ಪ್ಯಾಕ್ ಮಾಡಿ ತಳ್ಳಿ ಬಿಡುತ್ತವೆ. ಇದಾವುದರಲ್ಲೂ ಹ್ಯೂಮನ್ ಟಚ್ ಇರುವುದಿಲ್ಲ. ಇದು ಜಾಗತೀಕರಣದ ಫಲಿತಾಂಶ.

ಊರಿನ ಬಡಗಿ ಮಾಡುತ್ತಿದ್ದ ನೊಗ, ನೇಗಿಲು, ಕುಂಟೆ, ಕೂರಗೆ, ಮೇಳಿ, ಗಾಡಿ, ಬಂಡಿ ಇವೆಲ್ಲ ಇಂದು ಬೇರೆ ಬೇರೆ ರೂಪ ಪಡೆದಿವೆ. ಅಗೆಯುವ, ಕೆತ್ತುವ ಸಲಕರಣೆಗಳಾದ ಗುದ್ದಲಿ, ಹಾರೆ, ಸನಕೆ, ಪಿಕಾಸಿಗಳಾದ : ಕತ್ತರಿಸಲು ಉಪಯೋಗಿಸುತ್ತಿದ್ದ ಕೊಡ್ಲಿ, ಕತ್ತಿ, ಪಿಚ್ಚು ಕತ್ತಿ, ಇಬ್ಬಾಯಿ ಕತ್ತಿ, ಕುಡ್ಲು, ಪೀಚು ಕುಡ್ಲುಗಳಾಗಲೀ ; ಬಿದರಿನಿಂದ ಹೆಣೆಯುತ್ತಿದ್ದ ಬುಟ್ಟಿ, ಕೊಂಗ, ಮೊರ, ಕೊಂಬೆ, ತಡಿಕೆ, ಮಂಕರಿ, ಮಂಕರಿ, ಮಂಜರ, ತೊಟ್ಟಿಲು, ಬಿದರು ಪಟ್ಟಿಗೆ, ಬೀಡಿ, ಕುಕ್ಕೆ, ಚಿಬ್ಬಲುಗಳಾಗಲೀ ; ನೊಸೆ ಹುಲ್ಲಿನ ಬುಟ್ಟಿ, ಕೈ ಪೆಟಾರಿ, ನೊಸೆ ಕುಕ್ಕೆ, ಕೈಕುಕ್ಕೆ – ಇವೆಲ್ಲ ಇಂದು ಪರ್ಯಾಯ ವಸ್ತುಗಳಿಂದ ಬೇರೆ ಬೇರೆ ರೂಪ ಪಡೆದು ರೂಢಿಗೆ ಬರುತ್ತಿರುವುದು ನಾಗರಿಕ ದೃಷ್ಟಿಯಿಂದ ಒಳ್ಳೆಯದೇ ಆದರೆ, ಜಾಗತಿಕ ಮಟ್ಟದಲ್ಲಿ ಅವು ಗುರುತಿಸಿಕೊಂಡಾಗ ಒಂದು ಸಂಸ್ಕೃತಿಯ ನಿಖರತೆಯನ್ನು ಹೇಳಲಾಗುವುದಿಲ್ಲ. ಜೊತೆಗೆ ಜಾಗತೀಕರಣದಿಂದಾಗಿ ಅವು ಕರಕುಶಲ ಕೌಶಲ್ಯ (Crafts manship) ವನ್ನು ಕಳೆದುಕೊಳ್ಳುವ ಸಂಭವ ಹೆಚ್ಚು.

ಇಂದು ಮರದಿಂದ ಮಾಡಿದ ಸೋಮ ಮರೆಯಾಗುವ ಪ್ರಮೇಯವಿದೆ. ಅದಕ್ಕೆ ಪರ್ಯಾಯವಾಗಿ ಕಾಗದದ, ರಟ್ಟಿನ ಹೊಟ್ಟಿನ ಸೋಮ ಹುಟ್ಟಿಕೊಳ್ಳಲೂಬಹುದು. ಚರ್ಮದ ವಾದ್ಯಗಳಾದ ತಮಟೆ, ಡೊಳ್ಳು, ಡಮರುಗ, ಚೌಡಿಕೆ ದಮ್ಮಡಿ ಇವುಗಳಿಗೆ ಬೇಡಿಕೆ ಕಡಿಮೆಯಾಗಲೂಬಹುದು. ತೊಗಲು ಗೊಂಬೆಗಳಂತೂ ನಶಿಸುವ ಸ್ಥಿತಿಯಲ್ಲಿವೆ. ಜಾಗತೀಕರಣದಿಂದಾಗಿ ಸೌಂದರ್ಯಾನ್ವೇಷಣೆ (Aesthetic Sense) ರಚನಾತ್ಮಕ ಬುದ್ಧಿ (Creative Wisdom) ಮಾಯವಾಗಿ ಜನಪದ ಕರಕುಶಲ ಕಲೆಗಳು ಈ ರಾಷ್ಟ್ರದ ಸ್ವತ್ತಾಗುವ ಬದಲು ಅನ್ಯರಾಷ್ಟ್ರಗಳ ಸ್ವತ್ತಾಗಿಯೂ ಚರಿತ್ರೆಯಲ್ಲಿ ಎಲ್ಲಿಯೂ ನೆಲೆಯಿಲ್ಲದಂತಾಗುತ್ತವೆ. ಜಾಗತೀಕರಣದಿಂದಾಗಿ ಈ ಎಲ್ಲಾ ಜನಪದ ಕರಕುಶಲ ಕಲೆಗಳು ಬದುಕಿಗೆ ಮೆರಗನ್ನು ಕೊಡುವುದಿರಲಿ, ಆರ್ಥಿಕ ಭದ್ರತೆಯನ್ನು ಕೊಡಲಾರವು.

ಇಂದು ಅಪಾರದರ್ಶಕ, ಅರೆಪಾರದರ್ಶಕ, ಪಾರದರ್ಶಕ, ಹೊಳಪುಳ್ಳ, ಹೊಳಪಿಲ್ಲದ ಅನೇಕ ಬಗೆಯ ನಿತ್ಯೋಪಯೋಗಿ ವಸ್ತುಗಳಾದ ತಟ್ಟೆ, ಬಟ್ಟಲು, ಕಪ್ಪು, ಸಾಸರು, ಆಟಿಕೆಗಳು, ಹೂದಾನಿ, ಕುಂಡಲಿ, ಹೂಜಿ, ಪ್ರಾಣಿ, ಪಕ್ಷಿ, ಮಾನವ ಆಕೃತಿಗಳು ಹಾಗೂ ಅಲಂಕಾರಿಕ ಕುರಕುಶಲ ವಸ್ತು ಉತ್ಪನ್ನಗಳು ಕುಂಬಾರಿಕೆಯ ವಿಸ್ತರಣೆಗಳಾಗಿ ಜಾಗತಿಕ ಬೇಡಿಕೆಗೆ, ಸ್ಪರ್ಧಾತ್ಮಕ ಮಾರುಕಟ್ಟೆಗೆ ಲಗ್ಗೆಯಿಡುತ್ತಿವೆ.

ಶಿಲಾ ಕೆತ್ತನೆ (Stone Carving) , ಲೋಹ ಕೆತ್ತನೆ (Metal Carving), ಹಸ್ತಿದಂತ ಕೆತ್ತನೆ(Ivory Carving), ಕೊಂಬು – ಅಸ್ಥಿ ಕೆತ್ತನೆ (Horn and bone Carving), ಶಂಖ ಸಿಂಪು ಕೆತ್ತನೆ(Conch and Shell), ಸ್ವರ್ಣಗಾರಿಕೆ (Gold smith), ಲೋಹ ಎರಕ ಕಲೆ (Metal Casting), ಕಂಚು ಮೂರ್ತಿ ಶಿಲ್ಪ ಕಲೆ (Bronze casting), ಲೋಹ ತಗಡು (Metal ..........) ಮುಂತಾದ ಕರಕುಶಲ ಕಲೆಗಳು ಕಮ್ಮಾರಿಕೆಯ ವಿಸ್ತರಣೆಗಳೇ ಆಗಿವೆ. ಮರದ ಕೆತ್ತನೆ(Wood Carving), ಮರಶಿಲ್ಪ (Wood salfuse), ಹುದುಗು ಶಿಲ್ಪ (Inlay work), ಅರಗು ಲೇಪಿತ ಕುಶಲ ವಸ್ತು (Cae and handwork articles), ಗೊಂಬೆ ಮತ್ತು ಆಟಿಕೆ ಸಾಮಾನು (Doll & Toys), ಬಿದಿರು ಹೆಣಿಗೆ (Bamboo ..........(Mat works), ಹುಲ್ಲಿನ ಬುಟ್ಟಿ ಹಾಸಿಗೆ (Grass Basket Mat Works) ಇವು ಬಡಿಗಾರಿಕೆಯ ವಿಸ್ತರಣೆಗಳು.

ಕೈ ಮಗ್ಗದ ವಸ್ತುಗಳು ಕಸೂತಿ (Handloom Warm Fabricly) ವಸ್ತ್ರ ಕಲೆ, ಬಟ್ಟೆ, ಕನ್ನಡಿ, ಮುತ್ತು ಕಸೂತಿ ವಸ್ತ್ರ (Embroidery & Aplique) ಕಲೆ, ಹೊದಿಕೆ ವಸ್ತ್ರ (Show rugs) ಹಾಸು ಮತ್ತು ಪ್ರಾರ್ಥನಾ ಹಾಸು ಕಲೆ ಮುಂತಾದವುಗಳು ವಸ್ತ್ರಗಾರಿಕೆಯ ವಿಸ್ತರಣೆಗಳಾಗಿವೆ.

ಜನಪದ ಕರಕುಶಲ ವಸ್ತುಗಳು ಪ್ರಾಚೀನ ಕಾಲದಿಂದಲೂ ವಾಣಿಜ್ಯ ಹಾಗೂ ಆರ್ಥಿಕ ಮಹತ್ವವನ್ನು ಸಾಧಿಸಿವೆ. ದೇಶದ ಸಂಪದ್ಭರಿತ ಕರಕುಶಲ ಕಲಾ ಪರಂಪರೆಯನ್ನು ಉಳಿಸುವ, ಅಭಿವೃದ್ಧಿಪಡಿಸುವ ಕೆಲಸ ಸುಲಭ ಸಾಧ್ಯವಾಗಿಲ್ಲ. ಶತಮಾನಗಳಿಂದಲೂ ಭಾರತದಲ್ಲಿ ಕರಕುಶಲ ಕಲಾವೃತ್ತಿ ಸಂಘಗಳು ಹುಟ್ಟಿಕೊಂಡು ಅವುಗಳ ಅಸ್ತಿತ್ವಕ್ಕಾಗಿ ಆಂದೋಲನ ಚಳುವಳಿಗಳನ್ನು ನಡೆಸುತ್ತಾ ಬಂದಿವೆ.

ಕರಕುಶಲಿಗರ ಸಂಘಟನೆಗಳನ್ನು ವೃತ್ತಿ ಸಂಘ ಅಥವಾ ಶ್ರೇಣಿ ಎನ್ನುತ್ತಾರೆ. ಈ ಶ್ರೇಣಿಗಳು ವೃತ್ತಿ ನಿಯಮ ರೂಪಣೆ, ಅವುಗಳ ಜಾರಿ, ಸದಸ್ಯರಿಗೆ ನ್ಯಾಯ ಒದಗಿಸಿ ಕೊಡುವ ಶಾಸಕಾಂಗ, ಕಾರ್ಯಾಂಗ ನ್ಯಾಯಾಂಗಗಳ ಕಾರ್ಯವೆಸಗುತ್ತಾ ಬಂದಿವೆ. ಕ್ರಮೇಣ ಇವು ಸ್ವಾಯತ್ತ ಸಂಸ್ಥೆಗಳಾದರೆ, ಇವುಗಳ ಪ್ರಮುಖರು ರಾಜ್ಯದ ಕ್ರಿಯಾಶೀಲ ವ್ಯವಹಾರದಲ್ಲಿ ಭಾಗಿಗಳಾಗುವ, ಕೆಲ ಸಂದರ್ಭಗಳಲ್ಲಿ ಅರಸರ ಸಲಹೆಗಾರರಾಗುವಷ್ಟು ಪ್ರಭಾವಶಾಲಿಯಾದರು. ಒಂದು ಕಾಲಕ್ಕೆ ಕರಕುಶಲಿಗಳ ಶ್ರೇಣಿಗಳು ಇಂದಿನ ಬ್ಯಾಂಕುಗಳಂತೆ

ಕೆಲಸ ಮಾಡಿದವು. ರಾಷ್ಟ್ರದ ಸಮಾಜೋ–ಆರ್ಥಿಕ ಜೀವನದಲ್ಲಿ ತುಂಬಾ ಮಹತ್ವದ ಪಾತ್ರವನ್ನು ವಹಿಸಿದವು.

ಪ್ರಾಚೀನ ಭಾರತದಲ್ಲಿ ಬಹಳ ಪ್ರಭಾವಶಾಲಿಯಾಗಿದ್ದ ಕರಕುಶಲಿಗಳ ಸಂಘ ಅಥವಾ ಶ್ರೇಣಿ ೧೮ನೇಯ ಶತಮಾನದ ಉತ್ತರಾರ್ಧದ ಹೊತ್ತಿಗೆ ಶೋಚನೀಯ ಸ್ಥಿತಿಯನ್ನು ತಲುಪಿದವು. ಪ್ರಾಯಶಃ ಇದಕ್ಕೆ ಪ್ರಮುಖ ಕಾರಣ, ಕೈಗಾರಿಕಾ ಕ್ರಾಂತಿ ಇರಬೇಕು. ಇದು ಭಾರತಕ್ಕಷ್ಟೇ ಸೀಮಿತವಾಗಲಿಲ್ಲ, ಪ್ರಪಂಚದ ಕರಕುಶಲ ಕಲಾ ಪ್ರಪಂಚವನ್ನೇ ಆವರಿಸಿತು. ೧೯ನೇಯ ಶತಮಾನದ ಹೊತ್ತಿಗೆ ಪ್ರಪಂಚದಾದ್ಯಂತ ಜಾಗೃತಿ ಉಂಟಾಗಿ ಅಲ್ಲಲ್ಲಿ ಚಳುವಳಿಯ ಸ್ವರೂಪವನ್ನು ಪಡೆಯಿತು. ಇಂಗ್ಲೆಂಡಿನಲ್ಲಿ ಜಾನ್ ರಸ್ಕಿನ್, ವಿಲಿಯಂ ಮಾರಿಸ್, ಸ್ವೀಡನ್ ನಲ್ಲಿ ಅರ್ಥರ್ ಹ್ಯಾಜಾಲಿಯಕ್ ಮುಂತಾದವರು ಈ ಚಳುವಳಿಗೆ ಒಂದು ನಿರ್ದಿಷ್ಟ ರೂಪವನ್ನು ತಂದು ಕೊಟ್ಟರು. ಇದು ೨೦ನೇಯ ಶತಮಾನದ ಆರಂಭದಲ್ಲಿ ವ್ಯಾಪಕ ಪ್ರಚಾರವನ್ನು ಪಡೆಯಿತು.

ಭಾರತದ ಕರಕುಶಲ ಕಲೆಗಳೂ ಕೂಡ ಬ್ರಿಟಿಷರ ಆಡಳಿತ ಧೋರಣೆ, ಯಂತ್ರೋಪಕರಣಗಳ ಬಳಕೆಯ ಹೆಚ್ಚಳಿಕೆ, ಯಂತ್ರ ನಿರ್ಮಿತ ವಸ್ತುಗಳ ಬಗೆಗೆ ಜನರಲ್ಲಿ ಬೆಳೆದ ವ್ಯಾಮೋಹಗಳಿಂದಾಗಿ ಕಷ್ಟವನ್ನನುಭವಿಸಬೇಕಾಯಿತು. ಪುನಶ್ಚೇತನದ ಪ್ರಯತ್ನ ಕಾರ್ಯಗಳು ವಿಫಲವಾದವು, ಮಣ್ಯಕ್ಕೆ ೧೯೫೧ರ ಪಂಚವಾರ್ಷಿಕ ಯೋಜನೆಯಲ್ಲಿ ಇದಕ್ಕೆ ಪ್ರಾಶಸ್ತ್ಯ ದೊರಕಿತು. ಇದರ ಅಭಿವೃದ್ಧಿ ಕಾರ್ಯವನ್ನು ಗ್ರಾಮೋದ್ಯೋಗ ಮಂಡಲಿಗೆ ವಹಿಸಲಾಯಿತು. ಗಾಂಧೀಜಿಯವರ ಸ್ವದೇಶಿ ಚಳುವಳಿ ಈ ಜನಪದ ಕಲಾ ಪರಂಪರೆಗೆ ಇಂಬುಗೊಟ್ಟಿತು. ೧೯೫೨ ರಲ್ಲಿ ಭಾರತ ಸರ್ಕಾರ, "ಅಖಿಲ ಭಾರತ ಕರಕುಶಲ ಮಂಡಲಿ"ಯನ್ನು ಸ್ಥಾಪನೆ ಮಾಡಿ, ಕಮಲಾದೇವಿ ಚಟ್ಟೋಪಾಧ್ಯಾಯ ಅವರನ್ನು ಮಂಡಲಿಯ ಅಧ್ಯಕ್ಷರನ್ನಾಗಿ ಮಾಡಿತು. ಇವರ ನೇತೃತ್ವದಲ್ಲಿ ಅರ್ಥಶಾಸ್ತ್ರಜ್ಞರು, ಸಮಾಜ ಕಾರ್ಯಕರ್ತರು ಮತ್ತು ಮಾರುಕಟ್ಟೆ ಪರಿಣತರನ್ನೊಳಗೊಂಡ ಒಂದು ಸಮಿತಿ ವ್ಯಾಪಕ ಸಮೀಕ್ಷೆ ನಡೆಸಿ ರಾಜ್ಯ ಹಾಗೂ ಕೇಂದ್ರ ಸರ್ಕಾರಗಳಿಗೆ ವರದಿಯೊಪ್ಪಿಸಿತು. ತಕ್ಷಣ ಕಾರ್ಯ ಪ್ರವೃತ್ತವಾದ ಸರ್ಕಾರ ಕರಕುಶಲ ಮಂಡಳಿಗಳನ್ನು ಸ್ಥಾಪಿಸಿ ಅಳಿವಿನ ಸ್ಥಿತಿಯಿಂದ ಕರಕುಶಲ ಕಲೆ ಹಾಗೂ ಕುಶಲ ಕರ್ಮಿಗಳನ್ನು ಉಳಿವಿನತ್ತ ಕರೆ ತಂದಿತು. ಜನತೆಯಲ್ಲಿ ಅರಿವು ಮೂಡಿಸುವ ಸಲುವಾಗಿ ದೇಶ ವಿದೇಶಗಳಲ್ಲಿ ಕರಕುಶಲ ವಸ್ತು ಪ್ರದರ್ಶನಗಳನ್ನು ಏರ್ಪಡಿಸುವ ಮೂಲಕ ಕಲಾ ವಸ್ತುಗಳಿಗೆ ಬೇಡಿಕೆ ಹಾಗೂ ಪ್ರೋತ್ಸಾಹವನ್ನು ತಂದು ಕೊಟ್ಟಿತು. ಇಂದು ಜನಪದ ಕುಶಲ ಕಲೆಗಳು ಅತ್ಯಧಿಕ ವಿದೇಶಿ ವಿನಿಮಯ ತರುವ ಮೂಲಕ ಭಾರತ ಅಭಿವೃದ್ಧಿಶೀಲ ಆರ್ಥಿಕ ವ್ಯವಸ್ಥೆಯಲ್ಲಿ ಮಹತ್ವ ಪಾತ್ರ ವಹಿಸುತ್ತಿದೆ ಎನ್ನುವಾಗಲೇ ಜಾಗತೀಕರಣ ಮತ್ತೆ ಜನಪದ ಕರಕುಶಲ ಕಲೆಗಳಿಗೆ ಮಾರಕವಾಗುವ ಅಪಾಯವಿದೆ. ಇಂದು ಭಾರತದಾದ್ಯಂತ ಕರಕುಶಲ ಕಲೆಗಳು ಮನರುಜ್ಜೀವನಗೊಂಡು

ಹತ್ತು ಹಲವು ಪ್ರಾದೇಶಿಕ ಭಿನ್ನತೆ ಹಾಗೂ ವಿಶೇಷತೆಗಳನ್ನು ಕಾಪಾಡಿಕೊಂಡು ಹೊಸತನ್ನು ಅಂಗೀಕರಿಸುತ್ತಾ ಈ ಕ್ಷೇತ್ರದಲ್ಲಿ ಸಾಧಿಸಿದ ಸಾಧನೆಯ ಫಲದಿಂದ ಜಾಗತೀಕರಣದ ಮಾಯಾ ಮುಷ್ಟಿಯ ಹಿಡಿತದಲ್ಲಿ ತನ್ನತನವನ್ನು ಉಳಿಸಿಕೊಳ್ಳಬೇಕಾಗಿದೆ.

ಇಂದು ಜನಪದ ಕರಕುಶಲ ಕಲೆಗಳು, ಕುಶಲ ಕಲೆಗಾರರು ಅನೇಕ ಸಮಸ್ಯೆಗಳನ್ನು ಎದುರಿಸಬೇಕಾಗಿದೆ. ಜಾಗತೀಕರಣದಿಂದಾಗಿ ಈ ಸಮಸ್ಯೆಗಳು ಇನ್ನೂ ಜಟಿಲವಾಗುತ್ತಿವೆ. ಇಂದಿನ ಜನಸಾಮಾನ್ಯರ ಐಶಾರಾಮ ಪ್ರವೃತ್ತಿಗೆ ತಕ್ಕ ಸುಖಾಪೇಕ್ಷಿತ (Comfort oriented) ಕರಕುಶಲ ವಸ್ತುಗಳ ಹೊಸ ಹೊಸ ವಿನ್ಯಾಸಗಳನ್ನು ಜನಪದ ಕುಶಲ ಕರ್ಮಿ ಕಂಡುಕೊಳ್ಳಬೇಕಾಗಿದೆ. ಅದಕ್ಕೆ ತಕ್ಕ ನಿರ್ಮಾಣ ಕೌಶಲ್ಯ (Inventive skill) ದ ಕೊರತೆಯನ್ನು ನೀಗಿಕೊಳ್ಳಬೇಕಾಗಿದೆ. ಕರ್ನಾಟಕದ ಕರಕುಶಲ ಕಲೆಗಳು ಪುನಶ್ಚೇತನ (Revive) ಮಾಡಿಕೊಳ್ಳಬೇಕಾಗಿದೆ. ಚನ್ನಪಟ್ಟಣದ ಬಣ್ಣದ ಗೊಂಬೆಗಳು, ಬೀದರಿನ ಬಿದರಿ ಕಲೆ, ನಂಜನಗೂಡಿನ ಕಡಕೊಳದ ಜೊಂಡಿನ ಚಾಪೆ (ಮಂದಲಿಗೆ)ಗಳು, ಕಿನ್ನಾಳದ ಗೊಂಬೆಗಳು, ಗೋಕಾಕದ ಜಿನಗಾರರು ಮಾಡುವ ಬಣ್ಣದ ಆಟಿಕೆಗಳು, ಕೌದಿ, ಹಸೆಗೊಂಡೆ, ಬುಟ್ಟಿ ಚಿತ್ತಾರಗಳು, ರೇಷ್ಮೆ ಗೂಡಿನ ಹಾರಗಳು, ಆದಿವಾಸಿಗಳು ತಯಾರಿಸುವ ತಾಳೆಗರಿ, ತೆಂಗಿನ ಸೋಗೆಗಳ 'ತತ್ತರ ಕೊಡೆ' ಗಳು ಹೊಸತನಕ್ಕೆ ಹೊಂದಿಕೊಂಡು ಬೇಡಿಕೆಯ ವಸ್ತುಗಳಾಗಬೇಕಾಗಿವೆ. ಅದಕ್ಕಾಗಿ ತಯಾರಿಕೆ, ಪ್ರಾತ್ಯಕ್ಷಿಕೆ ಮತ್ತು ಮಾರಾಟ ವ್ಯವಸ್ಥೆಯಾಗಬೇಕಾಗಿದೆ. 'ಕುಲಕಸುಬು' ಎಂಬ ಸಂವೇದನೆ ಕಡಿಮೆಯಾಗುತ್ತಿರುವುದರಿಂದ ಅನ್ಯರಿಗೆ ಇವುಗಳ ಬಗ್ಗೆ ತರಬೇತಿ ಕೊಡಬೇಕಾಗಿದೆ. ಅವರಿಗೆ ಉದ್ಯೋಗಾವಕಾಶಗಳನ್ನು ಕಲ್ಪಿಸಬೇಕಾಗಿದೆ. ಗ್ರಾಮೀಣ ಕರಕುಶಲಿಗರಿಗೆ, ನಗರ ಕರಕುಶಲಿಗರಿಗೆ, ಆದಿವಾಸಿ ಕರಕುಶಲಿಗರಿಗೆ ಬೇರೆ ಬೇರೆ ರೀತಿಯ ತರಬೇತಿ ಕೊಟ್ಟು – ಒಟ್ಟಾರೆ, ಜಾಗತೀಕರಣದ ಪರಿಣಾಮಗಳನ್ನು ಸಮರ್ಥವಾಗಿ ಎದುರಿಸುವಂತೆ ಅವರಲ್ಲಿ ಆತ್ಮ ಸ್ಥೈರ್ಯವನ್ನು ತಂದು ಕೊಡುವ ತುರ್ತು ಕೆಲಸವನ್ನು ಸರ್ಕಾರ, ಸಂಘ ಸಂಸ್ಥೆಗಳು ಎಂದಿಗಿಂತಲೂ ಇಂದು ಹೆಚ್ಚಾಗಿ ಮಾಡಬೇಕಾಗಿದೆ. ಜಾಗತೀಕರಣ ಏಕರೂಪಿ ಮತ್ತು ವಿಶ್ವವ್ಯಾಪಿ ಪರಿಕಲ್ಪನೆಯಲ್ಲವೆಂಬುದನ್ನು ತೋರಿಸಿಕೊಡಬೇಕಾಗಿದೆ (Globalisation is not as uniform as universal a concept as well)

ಗ್ರಂಥ ಋಣ

೧. ಕರಕುಶಲ ಕಲೆಗಳು, ೨೦೦೦. ಪ್ರಸಾರಾಂಗ : ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨. ಕನ್ನಡ ವಿಶ್ವಕೋಶ, ೧೯೭೨, ಸಂಪುಟ ೪ : ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು.

೩. ನಾಗರಿಕತೆ ಹೊಸ್ತಿಲಲ್ಲಿ : ೧೯೬೯, ಶಿವರಾಮ ಕಾರಂತ, ಪ್ರಸಾರಾಂಗ : ಮೈಸೂರು ವಿಶ್ವವಿದ್ಯಾಲಯ, ಮೈಸೂರು.

೪. ಕರ್ನಾಟಕದಲ್ಲಿ ಚಿತ್ರಕಲೆ ೧೯೭೧. ಪ್ರಸಾರಾಂಗ : ಮೈಸೂರು ವಿಶ್ವವಿದ್ಯಾಲಯ, ಮೈಸೂರು

೫. ಕರ್ನಾಟಕದ ಕಲೆಗಳು ೧೯೮೧, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೬. Encyclopaedia of the ........... culture of Karnataka 1991. Institute of Asean Studies, Madras.

೭. ಕರ್ನಾಟಕದ ಜಾನಪದ ೧೯೮೧. ಪ್ರಸಾರಾಂಗ : ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

❖

ಅಧ್ಯಕ್ಷೀಯ ಭಾಷಣ :

# ಜನಪದ ಕಲೆಗಳು ಮತ್ತು ಜಾಗತೀಕರಣದ ಭಯ

ಡಾ. ವೀರಣ್ಣ ದಂಡೆ

◆

ಜನಪದ ಕಲೆಯ ಸಂರಕ್ಷಣೆಯ ಬಗೆಗೆ ಕರ್ನಾಟಕದಲ್ಲಿ ಯಾವಾಗಲೂ ಕಾಳಜಿಗಳು ವ್ಯಕ್ತವಾಗುತ್ತಲೇ ಇವೆ. ಕರ್ನಾಟಕದ ಜಾನಪದ ಶಾಸ್ತ್ರ ಚರಿತ್ರೆಯನ್ನು ಅಧಿಕೃತವಾಗಿ ಉದ್ಘಾಟಿಸುವ ಹಲಸಂಗಿ ಗೆಳೆಯರ ಮೊದಲ ಕೊಡುಗೆಯಾದ ೧೯೩೧ ರಲ್ಲಿ ಪ್ರಕಟವಾದ ಕರ್ನಾಟಕ ಜಾನಪದ ಸಾಹಿತ್ಯದ ಮೊದಲನೆಯ ಕೃತಿ 'ಗರತಿಯ ಹಾಡು' ಸಂಕಲನಕ್ಕೆ ಬಿ. ಎಂ. ಶ್ರೀ ಅವರು ಪ್ರಸ್ತಾವನೆ ಬರೆಯುತ್ತ (೧೯೩೦) ಇಂತಹ ಕಾಳಜಿಯನ್ನು ವ್ಯಕ್ತಪಡಿಸುತ್ತಾರೆ: 'ನವನಾಗರಿಕತೆಯ ಹೊಡೆತದಲ್ಲಿ, ಪ್ರೌಢ ಸಾಹಿತ್ಯದ ತಿರಸ್ಕಾರದಲ್ಲಿ ಈ ಜನಪದ ಸಾಹಿತ್ಯ ಉಳಿಯುವುದೇ ಕಷ್ಟವಾಗಿದೆ. ನಾಶವಾಗುವುದಕ್ಕೆ ಮೊದಲೇ ಇದನ್ನು ಕಾಪಾಡಿಕೊಳ್ಳುವುದು ಕನ್ನಡಿಗರ ಕರ್ತವ್ಯ' (ಪು.೯) ಎಂದು.

ಜನಪದ ಕಲೆಗಳು, ಸಾಹಿತ್ಯ ಬಳಕೆಯಿಂದ ತಪ್ಪಿ ಹೋಗುತ್ತಿವೆ ಎಂಬುದು ನಿಜ. ಇಂತಹ ಸಮಯದಲ್ಲಿ ಅವನ್ನು ಉಳಿಸಿಕೊಳ್ಳುವ ಆಲೋಚನೆಗಳು ಸ್ವಾಗತಾರ್ಹವೇ. ಯಾವ ಬಗೆಯಲ್ಲಿ ಅವು ಮರೆಯಾಗುತ್ತಿವೆ ಎಂಬುದನ್ನು ಯಾವುದೇ ಒಂದು ಹಳ್ಳಿಯ ಚರಿತ್ರೆ ನೋಡಿದರೆ ಸಾಕೆಂದು ತೋರುತ್ತದೆ. ಇದಕ್ಕೆ ನಮ್ಮೂರಿನ ಉದಾಹರಣೆಯನ್ನೇ ಇಲ್ಲಿ ತೆಗೆದುಕೊಳ್ಳಲು ಬಯಸುತ್ತೇನೆ.

ನಮ್ಮೂರು ಕಲಬುರ್ಗಿ ಜಿಲ್ಲೆಯ ಆಳಂದ ತಾಲೂಕಿನ ಸಲಗರ ಎಂಬ ಗ್ರಾಮ. ಇದು ಪುರಾತನವಾದ ದೊಡ್ಡ ಊರು. ಸುತ್ತ ಮುತ್ತಲೂ ಕನಿಷ್ಠ ಹತ್ತಿಪ್ಪತ್ತು ಹಳ್ಳಿಗಳು – ನಮ್ಮೂರಿನ ಶಿಕ್ಷಣ, ಸಂತೆ, ಜನಪದ ಕಲೆಗಳನ್ನು ಅವಲಂಬಿಸಿ ಬದುಕುತ್ತಿದ್ದ ಕಾಲವೊಂದಿತ್ತು. ಈ ಊರು ಕಲಾವಿದರ ಬೀಡಾಗಿತ್ತು. ಸಿದ್ರಾಮಪ್ಪ ಸಾಖರೆ ನಮ್ಮೂರಿನ ಪ್ರತಿಭಾವಂತ ಕವಿ. ಲಾವಣಿ, ಭಜನೆ, ಸಣ್ಣಾಟ, ದೊಡ್ಡಾಟಗಳನ್ನು ರಚಿಸಿದ ಕವಿ ಈತ. ಗುರುಲಿಂಗಪ್ಪ ಮಾಲೀಪಾಟೀಲ ಡಪ್ಪು ಬಾರಿಸುವುದರಲ್ಲಿ ಪ್ರಸಿದ್ಧರು. ನೂರಂದಪ್ಪ

ಹೆರೂರ ಸಾರಥಿ ಪಾತ್ರ ಹಾಕುವಲ್ಲಿ ಸುಪ್ರಸಿದ್ಧರು, ರಾಚಪ್ಪ ದಂಡೆ ದೊಡ್ಡಾಟದ ಹಾಡುಗಾರಿಕೆಯಲ್ಲಿ ಎತ್ತಿದ ಕೈ. ರಾಮಚಂದ್ರ ಜಮಾದಾರ, ವಿಠ್ಠಲ ಉಪ್ಪಾರ, ಭದ್ರಪ್ಪ ಸಾಖರೆ, ಬಸವಣ್ಣಪ್ಪ ಬಡಿಗೇರ, ಶ್ರೀಮಂತ ನಾಟಿಕಾರ ಇವರೆಲ್ಲ ನಮ್ಮೂರಿನ ಪ್ರಸಿದ್ಧ ಜನಪದ ಕಲಾವಿದರು. ಸುಮಾರು ೧೯೫೦ ರಿಂದ ೭೦ ರ ವರೆಗೆ ಇವರ ನಿರಂತರ ಚಟುವಟಿಕೆಗಳನ್ನು ನೋಡಿದ ಅನುಭವ ನನಗೆ. ಅದು ಕಾರ್ಹುಣಿವಿಯಂತಹ ಸಣ್ಣ ಹಬ್ಬವಾಗಿರಬಹುದು, ಹೋಳಿ ಹುಣ್ಣಿವೆ, ಯುಗಾದಿಯಂತಹ ದೊಡ್ಡ ಹಬ್ಬವಾಗಿರಬಹುದು – ಪ್ರತಿ ಸಂದರ್ಭವನ್ನು ಸಂಭ್ರಮಗೊಳಿಸಿ ಇಡೀ ಊರಿಗೆ ಊರನ್ನೇ ಲವಲವಿಕೆಯಿಂದ ಇಟ್ಟ ಜನರಿವರು.

ನೆರೆ ಊರುಗಳಲ್ಲಿ ಒಂದು ಸಣ್ಣಾಟವಾದರೆ, ಒಂದು ದೊಡ್ಡಾಟವಾದರೆ ಅಲ್ಲಿ ಸಲಗರದ ಕಲಾವಿದರ ಭಾಗಿದಾರಿಕೆ ಪ್ರಮುಖವಾಗಿರುತ್ತಿತ್ತು. ನಮ್ಮೂರಿನಲ್ಲಿಯೇ ಒಂದು ದೊಡ್ಡಾಟ ಕಲಿಯಲು ಪ್ರಾರಂಭಿಸಿದರೆ, ಹರಿಜನ ಕೇರಿಯಲ್ಲಿಯ ಕಲಾವಿದರೆಲ್ಲರೂ ಒಟ್ಟುಗೂಡಿ ತಾವೊಂದು ದೊಡ್ಡಾಟ ಕಲಿಯಲು ಪ್ರಾರಂಭಿಸುತ್ತಿದ್ದರು. ಅನೇಕ ಸಲ ಅವುಗಳ ಪ್ರಯೋಗಗಳು ಕೂಡ ಒಂದೇ ದಿನ ನಡೆಯುತ್ತಿದ್ದವು. ಇಲ್ಲಿ ಹೇಗೆ, ಅಲ್ಲಿ ಹೇಗೆ ? ಎಂದು ಜನ ಬೆಳತನಕವೂ ಎರಡೂ ಕಡೆ ಅಡ್ಡಾಡಿ ನೋಡುತ್ತಿದ್ದರು. ಕಲಾವಿದರಿಗೆ ಪ್ರೋತ್ಸಾಹ ಕೊಡುತ್ತಿದ್ದರು. ಈ ಕಲಾವಿದರೆಲ್ಲ ಅವಲಂಬಿಸಿದ್ದು ಅಸ್ಥಿರ ಆರ್ಥಿಕ ಮೂಲಗಳನ್ನು. ಹೊಲಗಳಿದ್ದೂ ಕಲೆಯ ಹವ್ಯಾಸದಿಂದಾಗಿ ದುಡಿಯಲು ಆಗದೇ ಇರುವ ಕಲಾವಿದರು, ಕೂಲಿ ನಾಲಿ ಮೇಲೆ ಬದುಕುವವರು. ಹಳ್ಳಿಯ ಇಂತಹ ಜನ ಕಲಾವಿದರು ಸ್ವಲ್ಪ ಶೋಕಿಗಳಂತೆ, ಸ್ವಲ್ಪ ಆಲಸಿಗಳಂತೆ ತೋರುವವರಾಗಿದ್ದರು. ಆಲಸಿಗಳೆಂದರೆ, ಕೆಲಸ ಮಾಡಲು ಮನಸ್ಸಿಲ್ಲದವರು ಎಂದಲ್ಲ, ಬಹುಶಃ ಅವರೊಳಗಿನ ಪ್ರತಿಭೆ, ಕಲೆಯ ಹುಚ್ಚಿಗೆ ನೂಕಿ, ಶ್ರಮದೆಡೆ ಹೋದವರೆಂದು ತೋರುತ್ತದೆ.

೧೯೭೧ ರಲ್ಲಿ ಭೀಕರವಾದ ಬರಗಾಲ ಬಂದು ಆವರಿಸಿತು. ಊರಿನಲ್ಲಿ ಸಣ್ಣ ಪುಟ್ಟ ವ್ಯವಹಾರ, ಕೂಲಿನಾಲಿ ಮಾಡಿ ಬದುಕುತ್ತಿದ್ದ ಕಲಾವಿದರೆಲ್ಲ ಹೊಟ್ಟೆಪಾಡಿಗಾಗಿ ಊರು ಬಿಟ್ಟು ಮುಂಬಯಿಗೆ, ಮತ್ತೆ ಬೀಗರು – ನೆಂಟರನ್ನು ಅವಲಂಬಿಸಿ ಬೇರೆಡೆಗೆ ಗೂಳೆ ಹೋದರು. ಇದಕ್ಕೆಲ್ಲ ಮುಖ್ಯವಾಗಿ ಅವರ ಆರ್ಥಿಕ ದುಃಸ್ಥಿತಿಯೇ ಕಾರಣವಾಗಿತ್ತು. ಹೀಗೆ ಹೋದವರು ತಿರುಗಿ ಮತ್ತೆ ಊರಿಗೆ ಬರಲೇ ಇಲ್ಲ. ನಂತರ ಅವರೆಲ್ಲ ಒಬ್ಬೊಬ್ಬರಾಗಿ ದುಡಿದು ದುಡಿದು, ಹೋದೆಡೆಯಲ್ಲೆಲ್ಲ ಸತ್ತು ಹೋದ ಸುದ್ದಿಗಳೇ ಊರಿಗೆ ಬಂದು ಮುಟ್ಟಿದವು.

೧೯೭೦ರ ತನಕ ಪ್ರತಿ ಹಬ್ಬ ಹುಣ್ಣಿಮೆಗಳನ್ನು ತಮ್ಮ ಕಲಾ ಪ್ರದರ್ಶನಗಳ ಮೂಲಕ ಸಂಭ್ರಮಗೊಳಿಸುತ್ತಿದ್ದ ಕಲಾವಿದರು ಕ್ರಮೇಣ ಕರಗಿ ಹೋದ ನಂತರ ಈಚಿನ ವರ್ಷಗಳಲ್ಲಿ ನಮ್ಮೂರಿನಲ್ಲಿ ಒಂದು ಸಣ್ಣಾಟ, ಒಂದು ದೊಡ್ಡಾಟ, ಏಕೆ–ಕೋಲಾಟ ಕಾಣದ

ಪಂಚಮಿಗಳು, ಪಗರಣದಂತಹ ಸೋಗುಗಳನ್ನು ಕಾಣದ ಕಾರ್ಹುಣ್ಣಿವಿ, ಹೋಳಿ ಹುಣ್ಣಿವೆಗಳು, ಹಾಡು ಕಾಣದ ಹಂತಿಯ ಸಂದರ್ಭಗಳು, ದೊಡ್ಡಾಟ-ಸಣ್ಣಾಟ ಕಾಣದ ಯುಗಾದಿ-ಬಸವನ ಜಾತ್ರೆಗಳೆಲ್ಲ ೩೦-೩೩ ವರ್ಷಗಳ ಸುದೀರ್ಘ ಬದುಕನ್ನೇ ಕಳೆದಿವೆ.

ಜನಪದ ಕಲಾವಿದರಿಂದ ತುಂಬಿದ ಒಂದು ಊರು ಇಷ್ಟೊಂದು ಬರಿದಾಗಿದೆ. ಇದ್ದಬದ್ದ ಕಲಾವಿದರ ಸ್ಥಿತಿ ಸುಧಾರಿಸದೆ ಹಣ್ಣಾಗಿ ಹೋಗಿದ್ದಾರೆ. ಇಂದು ಸಂಸಾರ ನಡೆಸುವುದೇ ಅವರಿಗೆ ತೊಂದರೆಯಾಗಿದೆ. ಬಹುಶಃ ಇದು ಬಹುತೇಕ ಊರುಗಳ ಕಥೆಯಾಗಿರಲು ಸಾಧ್ಯ.

## ಕನಿಷ್ಠ ಸೌಲಭ್ಯಗಳ ಮುಂದೆ ದೇಸೀ ಸಂಸ್ಕೃತಿಯ ಧೂಳೀಪಟ :

ಪ್ರಪಂಚ ಇಂದು ತೀವ್ರವಾದ ಬದಲಾವಣೆಗಳಿಗೆ ಒಳಗಾಗುತ್ತಿದೆ. ಎಲ್ಲವನ್ನೂ ವ್ಯಾಪಾರೀ ಮನೋಭಾವದಿಂದ ಕಾಣುವ ಸಾಮಾನ್ಯ ಮನೋಧರ್ಮ ಜಾಗತೀಕರಣದ ಪ್ರಮುಖ ಸಂಗತಿ. ಒಂದು ಕಾಲಕ್ಕೆ ಸಂಸ್ಕೃತಿಯೇ ಬದುಕಿನ ಹಾಸು ಹೊಕ್ಕಾಗಿದ್ದಾಗ, ಮೌಖಿಕ ಪರಂಪರೆಯಲ್ಲಿ ಜನಪದ ಲಲಿತ ಕಲೆಗಳಿಗೆ ಪ್ರಾಧಾನ್ಯತೆ ಇತ್ತು. ಆದರೆ, ಈಗ ವಿಜ್ಞಾನ ಬದುಕಿನ ಹಾಸುಹೊಕ್ಕಾಗಿರುವಾಗ ಸೌಲಭ್ಯಗಳ ಆಕರ್ಷಣೆ ಎಲ್ಲ ಕಡೆ ಸಹಜವಾಗಿದೆ. ಅಡುಗೆ ಮನೆಯಲ್ಲಿ ಗ್ರೈಂಡರ್, ಊರಿನಲ್ಲಿ ಬೀಸುವ ಗಿರಣಿ, ಹೊಲದಲ್ಲಿ ರಾಶಿ ಮಾಡುವ ಯಂತ್ರಗಳು ಬಂದ ನಂತರ – ಖಂಡಿತವಾಗಿ ಮಹಿಳೆಯರಿಗೆ ಮತ್ತು ಒಕ್ಕಲಿಗರಿಗೆ ಅನುಕೂಲವಾಗಿದೆ. ಅವರ ಅನಂತ ಪರಿಶ್ರಮವನ್ನು ಈ ಯಂತ್ರಗಳು ದಕ್ಕಿಸಿಕೊಂಡಿವೆ.

ಈ ಸೌಲಭ್ಯಗಳಿಂದ – ಬೀಸುವ, ಕುಟ್ಟುವ ಶ್ರಮದ ಕೆಲಸಗಳಿಂದ ವಿರಾಮ ದೊರೆಯಿತು. ಆದರೆ, ಅದರೊಂದಿಗೆ ಹುಟ್ಟುತ್ತಿದ್ದ, ಬಳಕೆಯಾಗುತ್ತಿದ್ದ ನಮ್ಮ ಸಂಸ್ಕೃತಿಯ ಬಹು ದೊಡ್ಡ ಕೊಡುಗೆಗಳಾದ ಮೌಖಿಕ ಸಂಪ್ರದಾಯದ ಹಾಡುಗಳು ಅಷ್ಟೇ ಅಲ್ಲ, ಒರಳು-ಒನಕೆ, ಬೀಸುವ ಕಲ್ಲಿನ ಸುತ್ತ ಹುಟ್ಟಿಕೊಂಡಿದ್ದ ಅನೇಕ ಸಾಂಸ್ಕೃತಿಕ ಆಚರಣೆಗಳು ಬಹಳ ಸರಳವಾಗಿ ಮಾಯವಾದವು. ಅಡವಿಯಲ್ಲಿ ಒಂದು ಸಾಧಾರಣ ರಾಶಿ ಯಂತ್ರದ ಪ್ರವೇಶದಿಂದ, ರೈತನ ಅಪಾರ ಪರಿಶ್ರಮಕ್ಕೆ ಸೌಲಭ್ಯ ದೊರೆಯಿತು ನಿಜ. ಅದರ ಜೊತೆಗೆ ಹಾಡುಗಳ ಅಪಾರ ರಾಶಿ ಬಳಕೆಯಿಂದ ದೂರ ಸರಿದವು ; ಅಷ್ಟೇ ಅಲ್ಲ ರಾಶಿಯ ಜೊತೆಗೆ ಒಕ್ಕಲಿಗನ ಬದುಕು ಕಟ್ಟಿಕೊಂಡಿದ್ದ ಸಂಪೂರ್ಣ ಸಂಸ್ಕೃತಿಯು ಬಹು ಸುಲಭವಾಗಿ ದೂರ ಸರಿಯಿತು.

ಈ ಒಂದೆರಡು ಉದಾಹರಣೆಗಳಿಂದ ನಮಗೆ ಭಾಸವಾಗುವುದೇನೆಂದರೆ, ಒಂದು ಪರಿಸರದಲ್ಲಿ ಸೃಷ್ಟಿಗೊಳ್ಳುವ ಸಂಸ್ಕೃತಿಯೆಂಬ ಜೀವಧಾರೆಯು ವಿಜ್ಞಾನವೊದಗಿಸುವ 'ಕನಿಷ್ಠ ಸೌಲಭ್ಯ'ಗಳ ಮುಂದೆ ಬದುಕಬಲ್ಲ ಯಾವ ತಾಕತ್ತೂ ಇಲ್ಲದ್ದನ್ನು ಕಾಣುತ್ತೇವೆ. ಜೊತೆಗೆ, ಯಾವ ಹಳಹಳಿಯೂ ಇಲ್ಲದೇ ಅದನ್ನು ಬಳಸುವ

ಜನವೇ ಬಿಟ್ಟು ಕೊಡುತ್ತದೆ ಎಂಬುದು ಗಮನಿಸತಕ್ಕ ಮಾತು. ಈಗಂತೂ ಎಮ್. ಎನ್. ಸಿ. ಗಳು ಒದಗಿಸುತ್ತಲಿರುವ ಹಲ ಬಗೆಯ ಅನುಕೂಲತೆಗಳಿಂದಾಗಿ, ಜಾಗತೀಕರಣದ ಅನೇಕ ಒಡಂಬಡಿಕೆಗಳಿಂದಾಗಿ ಬದುಕಿನ ಬದಲಾವಣೆ ಸಾವಿರ ಪಟ್ಟು ತೀವ್ರಗೊಂಡು ಬದಲಾಗುತ್ತಿದೆ. ಇವೆಲ್ಲವುಗಳಿಂದ ಮನುಷ್ಯರ ಬದುಕಿಗೆ, ವಿಶೇಷವಾಗಿ ಭಾರತೀಯ ಗ್ರಾಮಾಂತರ ಪ್ರದೇಶದ – ಜನ ಸಮುದಾಯಕ್ಕೆ ಅನೇಕ ರೀತಿಯ ಅನುಕೂಲತೆಗಳು ಆಗಿವೆ. ಅವರ ಅಪಾರ ಪರಿಶ್ರಮ ಕಡಿಮೆಯಾಗಿ ಅವರಿಗೂ ವಿಶ್ರಾಂತಿ ಪಡೆಯಲು ಸಾಧ್ಯವಾಗುತ್ತಿದೆ. ಆರ್ಥಿಕ ಸ್ಥಿತಿ ಸುಧಾರಿಸಿ ಒಂದಿಷ್ಟು ಅನುಕೂಲತೆಗಳನ್ನು ಪಡೆಯುವಂತಾಗಿದೆ. ಇದೆಲ್ಲ ಬೇಕಾದ ಮಾತೆ. ಇದರ ಜೊತೆಗೆ ಆಗುತ್ತಿರುವ ಅನಾಹುತವೆಂದರೆ, ಬದುಕು ನೂರಾರು ವರ್ಷಗಳ ಶೋಧನೆಗಳಿಂದಾಗಿ ಗುರುತಿಸಿಕೊಂಡ, ಸೃಷ್ಟಿಸಿಕೊಂಡ – ಸಂಸ್ಕೃತಿಯ ವೈವಿಧ್ಯಮಯವಾದ ಎಳೆಗಳು, ಬದುಕಿನ ಅನನ್ಯತೆಗಳು, ಜೀವಧಾರೆಗಳು ನಮ್ಮಿಂದ ದೂರವಾಗುತ್ತಿವೆ. ಇಂದಿನ ಜೀವನಕ್ಕೆ ಸೌಲಭ್ಯಗಳೇ ಬದುಕಿಗೆ ವಿಷವಾಗಿ ಪರಿಣಮಿಸುತ್ತಿವೆ. ಇಂತಹ ಸಮಯದಲ್ಲಿ ಅಮೂಲ್ಯವಾದುದನ್ನು ಬದುಕಿಗಾಗಿ ಉಳಿಸಿಕೊಳ್ಳುವ ಆಲೋಚನೆ ಬರುವುದು ಸಹಜ. ಇಂದಿನ 'ಜನಪದ ಕಲೆ ಮತ್ತು ಜಾಗತೀಕರಣ'ವನ್ನು ಕುರಿತ ಇಂದಿನ ವಿಚಾರಸಂಕಿರಣವು ಅದರ ಒಂದು ಫಲವೇ ಆಗಿದೆ.

## ಶಿಕ್ಷಣದಿಂದ ಬದಲಾವಣೆಗಳು :

ಜನಪದ ರಂಗಭೂಮಿಯನ್ನೊಳಗೊಂಡು, ಈಗ ಇಡೀ ಜನಪದ ಸಾಹಿತ್ಯ ಮತ್ತು ಕಲಾಕ್ಷೇತ್ರದ ಬಗ್ಗೆ ನಾವೆಲ್ಲ ಗಂಭೀರ ಚಿಂತನೆ ಮಾಡಬೇಕಾಗಿದೆ. ಒಂದು ಕಡೆ ಎಂದಿಗಿಂತ ಅತ್ಯಂತ ತೀವ್ರವಾಗಿ ಬದಲಾಗುತ್ತಿರುವ ಬದುಕಿನ ಗತಿ ಒಂದಾದರೆ, ಅದೆಲ್ಲಕ್ಕೂ ಕಾರಣವಾದ ವಿಜ್ಞಾನದ ಸೌಲಭ್ಯಗಳು ಬದುಕಿನ ಗತಿಯನ್ನಷ್ಟೇ ಅಲ್ಲ, ಸಂಪೂರ್ಣವಾಗಿ ಬದುಕಿನ ಸಾರವನ್ನೂ ಬದಲಾಯಿಸುತ್ತಿವೆ. ವ್ಯಾಪಕವಾದ ಅಕ್ಷರ ಮಾಧ್ಯಮದ ಶಿಕ್ಷಣದಿಂದಾಗಿ ಜನರ ತಿಳುವಳಿಕೆಯೂ ಭಿನ್ನವಾಗಿದೆ.

ಬದುಕು ನಿಸರ್ಗಕ್ಕೆ ಹೆಚ್ಚು ಹತ್ತಿರವಾಗಿದ್ದಾಗ, ಸಾವಧಾನವಾದ ಬದುಕಿನ ಗತಿಯಲ್ಲಿ ನೈಸರ್ಗಿಕ ಸ್ವಭಾವದ ಕಲೆಗಳು ಹುಟ್ಟಿಕೊಂಡವು. ಹೀಗಾಗಿ ಮನುಷ್ಯನ ಬದುಕಿಗೆ ಇವೆಲ್ಲ ಪೂರಕವಾಗಿಯೇ ಬೆಳೆದವು. ಮನುಷ್ಯ ಕೆಲಸದಲ್ಲಿ ನಿರತನಾಗಿರಲಿ, ಬಿಡುವಿನ ವೇಳೆಯಲ್ಲಿ ಸಂಭ್ರಮದ ಸಾಂಸ್ಕೃತಿಕ ಸಂದರ್ಭದಲ್ಲಿರಲಿ – ಅಲ್ಲೆಲ್ಲ ಅವನ ಕೆಲಸಕ್ಕೆ, ಆಚರಣೆಗೆ ಅಡ್ಡಿಯಾಗದಂತೆ, ಬದಲಾಗಿ ಸಹಾಯವಾಗುವಂತೆ ಅಲ್ಲಿಯ ನೈಸರ್ಗಿಕ ಗತಿಗೆ ತಕ್ಕಂತೆ ಕಲೆಗಳು ಸೃಷ್ಟಿಗೊಂಡವು. ಹಂತಿಯ ಗತಿ, ಬೀಸುವ ಗತಿ, ಮಟ್ಟೆ ಎಳೆಯುವ ಗತಿ, ಕೋಲಾಟದ ಕುಣಿತದ ಗತಿ, ಮದುಮಕ್ಕಳಿಗೆ ಎಣ್ಣೆ ಹಚ್ಚುವ ಗತಿ, ಇವೆಲ್ಲ ಸಹಜವಾದ ನೈಸರ್ಗಿಕ ಗತಿಗಳೇ ; ಒಂದು ಅರ್ಥದಲ್ಲಿ ನೈಸರ್ಗಿಕ ಆಚರಣೆಗಳೇ.

ಈಗ ಮೌಖಿಕ ಪರಂಪರೆಯ ಜೊತೆಗೆ ಲಿಖಿತ ಶಿಕ್ಷಣದ ಪರಂಪರೆ – ವ್ಯಾಪಕವಾಗಿ ಜಾರಿಗೆ ಬರುತ್ತಿದೆ. ಮೌಖಿಕ ಪರಂಪರೆಯ ಎಲ್ಲ ತಿಳುವಳಿಕೆ ಮತ್ತು ಬದುಕಿನ ಅರ್ಥಗಳಿಗಿಂತ ಲಿಖಿತ ಶಿಕ್ಷಣದ ತಿಳುವಳಿಕೆ ಮತ್ತು ಬದುಕಿನ ಅರ್ಥಗಳು ಸಂಪೂರ್ಣವಾಗಿ ಭಿನ್ನವಾಗಿವೆ. ಲಿಖಿತ ಪರಂಪರೆ ಎಷ್ಟು ಪ್ರಬಲವಾಗಿದೆ ಎಂದರೆ – ಮೌಖಿಕ ಪರಂಪರೆ ಹುಟ್ಟು ಹಾಕಿರುವ ಸಂಪೂರ್ಣ ಸಂಸ್ಕೃತಿಯನ್ನು ಬದಿಗೆ ಸರಿಸಿ, ವ್ಯಾಪಕವಾಗಿ ತಾನೇ ವ್ಯಾಪಿಸುವ ಸಾಮರ್ಥ್ಯ ಹೊಂದಿದೆ. ಇಲ್ಲಿಯ ಸೌಲಭ್ಯಗಳಿಂದ ಮಾನವನ ಬದುಕಿಗೆ ಅರಿವು, ಆರೋಗ್ಯ, ಅನ್ನ, ಅನುಕೂಲತೆಗಳೆಲ್ಲ ದಕ್ಕುತ್ತಿರುವುದರಿಂದ, ಸ್ವತಃ ಪ್ರಪಂಚದ ಅಧಿಕಾರಿಗಳೇ ಅವುಗಳ ಪ್ರವೇಶದ ಉಸ್ತುವಾರಿಯನ್ನು ಹೊಂದಿವೆ. ಹೀಗಾಗಿ ಅದನ್ನು ತಡೆಗಟ್ಟಲು ಮೌಖಿಕ ಪರಂಪರೆಯಲ್ಲಿ ತಾಕತ್ತು ಉಳಿದಿಲ್ಲ.

## ನೈಸರ್ಗಿಕ ಹೊರಾಂಗಣದಿಂದ ಮಾನವ ನಿರ್ಮಿತ ಒಳಾಂಗಣಕ್ಕೆ :

ಜನಪದ ಕಲೆಗಳ ಪ್ರದರ್ಶನಗಳು ಕೆಲಸ ಮತ್ತು ಸಂಭ್ರಮದ ಸಂಸ್ಕೃತಿಯ ಆಚರಣೆಗಳೊಂದಿಗೆ ನಡೆಯುವಂತಹವು. ಜನಪದರ ಈ ಕೆಲಸಗಳು, ಈ ಸಾಂಸ್ಕೃತಿಕ ಆಚರಣೆಗಳು – ನಿಸರ್ಗದ ಮಡಿಲಲ್ಲೆ ನಡೆಯುವಂಥವುಗಳು. ಅದಕ್ಕಾಗಿ, ಮೌಖಿಕ ಪರಂಪರೆಯ ಹಾಡು, ಕುಣಿತಗಳೆಲ್ಲ ನಿಸರ್ಗಕ್ಕೇ ಬಾಯಿ ತೆರೆದುಕೊಂಡಿರುತ್ತವೆ. ನಿಸರ್ಗದ ಬದುಕಿನ ಪ್ರಕ್ರಿಯೆಯಲ್ಲೇ ಅವೆಲ್ಲ ಬಂದು ಹೋಗುತ್ತವೆ.

ಲಿಖಿತ ಪರಂಪರೆಯ ಕಲೆಗಳೆಲ್ಲ ಬೆಳೆದುದು ಒಳಾಂಗಣದ ಕಲೆಗಳಾಗಿಯೇ. ಅಲ್ಲಿಯ ನಾಟಕವಾಗಿರಬಹುದು, ಬೇರಾವುದೇ ಕಲೆಯಾಗಿರಬಹುದು – ನೃತ್ಯ, ಸಂಗೀತ, ಸಾಹಿತ್ಯ, ಚಿತ್ರ, ಶಿಲ್ಪ ಇವೆಲ್ಲವುಗಳ ಸೃಷ್ಟಿ ಮತ್ತು ಪ್ರದರ್ಶನಗಳು ನಡೆಯುವುದು ಒಳಾಂಗಣದಲ್ಲಿಯೇ. ಇವತ್ತು ಸಮಾಜದಲ್ಲಿ ಬಹು ಮರ್ಯಾದೆ ಇರುವುದು ಒಳಾಂಗಣದ ಕಲೆಗೆ. ಮತ್ತೇ ಬೀದಿಯ ಮೆರವಣಿಗೆಯಂತಹ, ಬಯಲಿಗೆ ತೆರೆದು ನಡೆಯುವ ಸಂಭ್ರಮದಲ್ಲೇ ದೇಸೀ ಕಲೆಗಳಿಗೆ ಅವಕಾಶವಾಗಿರುತ್ತದೆ.

ಶಿಷ್ಟದ ಪ್ರಭಾವ ಈಗ ದಿನೇ ದಿನೇ ವ್ಯಾಪಕವಾಗುತ್ತಿದೆ. ಅಂತಲ್ಲೇ ಮದುವೆ, ಸೋಬಾನಗಳೆಲ್ಲ ತೆರೆದ ಅಂಗಳದಿಂದ, ಮಂಗಲ ಭವನಗಳ ಒಳಗೆ ಪಾದಾರ್ಪಣೆ ಮಾಡಿವೆ. ಆಧುನಿಕ ಶಿಕ್ಷಣಕ್ಕೆ ಒಳಪಟ್ಟ ಜನಪದ ಸಾಹಿತ್ಯ ಪಠ್ಯಗಳೆಲ್ಲವು ಅಕ್ಷರ ಮಾಧ್ಯಮ ಹುಟ್ಟು ಹಾಕಿದ ವರ್ಗಕೋಣೆಗಳನ್ನು ಸೇರಿವೆ, ಹೊಂದಿಕೊಂಡಿವೆ. ಹೀಗೆಯೇ ಬಯಲಿನಲ್ಲಿಯೇ ನಡೆಯುತ್ತಿದ್ದ ಜನಪದ ಬಯಲಾಟಗಳೆಲ್ಲ ಮುಚ್ಚಿದ ರಂಗ ಮಂದಿರಗಳನ್ನು ಸೇರಬೇಕಾದ ಬದಲಾವಣೆ ನಡೆದಿದೆ.

ವಿಜ್ಞಾನದ ಆಧುನಿಕ ವಿದ್ಯುನ್ಮಾನ ಕೊಡುಗೆಗಳಾದ ರೇಡಿಯೋ ಮತ್ತು ದೂರದರ್ಶನಗಳು ಸ್ವಭಾವತಃ ಮುಚ್ಚಿದ ಬಾಗಿಲಿನ ಅಂಗಣ ಹೊಂದಿದವುಗಳಾಗಿವೆ.

ಬಯಲಿನಲ್ಲಿ ಕುಣಿದು ಕುಪ್ಪಳಿಸಿ, ಆರ್ಭಟಿಸಿ ಮಾತುಗಳನ್ನು ಹೇಳುವ, ಅಟ್ಟ ಮುರಿದು ಬೀಳುವಂತೆ ಕುಣಿಯುವ ದೊಡ್ಡಾಟದ ಒಬ್ಬ ಕಲಾವಿದನಿಗೆ – ಆಕಾಶ ವಾಣಿ ಸ್ಟುಡಿಯೋದಲ್ಲಿ ಒಯ್ದು ನಿಲ್ಲಿಸಿದರೆ ಆತ ಏನು ಮಾಡಬೇಕು ? ದೂರದರ್ಶನದ ಚಿತ್ರೀಕರಣದ ಕೋಣೆಯಲ್ಲಿ ಹಾಕಿ, ತೆರೆದಿಟ್ಟ ಕ್ಯಾಮರಾಗಳ ಮುಂದೆ ಅವನು ಹೇಗೆ ಬಾಯಿ ತೆರೆಯಬೇಕು, ಕಾಲುಗಳೆತ್ತಿ ಹೆಜ್ಜೆ ಹಾಕಬೇಕು ?

ಆಕಾಶ ವಾಣಿಗಳು ಬಂದಾಗಿನಿಂದ ಜನಪದ ಕಲೆಗಳಿಗೆ ಅಷ್ಟಿಷ್ಟು ಪ್ರೋತ್ಸಾಹ ಕೊಡುವ ಉದ್ದೇಶವನ್ನು ಈ ಇಲೆಕ್ಟ್ರಾನಿಕ್ ಮಾಧ್ಯಮ ಹೊಂದಿದೆ. ಎಲ್ಲ ಕಲೆಗಳಂತೆ ಆಕಾಶ ವಾಣಿಯಲ್ಲಿ ಜನಪದ ಕಲಾವಿದರ ಧ್ವನಿಗಳನ್ನೂ ಆರ್ಭಟಗಳನ್ನೂ ಕೇಳುತ್ತಿದ್ದೇವೆ. ದೂರದರ್ಶನ ಬಂದ ನಂತರ ಕೇವಲ ನ್ಯಾಶನಲ್ ಚಾನಲ್ ನವರು ಮಾತ್ರ ಅಷ್ಟಿಷ್ಟು ಜನಪದ ಕಲೆಗಳಿಗೆ ಪ್ರೋತ್ಸಾಹ ಕೊಡಲು ಮುಂದಾಗುತ್ತಿದ್ದು, ಉಳಿದ ಖಾಸಗಿ ಚಾನಲ್ ನವರು ಈ ಬಗೆಗೆ ಯಾವ ಲಕ್ಷವನ್ನೂ ವಹಿಸಲಿಲ್ಲ.

ಹೀಗೆ ಒಂದು ಬಗೆಯಲ್ಲಿ ಆಧುನಿಕ ಶಿಕ್ಷಣ–ವಿಜ್ಞಾನ ಹುಟ್ಟು ಹಾಕಿದ ಈ ಎರಡು ಪ್ರಭಾವಶಾಲಿ ಮಾಧ್ಯಮಗಳಿಂದ ಜನಪದ ಕಲೆಗಳಿಗೆ ಸಾಕಷ್ಟು ಪ್ರಮಾಣದಲ್ಲಿ ಹೊಡೆತ ಬಿದ್ದಿದೆ ಎಂಬ ಭಾವ ಸಾಮಾನ್ಯವಾಗಿ ತೋರುತ್ತಿದೆ. ಇದು ಒಂದಿಷ್ಟು ಸರಿ ಇರಬಹುದು. ಆದರೆ, ಮೂಲತಃ ಈ ಮಾಧ್ಯಮಗಳು ಈ ಕಲೆಗಳಿಗೆ ವಿರೋಧವೇನೂ ಆಗಿಲ್ಲ. ಈ ಮಾಧ್ಯಮಗಳನ್ನು ಬಳಸಿಕೊಂಡು ಜನಪದ ಕಲೆಗಳನ್ನು ಇನ್ನಷ್ಟು ಪ್ರಸಾರ ಮಾಡಬಹುದೇನೋ. ಆದರೆ, ಅಲ್ಲಿರುವ ಸಮಸ್ಯೆ ಇದಕ್ಕೂ ಭಿನ್ನವಾಗಿದೆ.

ಕಲಬುರ್ಗಿಯ ದೂರದರ್ಶನದ ಸ್ಟುಡಿಯೋದಲ್ಲಿ ನಾನು ಇತ್ತೀಚೆಗೆ ಅನುಭವಿಸಿದ ಒಂದೆರಡು ಅನುಭವಗಳನ್ನು ಇಲ್ಲಿ ಹಂಚಿಕೊಳ್ಳಬೇಕು.

೧. ಒಬ್ಬ ಸಾಹಿತಿಯ ಸಂದರ್ಶನದ ಸಂದರ್ಭ. ದೂರದರ್ಶನದ ಅಧಿಕಾರಿಯೇ ಇಂತಹ ಒಂದು ಪ್ರಶ್ನೆ ಕೇಳಬೇಕೆಂದು ಪುನಃ ಪುನಃ ಒತ್ತಾಯಿಸಿದರು. ಅದೆಂದರೆ, ನ್ಯಾಶನಲ್ ಚಾನಲ್ ಒಂದನ್ನು ಬಿಟ್ಟರೆ ಉಳಿದ ಖಾಸಗಿ ಚಾನಲ್ ನವರು ಜನಪದ ಕಲೆಗಳ ಪ್ರೋತ್ಸಾಹದ ಕಡೆ ಲಕ್ಷ ಹಾಕುತ್ತಿಲ್ಲ ಮತ್ತು ನ್ಯಾಶನಲ್ ಚಾನಲ್ಲಿನಲ್ಲಿ ಜನಪದ ಕಲೆಗಳು ಪ್ರಸಾರವಾಗುತ್ತಿದ್ದರೆ ನ್ಯಾಶನಲ್ ಚಾನಲ್‌ನ್ನು ತಿರುಗಿಸಿ ಬೇರೊಂದನ್ನು ವೀಕ್ಷಿಸುತ್ತಾರೆ, ಹೀಗಾದರೆ ಹೇಗೆ ?

೨. ಒಂದು ಸಲ ದೊಡ್ಡಾಟ ಒಂದರ ಚಿತ್ರೀಕರಣಕ್ಕಾಗಿ ತಾಲೀಮು ನಡೆದಿದೆ. ಅದು 'ವೀರ ಅಭಿಮನ್ಯು' ದೊಡ್ಡಾಟ. ದೂರದರ್ಶನದವರಿಗೆ ಅಭಿಮನ್ಯು ಒಮ್ಮೆ ಸಾಯುವನೆಂದು ಗೊತ್ತು. ಆದರೆ, 'ವೀರ ಅಭಿಮನ್ಯು' ದೊಡ್ಡಾಟದಲ್ಲಿ ಕಥೆಯ ನಡುವೆ ಘಟೋದ್ಗಜನೊಡನೆ ಕಾದು ಸಾಯುವ ಪ್ರಸಂಗವೊಂದು ಬರುತ್ತದೆ. ದೂರದರ್ಶನದವರು ಗಾಬರಿಯಾದರು. ಅಭಿಮನ್ಯು ಒಮ್ಮೆ ಮಾತ್ರ ಸಾಯುವುದು,

ಇದೇನಿದು ನಡುವೆ ಕೊಲ್ಲುತ್ತೀರಿ ? ಎಂಬುದು ಅವರ ಪ್ರಶ್ನೆ. 'ಇಲ್ರಿ ಅಭಿಮನ್ಯು ಇಲ್ಲೂ ಸಾಯತ್ತಾನ, ಚಕ್ರವ್ಯೂಹದಲ್ಲೂ ಸಾಯತ್ತಾನ' ಎಂಬುದು ದೊಡ್ಡಾಟ ಮಾಸ್ತರನ ಸಮಜಾಯಿಸಿ. ದೂರದರ್ಶನದವರು ನನ್ನೆಡೆಗೆ ಓಡಿ ಬಂದರು. ತಮ್ಮ ಫಜೀತಿ ಹೇಳಿದರು. ಎಲ್ಲಿಯಾದರೂ ಅಭಿಮನ್ಯು ಎರಡು ಸಲ ಸಾಯುವ ದಾಖಲೆ ಇದ್ದರೆ, ತೋರಿಸಿ ಎಂಬುದು ಕೋರಿಕೆಯಾಗಿತ್ತು. ನಾನು 'ಜೀವನ ಸಂಗೀತ'ದ 'ವತ್ಸಲಾಹರಣ' ಲಾವಣಿಯನ್ನು ತೋರಿಸಿದಾಗ ಅವರಿಗೆ ಖುಷಿಯಾಯಿತು. ಆ ಪುಸ್ತಕವನ್ನವರು ಆಧಾರವಾಗಿ ಇಟ್ಟುಕೊಂಡರು. ದೊಡ್ಡಾಟದ ಚಿತ್ರೀಕರಣ ಮುಗಿಸಿದರು ಮತ್ತು ಅದನ್ನು ಪ್ರಸಾರಗೊಳಿಸಿ ವಾರ ಎರಡು ವಾರ ಕಳೆದು, ಇನ್ನೇನು ಯಾರೂ ಕೇಳಲಿಲ್ಲ ಎಂಬುದನ್ನು ಖಾತ್ರಿ ಮಾಡಿಕೊಂಡು 'ಜೀವನ ಸಂಗೀತ'ವನ್ನು ಹಿಂತಿರುಗಿಸಿದರು.

ಈ ಎರಡು ಪ್ರಸಂಗಗಳು ಆಧುನಿಕ ಪರಿಸರದಲ್ಲಿ ಜನಪದ ಕಲೆಗಳು ಎದುರಿಸುವ ಸಮಸ್ಯೆಗಳನ್ನು ನಮ್ಮ ಮುಂದೆ ತೆರೆದಿಡುತ್ತವೆ. ಅಲ್ಲಿ ಒಂದು ರೀತಿಯ ಸಾಂಸ್ಕೃತಿಕ ಸಂಘರ್ಷ ಏರ್ಪಡುವುದನ್ನು ಕಾಣುತ್ತೇವೆ. ಜೊತೆಗೆ ಆಧುನಿಕರ ದೃಷ್ಟಿ ಮತ್ತು ಅಭಿರುಚಿಗಳು ಸಂಪೂರ್ಣವಾಗಿ ಬದಲಾಗಿರುವುದನ್ನು ಕಾಣುತ್ತೇವೆ. ಆಗ ನಗರವಾಸಿ ಆಗಿರಬಹುದು, ಗ್ರಾಮಾಂತರ ವಾಸಿ ಆಗಿರಬಹುದು, ಅವನ ಸಂಪೂರ್ಣ ಅಭಿರುಚಿಗಳು ಭಿನ್ನವಾಗಿವೆ ಎಂಬುದು ಇದರಿಂದ ಸ್ಪಷ್ಟವಾಗುತ್ತದೆ.

## ಉಳಿಸಿಕೊಳ್ಳುವುದು ಹೇಗೆ ?

ಜನಪದ ಸಾಹಿತ್ಯ ಮತ್ತು ಕಲೆಗಳ – ಹುಟ್ಟು, ಬಳಕೆ ಮತ್ತು ಬೆಳವಣಿಗೆಗಳೆಲ್ಲ ಆದುದು ಗ್ರಾಮಾಂತರ ಪ್ರದೇಶದಲ್ಲಿ, ಮೌಖಿಕ ಪರಂಪರೆಯನ್ನು ಬದುಕುತ್ತಿರುವವರ ನಡುವೆ. ಇವರಲ್ಲಿ ಬದಲಾವಣೆ ಎನ್ನುವುದು ನೈಸರ್ಗಿಕವಾದುದು. ಬದುಕಿನೊಂದಿಗೆ ಒಂದು ಸಂಗತಿ ಬೆಳೆದು ಬಂದಿತೆಂದರೆ ಅದು ಅವರ ಸಂಸ್ಕೃತಿಯ ಒಂದು ಭಾಗವಾಗಿ ಹೋಗುತ್ತದೆ. ಹೀಗೆ ಅದರ ಬಳಕೆಯ ಒಂದು ಪರಂಪರೆಯೇ ನಿರ್ಮಾಣವಾಗುತ್ತದೆ. ಹೀಗೆ ಬಹು ದಿನಗಳವರೆಗೆ ಅವರೊಂದಿಗೆ ಉಳಿದು, ಬದುಕಿನ ಭಾಗವಾಗುವ ಕಲೆ ಸಾಹಿತ್ಯಗಳು ಕೂಡ ತಮ್ಮಿಂದ ದೂರ ಸರಿಯುವಾಗ ಅವುಗಳ ಬಗೆಗೆ ಒಂದು ರೀತಿಯ ಅಗಲಿಕೆಯ ನೋವನ್ನು ಅಲ್ಲಿ ಕಾಣಬಹುದಾಗಿದೆ. ಅವು ನಮ್ಮನ್ನು ಬಿಟ್ಟು ಹೋಗುತ್ತಿರುವ ಸಂದರ್ಭದಲ್ಲಿ ಅದರ ನೋವನ್ನು ಅನುಭವಿಸುತ್ತಿರುವವರು ಹಳ್ಳಿಯಲ್ಲಿ ಹುಟ್ಟಿ ಅವುಗಳೊಂದಿಗೆ ಬದುಕಿದವರು ಎಂದು ತೋರುತ್ತದೆ. ಈ ವಿಚಾರ ಸಂಕಿರಣವನ್ನು ಆಯೋಜಿಸಿದವರು ಮತ್ತು ಭಾಗವಹಿಸಿದವರು ಅಂತಹ ಪರಿಸರದಿಂದಲೇ ಬಂದವರು ಎಂಬುದು ಗಮನಾರ್ಹ ಸಂಗತಿ. ಇನ್ನೊಂದು ತಲೆ ದಾಟಿದರೆ, ನಗರವಾಸಿಗಳಾಗಿ ಹೋಗುವ ತಲೆಮಾರುಗಳಲ್ಲಿ ಇಂತಹ ಕಳೆದುಕೊಳ್ಳುವ ನೋವು ಕಾಣಿಸಲು ಸಾಧ್ಯವಿಲ್ಲ ಎನಿಸುತ್ತದೆ.

ನೈಸರ್ಗಿಕ ಬದಲಾವಣೆಯಲ್ಲಿ – ಕೌಟುಂಬಿಕ ಬದಲಾವಣೆಗೆ ಒಂದು ತಲೆಮಾರು, ಸಾಂಸ್ಕೃತಿಕ ಬದಲಾವಣೆಗೆ ಕನಿಷ್ಠ ನೂರು ವರ್ಷಗಳಾದರೂ ಬೇಕು. ಇಷ್ಟೊಂದು ಸುದೀರ್ಘ ಅವಧಿಯವರೆಗೆ ಬಾಳಿದ ಬದುಕಿನಲ್ಲಿ ಬದಲಾವಣೆ ಎನ್ನುವುದು ಅನಿವಾರ್ಯವಾಗಿರುತ್ತದೆ. ಆದರೆ, ಸಂಸ್ಕೃತಿಯ ಅಪರೂಪದ ಅಮೂಲ್ಯ ಕೊಡುಗೆಗಳನ್ನು ನಾವು ಉಳಿಸಿಕೊಳ್ಳಲು ಬಯಸುವುದು ಸಹಜ. ಸಾಂಸ್ಕೃತಿಕ ಕೇಂದ್ರ ಸ್ಥಾನಗಳಾದ ಮನೆ, ಮಂದಿರಗಳ ಜೀರ್ಣೋದ್ಧಾರಗಳು ನಡೆಯುವಂತೆ ಮಹತ್ವದ ಕಲೆಗಳ ಉಳಿಕೆಗಾಗಿಯೂ ಮನುಷ್ಯ ಪ್ರಯತ್ನಗಳು ನಡೆಯುವುದು ಅವಶ್ಯವೆನಿಸುತ್ತದೆ.

ಆದರೆ, ನಾವು ಈಗ ಬೇಡುತ್ತಿರುವ ಬದಲಾವಣೆ ಎಂತಹುದು ? ಮತ್ತು ಬೇಡುತ್ತಿರುವವರು ಯಾರು ? ಎಂಬುದು ನಮ್ಮ ಮುಂದಿರುವ ಪ್ರಶ್ನೆ. ಬದಲಾವಣೆ ಬಯಸುತ್ತಿರುವವರು – ಶಿಕ್ಷಿತ ಮತ್ತು ನಗರ ವಾಸಿಗಳು. ಅಂದರೆ, ಬದಲಾವಣೆ ಎಂಬುದು ಒಮ್ಮೆಗೆ ಮೌಖಿಕ ಪರಂಪರೆಯಿಂದ ಲಿಖಿತ ಪರಂಪರೆಯ ಸ್ವರೂಪಕ್ಕೆ ಬದಲಾವಣೆಯಾಗಬೇಕು ಮತ್ತು ಗ್ರಾಮಾಂತರ ಪ್ರದೇಶದಿಂದ ನಗರ ಪರಿಸರಕ್ಕೆ ಸ್ಥಳಾಂತರ ಹೊಂದಬೇಕು. ಹೊರಾಂಗಣ ಕಲೆಗಳಾದ ಅವು ಒಳಾಂಗಣ ಕಲೆಗಳಾಗಿ ಪರಿವರ್ತನೆ ಹೊಂದಬೇಕು.

ಇಂದು ನಾವು ಜನಪದ ಸಾಹಿತ್ಯದ ಪಠ್ಯಗಳನ್ನು ಬಿ. ಎ. ಮತ್ತು ಎಂ. ಎ. ಪದವಿ ತರಗತಿಗಳಿಗೆ ಪಠ್ಯವಾಗಿಸುತ್ತಿದ್ದೇವೆ. ಇದನ್ನು ಕೂಡ ಜನಪದ ಸಾಹಿತ್ಯ ಉಳಿಯಲು ಮಾಡುವ ಪ್ರಯತ್ನಗಳಲ್ಲಿ ಒಂದಾಗಿ ಗಣಿಸಬೇಕು. ಇಂಥಲ್ಲಿ ಶಿಷ್ಟ ಸಾಹಿತ್ಯದ ಸ್ವರೂಪದಲ್ಲಿ, ಶಿಷ್ಟ ಸಾಹಿತ್ಯ ಹುಟ್ಟು ಹಾಕಿದ ಪರಿಸರದಲ್ಲಿ, ಅಂದರೆ ವರ್ಗಕೋಣೆಗಳಲ್ಲಿ ಜನಪದ ಸಾಹಿತ್ಯದ ಪಾಠ ನಡೆಯಬೇಕಾಗಿದೆ. ಅಂದರೆ ಮೌಖಿಕ ಪರಂಪರೆ, ಗ್ರಾಮಾಂತರ ಪ್ರದೇಶ ಮತ್ತು ತೆರೆದ ಪರಿಸರದಲ್ಲಿ ಪ್ರಯೋಗವಾಗುವ ಬಯಲಾಟ, ಹಾಡು, ಕಥೆ, ಗಾದೆಗಳನ್ನು – ಒಂದು ನಗರ ಪ್ರದೇಶದ ಶಿಕ್ಷಣ ಸಂಸ್ಥೆಯ ಕ್ಲಾಸ್ ರೂಮುಗಳಲ್ಲಿ – ಶಿಷ್ಟ ಸಾಹಿತ್ಯದಂತೆ ಮುದ್ರಿತ ರೂಪದಲ್ಲಿ ಪಾಠ ಮಾಡಬೇಕಾದ ಅನಿವಾರ್ಯತೆಯಲ್ಲಿ ನಾವು ಅನೇಕ ಅಡಚಣೆಗಳನ್ನು ಎದುರಿಸಬೇಕಾಗಿದೆ. ಇಂಥಲ್ಲಿ ಅನೇಕ ಪ್ರಶ್ನೆಗಳು ಬಂದರೂ ಸಮಸ್ಯೆಗಳು ಎದುರಾದರೂ ಹೇಗೆ ಅವುಗಳನ್ನು ಸರಿ ಹೊಂದಿಸಿಕೊಂಡು ಮುನ್ನುಗ್ಗುತ್ತಿದ್ದೇವೆಯೋ ಅಂತಹ ಪ್ರಯತ್ನಗಳು ಕಲೆಯ ಪ್ರಯೋಗದಲ್ಲೂ ನಡೆಯಬೇಕಾದುದು ಅನಿವಾರ್ಯ.

ಜನಪದ ಸಾಹಿತ್ಯ ಪಠ್ಯಕ್ಕೆ ಅಳವಟ್ಟಾಗ ಕಲಿಯುವವರು ಯಾರು ? ಎಂಬ ಮುಖ್ಯ ಸಂಗತಿಗಳನ್ನು ಗಮನಿಸಿದರೆ, ಆಧುನಿಕ ಶಿಕ್ಷಣ ಪದ್ಧತಿಗೆ ಅಳವಟ್ಟ ಜನವೇ ಅಲ್ಲಿರುವುದನ್ನು ಗಮನಿಸಬೇಕು. ವಿದ್ಯಾರ್ಥಿಗಳು ಮತ್ತು ಶಿಕ್ಷಕರು ಆಧುನಿಕ ಶಿಕ್ಷಣಕ್ಕೆ ಒಳಗಾದವರು. ಇದನ್ನು ನಾವು ಕಲೆಗಳಿಗೆ ಅನ್ವಯಿಸಿದಾಗ ತಿರುವು ಮುರುವು ಆಗುತ್ತಿದೆ.

ಕಲಿಕೆಯಲ್ಲಿ ತೋರಿಸುವ ಆಸಕ್ತಿಯನ್ನು ಕಲಾಭಿವ್ಯಕ್ತಿಯಲ್ಲಿ ತೋರಿಸುತ್ತಿಲ್ಲ. ಕಲಾವಿದರು ಹಳ್ಳಿಗರೇ ಆಗಿದ್ದು, ಶಹರದವರ ಮನಸ್ಸಿನಂತೆ ಬದಲಾವಣೆ ಆಗಬೇಕೆಂದು ಬಯಸುತ್ತಿದ್ದೇವೆ. ಇದು ಸಾಧ್ಯವಿಲ್ಲದ ಮಾತು. ಇಲ್ಲೂ ಕಲಾವಿದರು ಮತ್ತು ಕಲಿಸುವವರು ಶಿಕ್ಷಣವೇತ್ತರೇ ಆಗಬೇಕು. ಆಗ ಒಳಾಂಗಣ ಪ್ರದರ್ಶನ ಮತ್ತು ಶಿಕ್ಷಿತ ಪ್ರೇಕ್ಷಕರ ಎದುರಿಗೆ ಒಂದು ಪ್ರಯೋಗ ಯಶಸ್ವಿಯಾಗಿ ನಡೆಯಲು ಸಾಧ್ಯವಾಗುತ್ತದೆ.

❖

# ಗೋಷ್ಠಿ : ೨

# ಅಲೆಮಾರಿಗಳು ಮತ್ತು ಜಾಗತೀಕರಣ

ಡಾ. ಟಿ. ಎಂ. ಭಾಸ್ಕರ್

◆

ನಿಸರ್ಗದ ಮಡಲಿನಲ್ಲಿ ಜೀವಿಸುತ್ತ, ತಮ್ಮ ಸ್ವಚ್ಛಂದ ಜೀವನವನ್ನು ಹಾಯಾಗಿ ಕಳೆಯುತ್ತ ಬಂದಿರುವ ಅಲೆಮಾರಿಗಳು, ಈಗ ಅತಂತ್ರದ ಸ್ಥಿತಿಯಲ್ಲಿದ್ದಾರೆ. ಅಂದರೆ, ಅವರು ಕಾಡು ಬಿಟ್ಟು ನಾಡಿನ ಹತ್ತಿರ ಬರುವುದಕ್ಕೆ ಬಹಳಷ್ಟು ಪ್ರಯಾಣಿಸಿ ದಣಿದಿದ್ದಾರೆ. ಹೀಗಾಗಿ ಸದ್ಯದ ಪರಿಸ್ಥಿತಿಯಲ್ಲಿ ಹತ್ತಾರು ಸಮಸ್ಯೆ-ಸವಾಲುಗಳನ್ನು ಹೊತ್ತುಕೊಂಡು ತಮ್ಮ ವಿಶಿಷ್ಟ ಸಂಸ್ಕೃತಿಯನ್ನು ಕಾಯದೆ, ಹೊಸ ಸಂಸ್ಕೃತಿಯನ್ನು ಬೇಗ ಸ್ವೀಕರಿಸಲಾಗದೇ ಡೋಲಾಯಮಾನ ಸ್ಥಿತಿಯಲ್ಲಿದ್ದಾರೆ. ಆದುದರಿಂದ ಅಲೆಮಾರಿಗಳಲ್ಲಿರುವ ಅವರದೇ ಮೂಲದಲ್ಲಿದ್ದ ಆಚಾರ-ವಿಚಾರ, ರೂಢಿ-ಸಂಪ್ರದಾಯ, ಜೀವನ ವಿಧಾನ, ಹಬ್ಬ-ಹರಿದಿನ, ಜಾತ್ರೆ-ಉತ್ಸವಗಳು ಮೂಲದ ರೀತಿಯಲ್ಲಿಯೇ ಆಚರಣೆಯಲ್ಲಿ ಉಳಿದುಕೊಂಡು ಬಂದಿಲ್ಲ. ಇದಕ್ಕೆ ಆಧುನಿಕತೆಯೂ ಪ್ರಬಲವಾದ ಕಾರಣವಾಗಿದೆ. ಇದರ ಜೊತೆಗೆ ಜಾಗತೀಕರಣ, ಉದಾರೀಕರಣದ ನೀತಿಗಳು ಪ್ರತಿಯೊಂದು ಅಲೆಮಾರಿಗಳ ಸಾಂಸ್ಕೃತಿಕ ಜೀವನದ ಮೇಲೆ ಅವರು ಮಾಡುವ ಪೂಜಾ ವಿಧಿ,ವಿಧಾನಗಳ ಮೇಲೆ ಜಾಗತೀಕರಣ ಗಾಢವಾಗಿ ಪ್ರಭಾವ ಬೀರಿದೆ. ಆದುದರಿಂದ, ಮೂಲದ ಅವರ ವಿಚಾರಗಳಲ್ಲಿ ಒಂದಿಷ್ಟು ಬದಲಾವಣೆಗಳು ಆಗಿರುತ್ತವೆ. ಈ ಏಕ ಕಾಲದಲ್ಲಿಯೇ ಅಲೆಮಾರಿಗಳು ಜಾಗತೀಕರಣಕ್ಕೆ ಸಿಕ್ಕು ಬೇರೆ, ಬೇರೆ ಧರ್ಮಿಯರು ಆಚರಿಸುತ್ತಿದ್ದ ಹಬ್ಬ-ಹರಿದಿನ, ಜಾತ್ರೆ, ಉತ್ಸವಗಳಲ್ಲಿ ಭಾಗವಹಿಸುವುದರ ಮೂಲಕ ತಮ್ಮದೆನುವುದನ್ನು ಒಂದಿಷ್ಟು ಬಿಟ್ಟು ಅನ್ಯರದನ್ನು ಆಚರಿಸಲು ತೊಡಗಿದರು. ಹೀಗಾಗಿ ಅಲೆಮಾರಿಗಳ ಮೂಲದ ಜಾನಪದೀಯ ಸೊಗಡನ್ನು ಈಗ ಹುಡುಕುವುದು ಕಷ್ಟದ ಕೆಲಸವಾಗಿದೆ. ಇದು ಒಂದು ತೆರನಾಗಿದ್ದರೆ, ಜಾಗತೀಕರಣದಲ್ಲಿ ತಮ್ಮ ಅಸ್ತಿತ್ವವನ್ನು ಇನ್ನೂ ಭದ್ರಗೊಳಿಸಲು ದಾಪುಗಾಲು ಹಾಕುತ್ತ, ಇದರಲ್ಲಿ ಯಶಸ್ವಿಯಾದ ಬಹು ಮೀಡಿಯಾಗಳು ಅಲೆಮಾರಿಗಳನ್ನು ತನ್ನತ್ತ ಆಕರ್ಷಿಸಲು ಪ್ರಯತ್ನಿಸದರ ಫಲವಾಗಿ ಅಲೆಮಾರಿಗಳು ಮೂಲ ಅಂಶಗಳಿಂದ ದೂರ ಸರಿಯಲು ಕಾರಣವಾಯಿತು. ಈ ಎಲ್ಲದರ ಪ್ರಭಾವ, ಸೆಳೆತ, ಹೊಡೆತಗಳಿಗೆ ಹೊಟ್ಟೆ-ಬೆನ್ನು ಕೊಟ್ಟ ಅಲೆಮಾರಿಗಳು ಜೀವಂತ ಉಳಿದು

ಕೊಂಡಿರುವುದೇ ಒಂದು ಸಾಹಸಮಯ ಕಥೆಯಾಗಿದೆ. ಈ ಎಲ್ಲ ಶಕ್ತಿ–ಯುಕ್ತಿಗಳ ದಾಳಿಗೆ ಸಿಕ್ಕು ಸಂಚಾರದಲ್ಲಿದ್ದ ಕೆಲ ಅಲೆಮಾರಿಗಳು ನೀರಿನಿಂದ ಹೊರಗೆಸೆದ ಮೀನಿನಂತೆ ಚಡಪಡಿಸುತ್ತಿರುವುದು ಸತ್ಯವಾಗಿದೆ.

ಯಾವುದೇ ಅಲೆಮಾರಿ ಜನಾಂಗದ ಅಧ್ಯಯನ ಕೈಗೊಳ್ಳುವಾಗ ಅವುಗಳದೇ ಆಗಿರುವ ವಿಶಿಷ್ಟ ಭಾಷೆ ಮತ್ತು ಸಂಸ್ಕೃತಿಗಳಿರುತ್ತವೆಂಬುದನ್ನು ತಿಳಿದು ಕೊಳ್ಳಬೇಕು. ಉದಾ : ಲಂಬಾಣಿ ಭಾಷೆ – ಸಂಸ್ಕೃತಿ, ಪಾರ್ಧಿಗಳ ಭಾಷೆ – ಸಂಸ್ಕೃತಿ, ಚೆಂಚು ಚೆಂಚರ, ಸುಡುಗಾಡು ಸಿದ್ಧರ, ಮೇದರ, ಕಿಳ್ಳೆಕ್ಯಾತರ, ಹಾವಾಡಿಗರ, ಬಾಳಸಂತೋಷಿಗಳ, ದುರಗ ಮುರಗಿಯವರ, ಹೆಳವರ, ಕಾಡುಕುರುಬರ, ಮೋಡಿಕಾರರ ಮುಂತಾದ ಅಲೆಮಾರಿಗಳು ತಮ್ಮ ಭಾಷಾ ಸಂವಹನ ಜಾಡಿನಲ್ಲಿ ತಮ್ಮೆಲ್ಲ ವ್ಯವಹಾರಗಳನ್ನು, ವಿಶಿಷ್ಟ ಸಂಸ್ಕೃತಿಯನ್ನು ಕಾಯ್ದುಕೊಂಡು ಬಂದಿದ್ದಾರೆ. ಯಾವುದೇ ಸಂದರ್ಭದಲ್ಲಿ ತಮಗಾಗಲೀ, ತಮ್ಮ ಭಾಷೆ,ಸಂಸ್ಕೃತಿಗಾಗಲೀ, ಅನ್ಯ ಜಾತಿ ಇಲ್ಲವೇ ಧರ್ಮಿಯರಿಂದ ತೊಂದರೆಯಾದಾಗ ಅಲೆಮಾರಿಗಳು ಅಂತಹ ಆತಂಕಕಾರಿ ವಾತಾವರಣದಿಂದ ದೂರ, ಬಹು ದೂರ ಪ್ರಯಾಣ ಬೆಳೆಸಿ ತಮ್ಮ ವಿಶಿಷ್ಟ ಸಂಸ್ಕೃತಿಯನ್ನು ಉಳಿಸಿಕೊಂಡಿರುವ ಉದಾಹರಣೆಗಳು ಸಾಕಷ್ಟು ದೊರೆಯುತ್ತವೆ. ಇದು ಒಂದು ರೀತಿಯದ್ದಾಗಿದ್ದರೆ ನಿಸರ್ಗದ ವಿಕೋಪ, ಕೆಟ್ಟ ಅನ್ನದ ಹಾ ! ಹಾ ! ಕಾರ, ಭೂಕಂಪ ಇತ್ಯಾದಿಗಳಿಂದಾಗಿಯೂ ಅಲೆಮಾರಿಗಳು ಬೇರೆ ಬೇರೆ ಸ್ಥಳಗಳಿಗೆ ಪ್ರಯಾಣ ಬೆಳೆಸಿರುವುದು ಕಂಡು ಬರುತ್ತದೆ. ಹೀಗೆ ಪ್ರಯಾಣ ಬೆಳೆಸಿದಾಗಲೆಲ್ಲ ಅಲೆಮಾರಿಗಳ ಜೀವನ ವಿಧಾನದ ಮೇಲೆ ಅವರ ಸಂಸ್ಕೃತಿ, ಭಾಷೆಗಳ ಮೇಲೆ ಪ್ರಭಾವವಾಗುವುದು ಸರ್ವೇಸಾಮಾನ್ಯವಾದುದು ; ಆದರೆ, ಇದು ಏನೇ ಪರಿವರ್ತನೆಯಾಗಿದ್ದರೂ ಅವರವರ ದೇಶ, ಭಾಷೆ, ನೆಲ, ಜಲ, ಸಂಸ್ಕೃತಿಯ ಕೊಡುಕೊಳ್ಳುವಿಕೆ ಮತ್ತು ರಾಷ್ಟ್ರೀಯ ಆಂತರಿಕ ಬದಲಾವಣೆಗೆ ಸಂಬಂಧಿಸಿದ, ಅಲೆಮಾರಿಗಳ ಅಧ್ಯಯನಕ್ಕೆ ಸಂಬಂಧಿಸಿದ್ದಾಗಿರುವಂಥದ್ದು. ಆದರೆ, ಈಗ ಈ ಪ್ರಶ್ನೆ ಮುಖ್ಯವಾಗಿರದೇ, ಅಲೆಮಾರಿಗಳು–ಜಾಗತೀಕರಣದ ಸಮಸ್ಯೆ ಮತ್ತು ಸವಾಲು, ಪರಿಹಾರ ಮತ್ತು ಸ್ಥಿತ್ಯಂತರಗಳನ್ನು ಕುರಿತು ಆಲೋಚಿಸುವುದು ಹಾಗೂ ತಮ್ಮ ಮೂಲತನವನ್ನು ಕುರಿತು ಚಿಂತನ, ಮಂಥನ ಮಾಡುವುದರ ಕಡೆಗೆ ನಮ್ಮ ಗಮನವನ್ನು ಹರಿಸುವುದೇ ಆಗಿದೆ ಎಂದು ಹೇಳಬಹುದು. ಹೀಗಾಗಿ ಅಲೆಮಾರಿಗಳು ಮತ್ತು ಜಾಗತೀಕರಣ ಹಿಂದಿಗಿಂತಲೂ ಇಂದು ಅಧ್ಯಯನಕ್ಕೆ ಒಳಪಡಿಸಬೇಕಾದ ಅಗತ್ಯವಿದೆ.

ಸಾಮಾನ್ಯವಾಗಿ ಆಯಾ ಜನ ಸಮುದಾಯ ಮತ್ತು ಬೇರೆ ಬೇರೆ ಧರ್ಮಿಯರು ಹಾಗೂ ಮತಾವಲಂಬಿಗಳು ತಮ್ಮ ಭಾಷೆಗಳನ್ನು ಸೃಷ್ಟಿ ಮಾಡಿಕೊಂಡು ತಮ್ಮ ಆಂತರಿಕ ವ್ಯವಹಾರಗಳನ್ನು ವ್ಯವಹರಿಸುತ್ತ ಬಂದಿರುವುದನ್ನು ನಾವು ಅನ್ಯ ಜನ ಸಂಪರ್ಕ, ಸಂಪರ್ಕ ಸಾಧನಗಳಿಂದಾಗಿ ಸೀಮಿತ ವಲಯದಲ್ಲಿ ಜಾರಿಯಲ್ಲಿದ್ದ ಆಯಾ ಅಲೆಮಾರಿಗಳು

ಮಾತಾಡುವ ಭಾಷೆಗಳ ಶಕ್ತಿ ಕಡಿಮೆಯಾಗಲು ಪ್ರಾರಂಭಿಸಿತೆಂದು ಹೇಳಬಹುದು. ಇದಕ್ಕೆ ಕಾರಣ, ಅಲೆಮಾರಿಗಳು ಬೇರೆ ಬೇರೆ ಸ್ಥಳ, ಪ್ರದೇಶ, ಪ್ರಾಂತಗಳಿಗೆ ಸಂಚರಿಸುವ ಸಂದರ್ಭ ಮತ್ತು ಜೀವನೋಪಾಯದ ಹಂತದಲ್ಲಿ ಜಾಗತಿಕ ಮಟ್ಟದಲ್ಲಿ ಸಂವಹನ ಭಾಷಾ ಮಾಧ್ಯಮದ ಬಳಕೆಗೆ ಸಂಬಂಧಿಸಿದಂತೆ ಒಟ್ಟಾರೆ, ಜನ ಸಮುದಾಯ ತೆಗೆದುಕೊಂಡು ಆಸಕ್ತಿಯ ಹಿನ್ನೆಲೆಯಲ್ಲಿ ಅಲೆಮಾರಿಗಳು ಕೂಡಾ ಅನಿವಾರ್ಯಯೆಂಬಂತೆ ತಮ್ಮ ಭಾಷೆಗೆ ಒಂದಿಷ್ಟು ವಿರಾಮ ಕೊಟ್ಟು ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಜನರಾಡುವ ಭಾಷೆಯನ್ನು ಕಲಿಯಲು ಮತ್ತು ಮಾತನಾಡಲು ಪ್ರಯತ್ನಿಸುತ್ತ ಸಾಗಿದರು. ಮನುಷ್ಯನಿಗೆ ಯಾವುದು ಅಗತ್ಯ ಮತ್ತು ಅನಿವಾರ್ಯವೆಂದು ಕಾಣಿಸುತ್ತದೆಯೋ ಅದನ್ನು ಪ್ರಯತ್ನ ಪೂರ್ವಕವಾಗಿ ತನ್ನದಾಗಿಸಿಕೊಂಡು ಪ್ರಯತ್ನಿಸುವುದು ಸಹಜವಾಗಿದೆ. ಅದೇ ರೀತಿಯಲ್ಲಿ ಅಲೆಮಾರಿಗಳಿಗೆ ಜಾಗತೀಕರಣದ ಹೊಸ ಅಲೆಯ ಪ್ರಭಾವದ ಹಿನ್ನೆಲೆಯಲ್ಲಿ ಸಂವಹನಕ್ಕೆ ಸಂಬಂಧಿಸಿ ಭಾಷಾ ಶಕ್ತಿಗೆ ಮನಸ್ಸು ತೆರೆದರು. ಇದರ ಫಲವಾಗಿ ಅಲೆಮಾರಿಗಳ ಭಾಷೆಯ ಮೇಲೆ ಅನ್ಯ ಬಾಷೆಗಳ ಪ್ರಭಾವ ಬಹಳಷ್ಟಾಯಿತೆಂದು ಹೇಳಬಹುದು. ಅಂದರೆ, ಜಾಗತೀಕರಣದಿಂದಾಗಿ ಅಲೆಮಾರಿಗಳ ಭಾಷೆಗ ಮೇಲೆ ಕೆಟ್ಟ ಪರಿಣಾಮವಾಯಿತೆಂದು ಇಲ್ಲಿ ಮುಖ್ಯವಾಗುತ್ತದೆ.

ಅಲೆಮಾರಿಗಳೆಲ್ಲ ಅವರವರದೇ ಆಗಿರುವ ಭಾಷೆಗಳನ್ನು ಮಾತಾಡುತ್ತ ತಮ್ಮ ಜೀವನವನ್ನು, ಭಾವನೆ, ವಿಚಾರಗಳನ್ನು ಹಂಚಿಕೊಳ್ಳುತ್ತಿದ್ದರೂ, ಯಾವಾಗ ನಗರೀಕರಣ ಮತ್ತು ಜಾಗತೀಕರಣದ ಪ್ರಭಾವವಾಗಲು ಪ್ರಾರಂಭಿಸಿತೋ, ಆವಾಗ ಅವರಿಗೂ ಯಾವ ಕಡೆಗೆ ಪ್ರಯಾಣ ಬೆಳೆಸಬೇಕೆಂಬುದನ್ನೂ ಮತ್ತು ಯಾವ ಕಡೆಗೆ ಪ್ರಯಾಣ ಬೆಳೆಸಿದರೆ ತಮ್ಮ ಹೊಟ್ಟೆ ತುಂಬುತ್ತದೆಂಬುದನ್ನು ತಿಳಿಯ ತೊಡಗಿತು.ಇದಕ್ಕೆ ಇನ್ನೊಂದು ಸ್ಪಷ್ಟನೆಯೆಂದರೆ ಜಾಗತೀಕರಣದ ಸೆಳೆತಕ್ಕೆ ಯಾವ ರೀತಿಯಲ್ಲಿ ನಿರ್ಗತಿಕ ಜಾತಿಯವರು ಮತ್ತು ವ್ಯವಹಾರದ ಮುಂಚೂಣಿಯಲ್ಲಿದ್ದವರು ಸಿಕ್ಕಿಕೊಂಡರೋ ಹಾಗೆಯೇ ಅಷ್ಟು ತೀವ್ರಗತಿಯಲ್ಲಿಲ್ಲದಿದ್ದರೂ ಅಲೆಮಾರಿಗಳು ಕೂಡಾ ಜಾಗತೀಕರಣದ ಭಾಷಾ ಪ್ರಭಾವಕ್ಕೆ ಸಿಕ್ಕಿಕೊಂಡರೆಂದು ಹೇಳಬಹುದು.

ಬಹು ಹಿಂದೆ ತಮ್ಮ ನಿತ್ಯದ ಆಗು ಹೋಗುಗಳಿಗೆ ಅಲೆಮಾರಿಗಳ ಭಾಷೆ ಹೇಗೆ ಸಹಕರಿಸಿತೋ ಹಾಗೆಯೇ ಅವರ ಬದುಕಿನ ಸಾಗುವಳಿಯ ಹಂತದಲ್ಲಿ ಹೊಟ್ಟೆಯ ಹಸಿವನ್ನು ನೀಗಿಸಿಕೊಳ್ಳುವ ಸಂದರ್ಭದಲ್ಲಿ ತಮ್ಮ ಭಾಷೆಯನ್ನು ಒಂದಿಷ್ಟು ಬದಿಗೆ ಸರಿಸಿ, ಜಾಗತೀಕರಣದ ಸಂದರ್ಭದಲ್ಲಿ ಉಪಯೋಗವಾಗುವ ಭಾಷೆಗಳನ್ನು ಅಲೆಮಾರಿಗಳೂ ಕೂಡಾ ಬಳಸಲು ತೊಡಗಿದರು. ಹೀಗಾಗಿ ಅವರ ಭಾಷೆಯ ಮೇಲೆ ಜಾಗತೀಕರಣದ ಮುಂಚೂಣಿಯಲ್ಲಿರುವ ಮತ್ತು ಅದಕ್ಕೆ ಹತ್ತಿರವಾಗಿರುವ ಭಾಷೆಗಳ ಪ್ರಭಾವ ಸಾಕಷ್ಟಾಯಿತು.

ಅಲೆಮಾರಿಗಳ ಜೀವನ ವಿಧಾನದ ಮೇಲೆ ಅನ್ಯ ಜನಾಂಗದ, ಅನ್ಯ ಧರ್ಮಿಯರ ಪ್ರಭಾವ ಬೀರಿರುವುದು, ತದ ನಂತರದ ಶತಮಾನಗಳಲ್ಲಿ ಅಂದರೆ, ೨೦ನೇ ಶತಮಾನ ಮುಗಿಯುವ ಸಂದರ್ಭದಲ್ಲಿ ಪ್ರಪಂಚದ ಪ್ರತಿಯೊಂದು ಜನಾಂಗ, ಸಮಾಜದ ಮೇಲೆ ಪ್ರಭಾವವಾಯಿತು. ಇಪ್ಪತ್ತನೆಯ ಶತಮಾನದಲ್ಲಿ ಕೊನೆಗೊಂಡ ವಸಾಹತೀಕರಣವು ಇಪ್ಪತ್ತೊಂದನೇಯ ಶತಮಾನಕ್ಕೆ ಕೊಟ್ಟಿರುವ ಕೊಡುಗೆಯೇ ಜಾಗತೀಕರಣ. ಜೊತೆಗೆ ಈ ಜಾಗತೀಕರಣ ಮತ್ತು ವಸಾಹತೀಕರಣಗಳೆರಡು ಅಕ್ಕ ತಂಗಿಯರೆಂದೇ ಪರಿಗಣಿಸಬೇಕು. "ಮೊದಲು ಹುಟ್ಟಿದ ಕಿವಿಗಳಂತೆ ಅನಂತರ ಮೂಡಿದ ಕೊಂಬುಗಳು ಗಟ್ಟಿಯಾಗಿ ಮೊನಚಾಗಿರುತ್ತವೆಂಬ ಗಾದೆಯಂತೆ ವಸಾಹತೀಕರಣಗಿಂತಲೂ ಜಾಗತೀಕರಣವು ಹೆಚ್ಚು ಆಕ್ರಮಣಕಾರಿಯಾಗಿದೆ". (ಜಾ ಮತ್ತು ಜಾ ಮುಖಾಮುಖಿ ಸಂ ೨೪೫)

ದೇಶದ ಬಹುತೇಕ ಕಾಡು, ಗುಡ್ಡ, ಬೆಟ್ಟ, ಅರಣ್ಯ, ಹೊಲ-ಗದ್ದೆಗಳ ಅಂಚಿನಲ್ಲಿ ಮತ್ತು ಗ್ರಾಮೀಣ, ನಗರ ಪ್ರದೇಶದ ಒಳಗೂ ಹೊರಗೂ ಅಲೆಮಾರಿಗಳು ಜೀವನ ಸಾಗಿಸುತ್ತಿದ್ದಾರೆ. ತಂದೆಯಿಂದ ಬಂದಿರುವ ಸಂಚಾರದ ಜೀವನವನ್ನು ಈಗ ಅಲೆಮಾರಿಗಳು ಬೇಕು-ಬೇಡ ಎಂಬಂತೆ ಒಲ್ಲದ ಮನಸ್ಸಿನಿಂದ ಮುಂದುವರಿಸಿಕೊಂಡು ಬರುತ್ತಿದ್ದಾರೆ. ಹಿಂದೆ ಇದೊಂದು ಕಾಯಕ ಎಂಬಂತೆ ಕಟ್ಟು ನಿಟ್ಟಾಗಿ ಪಾಲಿಸಿಕೊಂಡು ಬಂದ ಅಲೆಮಾರಿಗಳು ಈಗ ಆ ಕಡೆಗೆ ಗಮನವನ್ನು ಹರಿಸುತ್ತಿಲ್ಲವೆನಿಸುತ್ತಿದೆ. ಇದಕ್ಕೆ ಪ್ರಬಲವಾದ ಕಾರಣಗಳೂ ಇವೆ.

೧. ಅಲೆಮಾರಿಗಳನ್ನು ಊರ ಜನ ನೋಡುವ ದೃಷ್ಟಿಕೋನ ಬದಲಾವಣೆಯಾಗಿದೆ.

೨. ಸಂಶಯದಿಂದ ನೋಡಲಾಗುತ್ತದೆ.

೩. ಅಲೆಮಾರಿಗಳಿಗೆ ಬೇರೆಯವರ ಕನಿಕರ, ಅನುಕಂಪ, ಸಹಾಯದ ಕೊರತೆ ಇದೆ.

ಹಿಂದಿನ ಕಾಲದಲ್ಲಿ ಅಲೆಮಾರಿಗಳು ತಮ್ಮ ಊರಲ್ಲಿ ಬಂದಿದ್ದಾರೆಂದರೆ, ಊರ ಜನತೆ ಅವರಿಗೆ ದವಸ ಧಾನ್ಯಗಳನ್ನು ಮೊರದಲ್ಲಿ ಹಾಕಿ ತುಂಬಿ, ಕೊಡುತ್ತಿದ್ದರು ಆದರೆ, ಇಂದು ಯಾವ ಗ್ರಾಮದಲ್ಲಿಯೂ ಇಂತಹ ದೃಶ್ಯಾವಳಿಗಳು ಕಣ್ಣಿಗೆ ಕಾಣಿಸುತ್ತಿಲ್ಲ. ಹೀಗೇಕಾಯಿತೆಂದರೆ ವ್ಯಾಪಾರವನ್ನೇ ತನ್ನ ಮೂಲ ಉದ್ದೇಶವಾಗಿಟ್ಟುಕೊಂಡಿರುವ ಜಾಗತೀಕರಣದ ಪ್ರಭಾವವೆಂಬುದು ತಿಳಿದ ಸಂಗತಿಯಾಗಿದೆ. ಅಲೆಮಾರಿಗಳು ಆಯಾ ಗ್ರಾಮದ ಸ್ಮಶಾನ ಇಲ್ಲವೇ ಸಾರ್ವಜನಿಕ ಸ್ಥಳಗಳಲ್ಲಿ ಇಳಿದುಕೊಂಡು ಜೀವನವನ್ನು ನೂಕುತ್ತಿದ್ದಾರೆ. ಈ ಜಾಗತೀಕರಣದಿಂದ ಮತ್ತು ಶಿಕ್ಷಣದ ಹೊಸ ನೀತಿಗಳಿಂದ ಅವರೂ ಕೂಡಾ ಒಂದು ಕಡೆಗೆ ನೆಲೆ ನಿಂತು ಜೀವನ ಸಾಗಿಸುವ ಸ್ವಂತ ವಿಚಾರ ವ್ಯಕ್ತ ಪಡಿಸುವುದರ

ಕಡೆಗೆ ಅಲೆಮಾರಿಗಳು ಪ್ರಯತ್ನ ಪಡುವುದನ್ನು ಕಂಡರೆ ಅವರ ಸಂವೇದನ ಮನಸ್ಸು ನಮಗೆ ಅರ್ಥವಾಗುತ್ತದೆ.

ಅಲೆಮಾರಿಗಳು ಹೀಗೆ ವಿಚಾರ ಮಾಡುವುದರ ಹಿಂದೆ ಅವರ ಆಶಯಗಳೇನಿವೆಯೆಂದರೆ, ತಮ್ಮ ಜೀವನ ನಿರ್ವಹಣೆಗೆ ತೊಂದರೆಯಾಗುತ್ತಿರುವುದೇ ಆಗಿದೆ. ಹಿಂದಿನ ಕಾಲದಲ್ಲಿ ಭಿಕ್ಷೆ ಬೇಡುವುದು ಒಂದು ಕಾಯಕವೆಂಬ ಶ್ರೇಷ್ಠ ಭಾವನೆ ಇದ್ದಂತೆ ಈಗ ಭಿಕ್ಷೆ ಬೇಡುವುದು ಕಾಯಕವಲ್ಲವೆಂಬ ಭಾವನೆ ಮೊಳೆಯುತ್ತಿದೆ. ಹಾಗೆಯೇ ಎಷ್ಟು ದಿವಸ ಭಿಕ್ಷೆ ಬೇಡಿ ಹೊಟ್ಟೆ ಹೊರೆದು ಕೊಳ್ಳಬೇಕೆಂಬ ಕೀಳರಿಮೆ ಅವರಿಗೆ ಕಾಡುತ್ತಿದೆ ಮತ್ತು ಹೀಗೆ ಎಷ್ಟು ಶತಮಾನಗಳ ಕಾಲ ಇರಬೇಕು ? ಎಂಬ ಪ್ರಶ್ನೆ ಕಾಡುತ್ತಿದೆ. ಇದೀಗ ಭಿಕ್ಷಾಟನೆ ಅಪರಾಧವಾಗಿದೆ.

ಆ ಕುರಿತಂತೆ ಆಯಾ ಅಲೆಮಾರಿ ಸಮುದಾಯಗಳು ತಮ್ಮ ತಮ್ಮ ಕುಲ ಪಂಚಾಯತಿಯ ಸಂದರ್ಭದಲ್ಲಿ ಚಿಂತನೆ ನಡೆಸಿವೆ. ಅವರ ಈ ರೀತಿಯ ಚಿಂತನೆಗಳ ಮೇಲೆ ಒಂದಿಲ್ಲ ಒಂದು ರೀತಿಯಿಂದ ಜಾಗತೀಕರಣದ ಪ್ರಭಾವವಾಗಿದೆ ಎಂದೆ ಹೇಳಬೇಕಾಗುತ್ತದೆ. ಅದರಂತೆ, ಅಲೆಮಾರಿಗಳು ಈ ಹಿಂದಿನಂತೆ ಆಯಾ ಗ್ರಾಮದ ಸ್ಮಶಾನ ಇಲ್ಲವೇ ಸಾರ್ವಜನಿಕ ಸ್ಥಳಗಳಲ್ಲಿ ವಾಸಿಸುವುದನ್ನು ಬಿಟ್ಟು ತಮ್ಮ ಮೂಲ ಊರುಗಳು ಇಲ್ಲವೇ ಇದ್ದ ಸ್ಥಳಗಳಲ್ಲಿಯೇ ಚಿಕ್ಕ ಚಿಕ್ಕ ಮನೆಗಳನ್ನು ಕಟ್ಟಿಕೊಂಡು ಬದುಕು ಸಾಗಿಸುವುದಕ್ಕೆ ಶತ ಪ್ರಯತ್ನ ಮಾಡುತ್ತಿರುವುದು ಬಹು ಮುಖ್ಯವಾಗಿದೆ. ಹಾಗೆಯೇ ಈ ಸಂದಿಗ್ಧ ಪರಿಸ್ಥಿತಿಯಲ್ಲಿ ಭಿಕ್ಷೆ ಬೇಡುವುದು ಸರಿಯಾದ ಮಾರ್ಗೋಪಾಯವೂ ಅಲ್ಲ, ಕಾಯಕವೂ ಅಲ್ಲವೆಂಬುದು ಅವರಿಗೆ ತಿಳಿಯುತ್ತಿದೆ.

ಅಲೆಮಾರಿಗಳು ಸಂಪೂರ್ಣವಾಗಿ ಜಾಗತೀಕರಣ ಬಂದ ಮೇಲೆಯೇ ಬದಲಾವಣೆ ಆಗಿದ್ದಾರೆಂದು ಹೇಳಿದರೆ ತಪ್ಪಾಗುತ್ತದೆ. ಅದಕ್ಕೂ ಹಿಂದೆಯೇ ಅಲೆಮಾರಿಗಳ ಜೀವನ ವಿಧಾನದಲ್ಲಿ ಸಾಕಷ್ಟು ಬದಲಾವಣೆಗಳಾಗುತ್ತ ಬಂದಿವೆ. ಪ್ರಾಚೀನ ಕಾಲದಲ್ಲಿ ಗವಿಗಳಲ್ಲಿ ವಾಸವಾಗಿದ್ದ ಅಲೆಮಾರಿಗಳು ಈಗ ಆ ಗವಿ ಇಲ್ಲವೇ ನಿರ್ಜನ ಪ್ರದೇಶವನ್ನು ತೊರೆದು ಊರು, ನಗರಗಳ ಭೂ ಪ್ರದೇಶದತ್ತ ಹೆಜ್ಜೆ ಹಾಕುತ್ತ ಬರುತ್ತಿರುವುದು ಅವರ ಚರಿತ್ರೆಯ ದಾಖಲೆಗೆ ಸಂಬಂಧಿಸಿದ ವಿಚಾರವೂ ಆಗಿದೆ.

ಹಳೆಯದಾದ ಮತ್ತು ಈಗ ವಾಸಿಸುವುದಕ್ಕೆ ಅನುಕೂಲವಲ್ಲದ ಹಾಗೂ ಪ್ರಾಗೈತಿಹಾಸಿಕ ಇಲಾಖೆಯವರ ಕಾನೂನುಗಳು ಎದುರಾಗಿರುವುದರಿಂದ ಅಲೆಮಾರಿಗಳು ಗವಿಯಿಂದ ಕಾಲ್ತೆರೆದರೆನಿಸುತ್ತದೆ. ಇದು ಕೂಡಾ ಅವರ ಪ್ರಂತಾಣಕ್ಕೆ ಕಾರಣವಾಗಿರಬಹುದು. ಜೊತೆಗೆ ಊರು, ನಗರಗಳಲ್ಲಿ ವಾಸಿಸುವ ಜನ ಅಲೆಮಾರಿಗಳು ಕೊಡ ಮಾಡುವ ಗಿಡ ಮೂಲಿಕೆ, ಔಷಧಿಗಳಿಗೆ ಕಾಯುವ ಪ್ರಸಂಗಗಳು ಹಿಂದೆ ಇದ್ದವು. ಆದರೆ, ಈಗ ಅಂತಹ ಪ್ರಸಂಗಗಳು ಇಲ್ಲದೇ ಇರುವುದರಿಂದ ಹೀಗಾಗುವುದು

ಸಹಜವಾಗಿದೆ. ಯಾವುದೇ ವಿಷಯವಿರಲಿ, ಅದರ ಅವಶ್ಯಕತೆ ಇದ್ದಾಗ ಮಾತ್ರ, ಅದಕ್ಕೆ ಬೆಲೆ ಬರುತ್ತದೆ. ಅದೇ ರೀತಿಯಾಗಿ ಜನ ಯಾವ ಸಮುದಾಯದ ಸಹಾಯವಿಲ್ಲದೇ ಅವರು ಕೂಡ ಮಾಡುವ ವಸ್ತುಗಳ ಅಗತ್ಯತೆ ಇನ್ನೊಬ್ಬರಿಗೆ ಪ್ರಮುಖವಾಗಿ ಕಾಣಿಸುವುದಿಲ್ಲವೋ, ಆವಾಗ ಎದುರು-ಬದುರಿನ ಜನ ಸಮುದಾಯ ಪರ್ಯಾಯ ವ್ಯವಸ್ಥೆಯನ್ನು ಮಾಡಿಕೊಳ್ಳಬೇಕಾಗುತ್ತದೆ. ಅದೇ ರೀತಿಯಾಗಿ ಇಡೀ ಜನ ಸಾಗರ ಜಾಗತೀಕರಣದ ಲಾಭವನ್ನು ತೆಗೆದುಕೊಳ್ಳುವಾಗ ಇಲ್ಲವೇ ಅದರ ಪ್ರಭಾವಕ್ಕೆ ಒಳಗಾದಾಗ ನಾವು ಅಲೆಮಾರಿಗಳು ಇದ್ದಲ್ಲಿಯೇ ಯಥಾಸ್ಥಿತಿಯಲ್ಲಿರಲಿ ಎಂದು ಹೇಳುವುದು ತಪ್ಪಾಗುತ್ತದೆ. ಈ ಹಿನ್ನೆಲೆಯಲ್ಲಿ ಅಲೆಮಾರಿಗಳು ಜಾಗತೀಕರಣಕ್ಕೆ ಮನಸ್ಸು ನೀಡುತ್ತಿರುವುದು ಶುಭ ಸೂಚನೆಯೇ ಆಗಿದೆ. ಇದು ಅವರ ಪ್ರಗತಿಯನ್ನು ಎತ್ತಿ ತೋರಿಸುತ್ತದೆ. ಅಲೆಮಾರಿಗಳು ಸಂಪೂರ್ಣವಾಗಿ ಬದಲಾವಣೆ ಆಗದಿದ್ದರೂ, ಆರ್ಥಿಕವಾಗಿ ಒಂದಿಷ್ಟು ಬದಲಾವಣೆಯಾಗುತ್ತಿದ್ದಾರೆಂಬ ಮಾತಿನಲ್ಲಿ ಸತ್ಯಾಂಶವಿದೆ.

ಮಲೆನಾಡಿನ ಹಚ್ಚ ಹಸಿರಿನ ಪರ್ವತ ಶ್ರೇಣಿಗಳ ಪರಿಸರದಲ್ಲಿ ಜೀವನ ಸಾಗಿಸುತ್ತ ಬಂದಿರುವ ಅನೇಕ ಅಲೆಮಾರಿಗಳು ಅಲ್ಲಿ ಜೀವನ ಸಾಗಿಸುತ್ತಿವೆ. ಆ ಭೌಗೋಳಿಕ ಪರಿಸರಕ್ಕೆ ಹೊಂದಿಕೊಂಡಂತಹ ತಮ್ಮ ಗುಡಿಸಲುಗಳನ್ನು ರಚಿಸಿಕೊಂಡು ಏಕಾಂತದಲ್ಲಿ ವಾಸವಾಗಿರುವ ಜನಾಂಗಗಳು ಇವಾಗಿವೆ. ಸುಂದರ ಪರಿಸರದ ಜೊತೆಗಿದ್ದರೂ, ಈ ಅಲೆಮಾರಿಗಳು ಅದರ ಒಡೆತನದ ಆಲೋಚನೆ ಮಾಡದಷ್ಟು ಮುಗ್ಧರು. ಬ್ರಿಟಿಷರು ಮತ್ತು ಭೂ ಮಾಲೀಕರು ಬಂದು ಕಾಫಿ ಬೆಳೆಯುವುದಕ್ಕೆಂದೋ ಭೂಮಿಯನ್ನು ತಮ್ಮ ಸ್ವಾಧೀನಕ್ಕೆ ತೆಗೆದುಕೊಂಡು ಬೆಳೆಯನ್ನು ಬೆಳೆಯುವಾಗ ಇವರಿಗೆ ಅರ್ಥವಾಗಲು ಪ್ರಾರಂಭಿಸಿತ್ತು. ಆಗ ಗುಡಿಸಲಿನಲ್ಲಿದ್ದ ಅಲೆಮಾರಿಗಳು ಈಗ ಎಸ್ಟೇಟ್ ಆವರಣದಲ್ಲಿ ಚಿಕ್ಕ ಚಿಕ್ಕ ಇಟ್ಟಂಗಿಗಳಿಂದ ಕಟ್ಟಿದ ಮನೆಗಳಲ್ಲಿ ವಾಸಿಸುತ್ತಿದ್ದಾರೆ. ಮನೆಯ ಗೋಡೆಯ ಅಲಂಕಾರಕ್ಕೆ ಹೆಚ್ಚು ಮಹತ್ವ ಕೊಡದಿದ್ದರೂ, ಬಹಳ ಶುಚಿಯಾಗಿ ತಮ್ಮ ಮನೆ ಮತ್ತು ಸುತ್ತಲಿನ ವಾತಾವರಣವನ್ನು ಸ್ವಚ್ಛ ಇರುವಂತೆ ಎಚ್ಚರ ವಹಿಸುತ್ತಾರೆ. ಒಂದು ಕಾಲಕ್ಕೆ ಸ್ವಚ್ಛಂದವಾಗಿದ್ದ ಈ ಅಲೆಮಾರಿಗಳು ವಸಾಹತುಶಾಹಿಗಳ ತೋಟಗಾರಿಕೆಯ ಹೆಸರಿನಲ್ಲಿ ನಡೆದ ಸಾಂಸ್ಕೃತಿಕ ಆಕ್ರಮಣಕಾರಿ ನೀತಿಗಳಿಂದಾಗಿ ತಮ್ಮ ಮೂಲವನ್ನು ತೊರೆಯುವಂತಾಯಿತು.

ಇತ್ತೀಚಿನ ಸಂದರ್ಭದಲ್ಲಿ ಅತ್ಯಂತ ಭಯಾನಕವಾಗಿ ಎಲ್ಲ ರಾಷ್ಟ್ರಗಳ ಜನ ಜೀವನದ ಮೇಲೆ ಪ್ರಭಾವ ಮತ್ತು ಪರಿಣಾಮವನ್ನು ಬೀರುತ್ತಿರುವ ಜಾಗತೀಕರಣದಿಂದಾಗಿ ಅಲೆಮಾರಿಗಳು ತಮ್ಮ ಸಂಚಾರಕ್ಕೆ ಸ್ಥಗಿತತೆಯನ್ನು ಕೊಡುವುದರ ಮೂಲಕ ಆ ಪ್ರಭಾವಕ್ಕೆ ಒಳಗಾಗುತ್ತಿದ್ದಾರೆಂದು ಹೇಳಬಹುದು. ಹೀಗಾಗಿ ಪ್ರತಿಯೊಬ್ಬ ವ್ಯಕ್ತಿಯ ಜೀವನ ವಿಧಾನದ ಮೇಲೆ ನಮಗೆ ಅರಿವಿಲ್ಲದಂತೆ ಯಾವುದ್ಯಾವುದೋ ನಿಮಿತ್ತವಾಗಿ ಈ ಜಾಗತೀಕರಣದ ಪ್ರಭಾವ ಬೀರುತ್ತಿದೆಯೆಂದೇ ಹೇಳಬಹುದು.

ಅಲೆಮಾರಿ, ಆದಿವಾಸಿ ಜನಾಂಗಗಳು ಕಾಡನ್ನು ಅತೀವ ಪ್ರೀತಿಯಿಂದ ಕಂಡವರು. ಮರ ಕಡಿದರೆ, ಮಗನಿಗೆ ಕಡಿದಂತೆ ಎಂಬುದನ್ನು ತಿಳಿದುಕೊಂಡವರು. ನಿಸರ್ಗದ ಮಡಲಿನಲ್ಲಿದ್ದುಕೊಂಡು ಆ ತಾಯಿಯನ್ನು ಅತ್ಯಂತ ಗೌರವದಿಂದ ಕಂಡವರು.

"ಒಂದು ಕಾಲಕ್ಕೆ ತಮ್ಮ ಕುಲ ಹಾಗೂ ಪಂಗಡಗಳಿಗೆ ಗಿಡಮರಗಳ ಹೆಸರನ್ನೇ ಇಟ್ಟುಕೊಂಡು ಅವುಗಳ ಮೂಲಕವೇ ತಮ್ಮ ಅಸ್ತಿತ್ವವನ್ನು ಗುರುತಿಸಿಕೊಂಡ ಹತ್ತಾರು ಅಲೆಮಾರಿಗಳು ಇಂದಿಗೂ ಆ ಸಂಪ್ರದಾಯವನ್ನು ಇಂದಿನ ದೇವರ ಕಾಡುಗಳಾಗಿ ಉಳಿದು ಬಂದಿರುವುದನ್ನು ನಾವು ನೋಡುತ್ತಿದ್ದೇವೆ. ಮೀಸಲಿಲ್ಲದ ಕಾಡಿನಲ್ಲಿ ಒಂದು ಮರ ಕಡಿಯಬೇಕಾದರೆ, ಪ್ರಸಂಗ ಬಂದರೆ ಅದನ್ನು ಪೂಜಿಸಿ ಅತ್ಯಂತ ಗೌರವದಿಂದ ಮರಗಳನ್ನು ಕಡಿಯುತ್ತ ಬುಡಕಟ್ಟುಗಳ ಮೌಲ್ಯ ಆದರ್ಶಪ್ರಾಯ. ಹೀಗೆ ಕಾಡಿನ ಆಶ್ರಯದಲ್ಲಿ ಅವರ ಮಗನಂತೆ ಬೆಳೆದ ಮನುಷ್ಯ ಅದು ನೀಡುವ ಜೇನು, ಗೆಡ್ಡೆ, ಗೆಣಸು, ಹಣ್ಣು ಹಂಪಲು ಹಾಗೂ ಅದರೊಳಗಿನ ಪ್ರಾಣಿ, ಪಕ್ಷಿಗಳನ್ನು ಅಗತ್ಯವಿದ್ದಷ್ಟು ಸೇವಿಸಿ ಬಿದಿರು, ಬೆತ್ತ ಹಾಗೂ ಹೊಂಬು ಬದ್ದಗಳಲ್ಲಿ ತಯಾರಿಸಿದ ವಸ್ತುಗಳನ್ನು ಕಾಡಿನಾಚೆಯ ಸಂತೆಗಳಲ್ಲಿ ಮಾರಿ, ತನಗೆ ಬೇಕಾದ ಅಗತ್ಯ ವಸ್ತುಗಳನ್ನು ಕೊಳ್ಳುತ್ತಿದ್ದರು". (ಗಿ. ಸಿ. ೨೨೬)

ಈ ರೀತಿಯಿಂದ ಬದುಕು ಸಾಗಿಸುತ್ತ ಬಂದಿರುವ ಅಲೆಮಾರಿಗಳು ಈ ಜಾಗತೀಕರಣದಿಂದ ತಾವು ತೃತೀಯ ಜಗತ್ತಿನ ಮಾನವ ಪ್ರಪಂಚದ ಅಲ್ಪ ಸ್ವಲ್ಪ ಪರಿಚಯ ಹಾಗೂ ಪರಿಣಾಮಗಳಿಂದ ಕಾಡಿನ ಜೀವನಕ್ಕೆ ಅಂತ್ಯವನ್ನು ಹಾಡಿದರೆಂಬುದು ತಿಳಿದು ಬರುತ್ತದೆ.

ಅಲೆದಾಟದ ಜೀವನವನ್ನು ತಮ್ಮ ಉಸಿರನ್ನಾಗಿಸಿಕೊಂಡಿದ್ದ ಅಲೆಮಾರಿಗಳು ಪ್ರದೇಶದಿಂದ ಪ್ರದೇಶಕ್ಕೆ ಪ್ರಯಾಣ ವಲಸೆ ಹೋಗುವುದರಲ್ಲಿಯೇ ತಮ್ಮ ಇಡೀ ಜೀವನವನ್ನು ಕಳೆದರು. ಮಕ್ಕಳು ಮರಿಗಳು ಅಲ್ಲದೇ ಅವರ ಭವಿಷ್ಯವನ್ನು ಕುರಿತು ಕಿಂಚಿತ್ತು ವಿವೇಚನೆ ಮಾಡುವುದಕ್ಕೆ ಅವರಿಗೆ ಸಮಯವೇ ದೊರೆಯಲಿಲ್ಲ ಇಲ್ಲವೇ ಆ ಕುರಿತು ಚಿಂತಿಸಲಿಲ್ಲವೆನಿಸುತ್ತದೆ. ಹೀಗಾಗಿ ತಂದೆಯಿಂದ ಬಂದ ತಿರುಗಾಟದ ಜೀವನ ಮಗ, ಮೊಮ್ಮಗನವರೆಗೂ ಮುಂದುವರಿಯುತ್ತ ಬಂದಿತ್ತು. ವಸಾಹತುಶಾಹಿ ಮತ್ತು ಔದ್ಯೋಗೀಕರಣದ ಪ್ರಭಾವ ಮತ್ತು ಪ್ರೇರಣೆಯಿಂದಾಗಿ ತೃತಿಯ ಜಗತ್ತಿನ ಒಂದಿಷ್ಟು ಪರಿಚಯವಾಗಲೂ ಪ್ರಾರಂಭಿಸಿತು. ಜೊತೆಗೆ ಸಂಚಾರದ ಸಂದರ್ಭದಲ್ಲಿ ಹೊಟ್ಟೆ-ಬಟ್ಟೆಗೆ ಸಾಕಾಗುವಷ್ಟು ಅನ್ನದ ಕೊರತೆ, ಜನರು ಕಾಣುವ ಮನೋಭಾವಗಳಲ್ಲಿ ತುಸು ಬದಲಾವಣೆ ಹಾಗೂ ತರಾತುರಿಯ ಬದುಕು ಅಲೆಮಾರಿಗಳ ಮೇಲೆ ಒಂದು ರೀತಿಯ ಪ್ರಭಾವವಾಯಿತು. ಹೀಗಾಗಿ ಅವರು ತದನಂತರದ ಸಂದರ್ಭಗಳಲ್ಲಿ ತಾವು ತಮ್ಮ ಭವಿಷ್ಯವನ್ನು ಕುರಿತು ವಿವೇಚನೆ ಮಾಡಲು ತೊಡಗಿದರು. ಈ ಚಿಂತನೆಯ ಪೂರ್ವದಲ್ಲಿ

ಅವರಿಗೆ ಸಂಚಾರದಿಂದ ಬರದ ದವಸ ಧಾನ್ಯಗಳನ್ನು ಸಂಗ್ರಹಿಸಿ ಮಾರಾಟ ಮಾಡಿ ಹಣ ಸಂಪಾದಿಸಿ ಚರ ಆಸ್ತಿಯನ್ನು ಗಳಿಸಬೇಕೆಂಬ ಕನಸನ್ನು ಇಟ್ಟುಕೊಂಡವರಲ್ಲ. ಆಯಾ ದಿವಸದ ಭಿಕ್ಷಾಟನೆ ಮತ್ತೆ ಹೊಟ್ಟೆ ಹೊರೆದುಕೊಳ್ಳುವಷ್ಟು ಆಹಾರೆ ದೊರೆತರೆ ಸಾಕಪ್ಪ! ಎಂಬ ಮನೋಭಾವನೆಯನ್ನು ಹೊಂದಿದವರಾಗಿದ್ದರು. ಮಲೆನಾಡಿನ ಕೆಲವು ಆಯಕಟ್ಟಿನ ಜಾಗಗಳಿಗೆ ಭೂ ಮಾಲೀಕರು ಬರ ತೊಡಗಿದ್ದು ಅಥವಾ ಯುರೋಪಿಯನ್ನರ ಬೆನ್ನ ಹಿಂದೆ ಬಂದು, ಭೂ ಮಾಲೀಕರು ಆದದ್ದೂ ಇಲ್ಲಿ ಮುಖ್ಯ. ಈ ತೆರನಾದಾಗ ವ್ಯವಹಾರಿಗಳು ಮಲೆನಾಡಿಗೆ ಕಾಲಿಟ್ಟರೋ ಆಗಿನಿಂದಲೇ ಗಿರಿಜನರ ಸ್ವಚ್ಛಂದದ ಜೀವನ ಅಸ್ಥಿರವಾಗ ತೊಡಗಿದ್ದು ನಮ್ಮ ಆಧುನಿಕ ವಸಾಹತುಶಾಹಿ ಎಂದು ಮನು ಈಗಾಗಲೇ ಹೇಳಿದ. ನಮ್ಮ ಅರಣ್ಯ ಇಲಾಖೆಯ ಈಗಿನ ಚಟುವಟಿಕೆಗಳಿಗೆ ಪರಿಸರದಲ್ಲಿ ನೀಡಿದ ಈ ಯುರೋಪಿಯನ್ ವಸಾಹತುಶಾಹಿಯ ಪ್ರಭಾವವನ್ನು ನಾವು ಅರ್ಥ ಮಾಡಿಕೊಳ್ಳದೇ ಇವತ್ತಿನ ಗಿರಿ ಜನರ ಬದುಕನ್ನು ಅರ್ಥ ಮಾಡಿಕೊಳ್ಳಲು ಸಾಧ್ಯವಿಲ್ಲ" (ಗಿ. ಸಿ. ೨೨೯).

ಅಲೆಮಾರಿಗಳಲ್ಲಿ ಕೆಲವರು ಗವಿಗಳಲ್ಲಿಯೂ, ಪರ್ವತ ಶ್ರೇಣಿಗಳಲ್ಲಿಯೂ, ಕೆಲವರು ಹುಲ್ಲುಗಾವಲಿನಲ್ಲಿಯೂ, ಕೆಲವರು ಊರು ಸಮೀಪದಲ್ಲಿಯೂ, ಕೆಲವರು ಸ್ಮಶಾನದಲ್ಲಿಯೂ ಜೀವಿಸುವುದನ್ನು ಕಾಣುತ್ತೇವೆ. ಇದರಲ್ಲಿ ಕೆಲವರು ವೃತ್ತಿಯನ್ನಾಧರಿಸಿದ ಮತ್ತು ವೃತ್ತಿ ರಹಿತ ಅಲೆಮಾರಿಗಳಿರುವುದು ಕಂಡು ಬರುತ್ತದೆ. ನಿಸರ್ಗದ ವಿಕೋಪದಿಂದಲೋ ಅಥವಾ ಅನಾವೃಷ್ಟಿಯ ಕಾರಣದಿಂದಲೋ ದೇಶದಲ್ಲಿರುವ ಅನೇಕ ಅಲೆಮಾರಿಗಳು ಜಾಗತೀಕರಣದ ಪ್ರಭಾವದಿಂದಲೋ ತಮ್ಮ ಮೂಲವನ್ನು ಬಿಟ್ಟು ಬೇರೆ ಬೇರೆ ಕಡೆಗೆ ಸಂಚರಿಸುತ್ತಾ ಬಂದಿರುವುದು ತಿಳಿಯುತ್ತದೆ. ಒಂದು ಕಾಲಕ್ಕೆ ಪೂರ್ಣ ಪ್ರಮಾಣದ ಜೀವನ ಶೈಲಿಯನ್ನು ರೂಡಿಸಿಕೊಂಡಿರುವ ಲಂಬಾಣಿಗಳು ಪರಿಶ್ರಮ ರೂಡಿಸಿಕೊಂಡವರಾಗಿದ್ದಾರೆ. ಇಂತಹ ಅನೇಕ ಅಲೆಮಾರಿಗಳು ಕಾಡಿನ ಕೂಸುಗಳಾಗಿ, ಸ್ವಚ್ಛಂದವಾಗಿ ಜೀವನ ಮಾಡುತ್ತ ಬಂದಿದ್ದರು. ಆದರೆ, ಈಗ ತುಂಬ ಸ್ಪರ್ಧಾತ್ಮಕ ಮತ್ತು ಸಂಘರ್ಷದ ಹಾದಿಯಲ್ಲಿದ್ದಾರೆ. ಕಾಡು ಹೋಗಿ, ನಾಡು ಮಾಡುವ ಸಂದರ್ಭವಾಗಿರುವುದರಿಂದ ಅದೆಷ್ಟೋ ಅಲೆಮಾರಿಗಳು ಕಾಡು ತೊರೆದು ನಾಡಿನ ಸಮೀಪ ಬರುತ್ತಿದ್ದಾರೆ. ಇದೆಲ್ಲ ಅತಿ ಸ್ಪರ್ಧೆಯಿಂದ ಮುನ್ನುಗ್ಗುತ್ತಿರುವ ಜಾಗತೀಕರಣದ ಪ್ರಭಾವವೆಂದೇ ಹೇಳಬೇಕಾಗುತ್ತದೆ.

ಬಹಳ ಹಿಂದಿನಿಂದಲೂ ಕಾಡು ಅರಣ್ಯಗಳಲ್ಲಿ ಜೀವನ ಸಾಗಿಸುತ್ತ ಬಂದಿರುವ ಗೊಲ್ಲರು, ಕಾಡಗೊಲ್ಲರು, ಬೇಡರು, ಮ್ಯಾಸಬೇಡರು, ಕಾಡುಕುರುಬರು, ಗೊಂಡರು, ಕೊರಗರು, ಜೇನು ಕುರುಬರು ಇವರೆಲ್ಲ ಜಾಗತೀಕರಣದ ಪ್ರಭಾವದಿಂದಾಗಿ, ಹೊಸ ಸಮಸ್ಯೆ ಮತ್ತು ಸವಾಲುಗಳನ್ನು ಎದುರಿಸುವ ನಿಟ್ಟಿನಲ್ಲಿ ಆಲೋಚನೆಯನ್ನು ಮಾಡುತ್ತ

ಕಾಡು ತೊರೆದು ನಾಡು ಸಮೀಪ ಬಂದರೆಂದು ಹೇಳಬಹುದು. ನಾಡಿನ ಹತ್ತಿರವಾದ ಅದೆಷ್ಟೋ ಅಲೆಮಾರಿಗಳು ಅವರ ಹಿಂದಿನ ನಿಯಮದಂತೆ ಒಂದಿಷ್ಟು ಗುಡಿಸಲುಗಳನ್ನು ಹಾಕಿಕೊಂಡು ಜೀವನ ಮಾಡದೇ ಬೇರೆ ಬೇರೆ ಮನೆಗಳಲ್ಲಿ ಬಾಡಿಗೆ ಹಿಡಿದೋ ಇಲ್ಲವೇ ಒಂಟಿಯಾಗಿ ಜೀವನ ಸಾಗಿಸುವುದನ್ನು ರೂಢಿಸಿಕೊಳ್ಳುತ್ತಿದ್ದಾರೆ. ಇವರಂತೆ ಸುಡುಗಾಡು ಸಿದ್ಧರು, ಪಾರ್ದಿಗಳು ಕೂಡಾ ಗ್ರಾಮೀಣ ಪ್ರದೇಶದ ಹತ್ತಿರ ಬಂದು ತಮ್ಮ ಓಣಿಗಳನ್ನು ನಿರ್ಮಿಸಿಕೊಂಡು ಜೀವನ ಸಾಗಿಸುತ್ತಿರುವುದು ಒಳ್ಳೆಯ ಬೆಳವಣಿಗೆಯೆಂದೇ ಹೇಳಬೇಕು.

ಜಾಗತೀಕರಣದ ಪ್ರಭಾವದಿಂದ ನಮ್ಮ ಸಂಸ್ಕೃತಿಯ ಮೇಲೆ ಒಳ್ಳೆಯ ಮತ್ತು ಕೆಟ್ಟ ಪ್ರಭಾವ ಬೀರುತ್ತಿರುವಾಗ ಅದರ ಗಾಳಿ ಅಲೆಮಾರಿಗಳ ಮೇಲೂ ಆಗುತ್ತಿರುವುದು ಸ್ವಾಭಾವಿಕವಾಗಿದೆ. ಈ ಅಂಶವನ್ನು ಗಮನದಲ್ಲಿರಿಸಿಕೊಂಡು ನಾವೆಲ್ಲ ಪ್ರಗತಿಯತ್ತ ಹೆಜ್ಜೆ ಹಾಕಬೇಕಿದೆ. ಜಾಗತೀಕರಣದ ವಿರುದ್ಧ ಹೋರಾಟ ಮಾಡಲು ಮತ್ತು ನಮ್ಮತನವನ್ನು ಉಳಿಸಿಕೊಂಡು ಒಬ್ಬರಿಗೊಬ್ಬರು ಸಹಕರಿಸುವುದು ಈಗ ಅಗತ್ಯವಾಗಿದೆ. ಜೊತೆಗೆ ನಮ್ಮಲ್ಲಿರುವ ಸಂಪನ್ಮೂಲಗಳ ಸದ್ಬಳಕೆ ಆಗುವುದರ ಜೊತೆಗೆ ಅವುಗಳ ಫಲ ಪ್ರತಿಯೊಬ್ಬರಿಗೂ ದೊರೆಯಬೇಕಾಗಿದೆ. ಅಂದಾಗ ಮಾತ್ರ ಅಲೆಮಾರಿಗಳು, ಜಾತಿಗಳು, ಉಪಜಾತಿಗಳು, ಜನಾಂಗಗಳು ಸೌಹಾರ್ದ ಮತ್ತು ಸಹಬಾಳ್ವೆಯಿಂದ ಬದುಕುವುದಕ್ಕೆ ಸಾಧ್ಯ. ಇಲ್ಲದಿದ್ದರೆ, ಅಷ್ಟು ತೀವ್ರವಾಗಿಂಯಾದರೂ ಅಲ್ಲದಿದ್ದರೂ ಸ್ವಲ್ಪ ನಿಧಾನವಾಗಿಯಾದರೂ ಆರ್ಥಿಕ ಸಬಲೀಕರಣದ ವ್ಯಕ್ತಿಗಳಿಗೆ ಜಾಗತೀಕರಣ ತನ್ನೊಳಗೆ ಸೆಳೆದುಕೊಳ್ಳುವುದರಲ್ಲಿ ಯಾವುದೇ ಅನುಮಾನಗಳಿಲ್ಲವೆನಿಸುತ್ತದೆ. ಜಾಗತೀಕರಣವೆನ್ನುವುದು ಭಯಾನಕ 'ಏಡ್ಸ್' ರೋಗ ಅಲ್ಲ. ಅದೊಂದು ರೀತಿ ವ್ಯಾಪಾರೀಕರಣದ ರೋಗ. ಅದಕ್ಕೆ ನಮ್ಮಲ್ಲಿಯೂ ವಾಸಿಯಾಗುವ ಮಾತ್ರೆಗಳು ಇದ್ದರೆ, ತೆಗೆದುಕೊಳ್ಳುವ ಇಲ್ಲವೇ ಹೊಸ ಮಾತ್ರೆಗಳು ತೆಗೆದುಕೊಂಡು ಆರೋಗ್ಯವಂತರಾಗುವುದರಲ್ಲಿ ತಪ್ಪೇನಿಲ್ಲ.

❖

ಆಕರಗಳು :

೧. ಪ್ರೊ. ಎಚ್. ಜೆ. ಲಕ್ಕಪ್ಪ ಗೌಡ (ಪ್ರ.ಸಂ) ಕರ್ನಾಟಕ ಬುಡಕಟ್ಟುಗಳು ಕ.ಜಾ. ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು. ೧೯೯೮.
೨. ಗಂಗಾಧರ ದೈವಜ್ಞ (ಸಂ): ಬುಡಕಟ್ಟು ಸಮಾಜ : ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ೨೦೦೦.
೩. ಟಿ. ಎಂ. ಭಾಸ್ಕರ್ : ಸುಡುಗಾಡು ಸಿದ್ಧರು ಒಂದು ಸಾಂಸ್ಕೃತಿಕ ಅಧ್ಯಯನ : ಮರುಗ ಪ್ರಕಾಶನ, ಕಲಬುರ್ಗಿ ೨೦೦೦.
೪. ಎ. ಎಸ್. ಪ್ರಭಾಕರ (ಸಂ) ಬುಡಕಟ್ಟು ಬದುಕಿನ ಸ್ಥಿತ್ಯಂತರಗಳು : ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ ೨೦೦೨.
೫. ಬಿ. ಎಸ್. ತಲ್ವಾಡಿ : ಜಾನಪದ ಸಮಾಚಾರ : ಕ. ಮತ್ತು ಜಾ. ಅಕಾಡೆಮಿ, ಬೆಂಗಳೂರು, ೨೦೦೩.

ಅಧ್ಯಕ್ಷೀಯ ಭಾಷಣ ಹಾಗೂ ಪ್ರಬಂಧ ಮಂಡನೆ :

# ಬುಡಕಟ್ಟು ಅನನ್ಯತೆ - ಜಾಗತೀಕರಣ

ಡಾ॥ ಡಿ. ಬಿ. ನಾಯಕ

◆

ಭಾರತವು ವಿವಿಧ ಸಂಸ್ಕೃತಿಗಳಿಂದ ಕೂಡಿದ ದೇಶ. ವಿಭಿನ್ನ ರೂಪ ಹಾಗೂ ದೈಹಿಕ ರಚನೆಗಳಿಂದ ಕೂಡಿರುವ ಅನೇಕ ಬಗೆಯ ಜೀವನ ಕ್ರಮಗಳನ್ನು ಹೊಂದಿರುವ ಜನಸಮುದಾಯಗಳು ಇಲ್ಲಿವೆ. ಜೀವನಕ್ರಮ, ಭಾಷೆ ಮುಂತಾದವುಗಳಲ್ಲಿ ವೈವಿಧ್ಯತೆ ಇಲ್ಲಿ ಕಂಡು ಬರುತ್ತದೆ. ಐತಿಹಾಸಿಕತೆ ಹಾಗೂ ಪರಿಸರಗಳ ಪರಿಣಾಮದಿಂದಾಗಿ ಅನೇಕ ಸಮುದಾಯಗಳ ಜೀವನ ಕ್ರಮ ಅತ್ಯಂತ ಹಿಂದುಳಿದಿದ್ದು, ಅರಣ್ಯ, ಗುಡ್ಡಗಾಡು ಪ್ರದೇಶಗಳಲ್ಲಿ ಅತಿಕೆಳಸ್ತರದ ಜೀವನ ನಡೆಸುತ್ತಿರುವ ಸಮುದಾಯಗಳಲ್ಲಿ ಬುಡಕಟ್ಟು (Tribal culture) ಜನಾಂಗವು ಒಂದಾಗಿದೆ.

ತಮ್ಮದೇ ಆದ ಸಾಮಾಜಿಕ, ಸಾಂಸ್ಕೃತಿಕ ಸಂಬಂಧಗಳನ್ನು ಅಳವಡಿಸಿಕೊಂಡು ವ್ಯವಸ್ಥಿತವಾಗಿ ರಚಿತವಾಗಿರುವ ಸಮಾಜವೇ ಬುಡಕಟ್ಟು. ಚಿಕ್ಕ ಚಿಕ್ಕ ಸಾಮಾಜಿಕ ಗುಂಪುಗಳಲ್ಲಿ ಹಂಚಿಕೊಂಡಿದ್ದು, ವಿಶೇಷ ಲಕ್ಷಣಗಳನ್ನು ತನ್ನದಾಗಿಸಿಕೊಂಡಿರುವ ಈ ಗುಂಪುಗಳು ಭಾಷೆ, ವೇಷ, ಭೂಷಣ, ಆರ್ಥಿಕ ಮೂಲಾದಿ ವಿಷಯಗಳಲ್ಲಿ ವೈಶಿಷ್ಟ್ಯತೆಯನ್ನು ಹೊಂದಿರುತ್ತದೆ. ಸಾಮಾನ್ಯ ಪ್ರದೇಶ (Common Territory) ಒಂದೇ ಭಾಷೆ (Common Language) ಏಕ ರೂಪತೆಯ ಸಂಸ್ಕೃತಿ (Homogineous Culture) ಒಂದೇ ರೀತಿಯ ರಾಜಕೀಯ ವ್ಯವಸ್ಥೆ (Common Political Organisation) ಮತ್ತು ಸ್ವತಂತ್ರ ಮತ್ತು ಸ್ವಯಂಬದ್ಧ ಜೀವನ (Simple and Self Sufficient life) ಇವು ಈ ಬುಡಕಟ್ಟುಗಳಲ್ಲಿ ಕಂಡು ಬರುವ ವಿಶಿಷ್ಟ ಲಕ್ಷಣಗಳಾಗಿವೆ.

ಭಾರತದಲ್ಲಿ ಸುಮಾರು ೪೫೦ ಕ್ಕಿಂತಲೂ ಹೆಚ್ಚಿನ ಸಂಖ್ಯೆಯ ಆದಿವಾಸಿ ಮತ್ತು ಆದಿವಾಸಿ ಬುಡಕಟ್ಟು ಪಂಗಡಗಳಿವೆ. ಅಂತೆಯೇ ವೆರಿಯರ್ ಎಲ್ವಿನ್ ಎಂಬ ವಿದ್ವಾಂಸ ಭಾರತವನ್ನು ಬುಡಕಟ್ಟುಗಳ ತೊಟ್ಟಿಲು ಎಂದು ಕರೆದಿದ್ದಾರೆ. ಈ ಬುಡಕಟ್ಟುಗಳು ತಮ್ಮ ಸ್ವತಂತ್ರವಾದ ಸಾಂಸ್ಕೃತಿಕ, ಭಾಷಿಕ ಹಾಗೂ ಆರ್ಥಿಕ ಮೂಲಗಳ ಅನನ್ಯತೆಯನ್ನು

ನಿರಂತರವಾಗಿ ಕಾಯ್ದುಕೊಳ್ಳುತ್ತ ಕಾಡು, ಮೇಡು, ಬೆಟ್ಟಗುಡ್ಡ ಪ್ರದೇಶಗಳಲ್ಲಿ ವಾಸಿಸುತ್ತಿದ್ದಾರೆ. ಕಾಯ್ದುಕೊಳ್ಳುತ್ತ ಕಾಡು, ಮೇಡು, ಬೆಟ್ಟ ಪ್ರದೇಶಗಳಲ್ಲಿ ವಾಸಿಸುತ್ತಿದ್ದಾರೆ. ೧೯೯೧ರ ಜನಗಣತಿಯ ಪ್ರಕಾರ ಭಾರತ ದೇಶದ ಜನಸಂಖ್ಯೆ ಸುಮಾರು ಪ್ರತಿಶತ ಎಂಟರಷ್ಟು ಜನಸಂಖ್ಯೆಯು ಈ ಬುಡಕಟ್ಟುಗಳದಾಗಿದೆ. ಭಾರತದ ಬಹುಪಾಲು ಬುಡಕಟ್ಟುಗಳು ಮಧ್ಯಪ್ರದೇಶ, ಒರಿಸ್ಸಾ, ಬಿಹಾರ, ಮಹಾರಾಷ್ಟ ಹಾಗೂ ಈಶಾನ್ಯ ರಾಜ್ಯಗಳಲ್ಲಿ ವಾಸವಾಗಿರುವುದನ್ನು ಕಾಣಬಹುದು.

ಯಾವುದೇ ಒಂದು ಸಂಸ್ಕೃತಿಯು ತನ್ನದೇ ಆದ ಅಸ್ತಿತ್ವವನ್ನು ಹೊಂದಿದ್ದು ಅದು ಇತರ ಸಂಸ್ಕೃತಿಗಳಿಗಿಂತ ಪ್ರತ್ಯೇಕವಾಗಿ ತನ್ನದೇ ಆದ ವಿಶಿಷ್ಟಾಂಶಗಳನ್ನು ಪ್ರಕಟಪಡಿಸುತ್ತಿದ್ದರೆ ಅಂತಹ ಅಂಶಗಳನ್ನು ಆ ಸಂಸ್ಕೃತಿಯು 'ಅನನ್ಯತೆ' ಎಂದು ಕರೆಯಿಸಿಕೊಳ್ಳುತ್ತವೆ. ಒಂದು ಜನಾಂಗ ತಾನು ತನ್ನನ್ನು ಗುರುತಿಸಿಕೊಳ್ಳುವ, ತನ್ನ ಸ್ವಂತಿಕೆಯನ್ನು ಪ್ರದರ್ಶಿಸುವ ಆ ಮೂಲಕ ತನ್ನ ಅಸ್ತಿತ್ವವನ್ನು ಸ್ಥಾಪಿಸಿಕೊಳ್ಳುವ ಪ್ರಕ್ರಿಯೆಯು ಸಾಂಸ್ಕೃತಿಕ ಅನನ್ಯತೆಯೆನಿಸಿಕೊಳ್ಳುತ್ತದೆ. ಈ ಅನನ್ಯ ಅಂಶಗಳು ಒಂದು ಗೊತ್ತಾದ ಸಮೂಹಕ್ಕೆ ಮಾತ್ರ ವಿಶಿಷ್ಟವಾಗಿರುವುದು ಕಂಡು ಬರುತ್ತದೆ. ಅಂತೆಯೇ ಪ್ರೊ. ಲಾರಿ ಹಾಂಕೊ ಎಂಬ ವಿದ್ವಾಂಸರು "The Systamic character of tradition prevails, but it is not just general but specific and concrete. From this point of view, identity acts as an ordering principle of the second degree, part of the collective tradition is singled out and made to represent the group in Cultural Communication. These traditions may be refer to language geographical location, music, dance, costume, architecture, history, myth,ritual etc. There may be emblems such as Hags, Colours names. The selection of items may look peculier, but it is not to be judged by external form or by content only; because each thing and behaviour stands for more than it is itself. It has a symbolic meaning. The identity group is united by meaning and emotion, which peravade the symbols selected the represent its sense of cohesion and togetherness" (1988 : 11) ಎಂದು ಹೇಳಿದ್ದಾರೆ. ಅವರ ಈ ಮಾತುಗಳಲ್ಲಿ ಸಂಸ್ಕೃತಿಯ ಅನನ್ಯತೆಯ ಸ್ವರೂಪ ಮತ್ತು ಲಕ್ಷಣಗಳನ್ನು ಸ್ಪಷ್ಟಪಡಿಸುತ್ತವೆ.

ಇದೇ ರೀತಿಯಲ್ಲಿ ಉಲ್ಲಾಬ್ರೂಕ್ ಎಂಬ ವಿದ್ವಾಂಸರು ಒಂದು ಗೊತ್ತಾದ ಸಂಸ್ಕೃತಿಯು ಅನನ್ಯವಾಗಿರಬೇಕಾದರೆ ಅದಕ್ಕೆ ಮೂರು ಗುಣಗಳಿರಬೇಕೆನ್ನುತ್ತಾರೆ. ಅವು ಯಾವವು ಎಂದರೆ,

೧. ಸಾಮ್ಯತೆ (Similarity) : ಆ ಸಂಸ್ಕೃತಿಯಲ್ಲಿ ಸಮಾನ ಎನ್ನಬಹುದಾದ ಕೆಲವು ವಸ್ತು, ವ್ಯಕ್ತಿ ಅಥವಾ ಪರಿಕಲ್ಪನೆಗಳು ಇರಬೇಕಾಗುತ್ತದೆ.

೨. ನಿರಂತರತೆ (Continuity) : ಬೇರೆ ಬೇರೆ ಕಾಲ ಮತ್ತು ಸಂದರ್ಭಗಳಲ್ಲಿ ಪ್ರಭಾವಕ್ಕೆ ಒಳಗಾಗಿಯೂ ನಿರಂತರವಾಗಿ ತನ್ನ ಸಾಂಸ್ಕೃತಿಕ ಅನನ್ಯತೆಯ ಅಂಶಗಳನ್ನು ಉಳಿಸಿಕೊಂಡು ಬಂದಿರುವುದು.

೩. ನ್ಯಾಯಸಮ್ಮತ ಬಗೆ (Legitimising Aspect) : ವ್ಯಕ್ತಿಯ ಅಥವಾ ಸಮುದಾಯದ ನಡವಳಿಯನ್ನು ನ್ಯಾಯ ಸಮ್ಮತಗೊಳಿಸಿಕೊಳ್ಳುವ ವಿಧಾನ ಇರುವಿಕೆ.

ಈ ವಿದ್ವಾಂಸರ ಅಭಿಪ್ರಾಯಗಳನ್ನು ನೋಡಿದಾಗ ಸಂಸ್ಕೃತಿಯಲ್ಲಿರುವ ಉನ್ನತ ಮೌಲ್ಯ ಹಾಗೂ ಧೋರಣೆಗಳನ್ನು ಪ್ರಚುರಪಡಿಸುವುದೇ ಅನನ್ಯತೆಯ ಉದ್ದೇಶವಾಗಿದೆ. ಸಂಸ್ಕೃತಿಯು ವ್ಯಕ್ತವಾಗುವುದು ವಸ್ತುಗಳಲ್ಲಲ್ಲ; ಅದು ಜನ ವಸ್ತುಗಳನ್ನು ನೋಡುವ ರೀತಿ, ಬಳಸುವ ಕ್ರಮ ಮತ್ತು ಅದನ್ನು ಕುರಿತು ಆಲೋಚಿಸುವ ಬಗೆಯಲ್ಲಿದೆ. ಸಂಸ್ಕೃತಿಯೆಂಬುದು ಭೌತಿಕ ವಸ್ತುಗಳಲಲ್ಲ. ಅದು ಮಾನವನ ನಡತೆ, ನಿಯಮಗಳಲ್ಲಿದೆ. ಮಾನವನ ರೀತಿ-ನೀತಿಗಳನ್ನು ಗೌರವಿಸುವ, ಉತ್ತಮ ನಿರ್ಣಯ ಕೈಕೊಳ್ಳುವಂತೆ ಮಾರ್ಗದರ್ಶನ ನೀಡುವ ಸಾಧನವಾಗಿ ಇಲ್ಲಿ ನೋಡಿದಂತಿದೆ. ಒಂದೊಂದು ಜಾತಿ, ಒಂದು ಭಾಷೆಯನ್ನಾಡುವ ಜನ ವರ್ಗ, ಒಂದು ಪ್ರದೇಶದಲ್ಲಿ ವಾಸಿಸುವ ಜನರ ಗುಂಪು, ಒಂದೇ ಬಗೆಯ ಉದ್ಯೋಗವನ್ನು ಮಾಡುವ ಜನರ ಗುಂಪು ಇವರಿಗೆಲ್ಲ ಸಾಂಸ್ಕೃತಿಕ ಅನನ್ಯತೆಯಿದೆಯೆನ್ನಲಾಗಿದೆ. ಬುಡಕಟ್ಟು ಸಮುದಾಯಗಳಲ್ಲಿ ಮತ್ತು ಜನಪದ ಸಮಾಜಗಳಲ್ಲಿಯೂ ನಾವು ಇದನ್ನು ಗುರುತಿಸಬಹುದು.

ಪುರಾತನ ಕಾಲದಿಂದಲೂ ಭಾರತದ ಶ್ರೇಣೀಕೃತ ಸಮಾಜದಲ್ಲಿ ಜಾತಿ ವ್ಯವಸ್ಥೆಗೆ ಸೇರದೆ ಪ್ರತ್ಯೇಕವಾಗಿ ಗುಡ್ಡುಗಾಡು, ಕೊಳ್ಳ-ಕಣಿವೆಗಳಲ್ಲಿ ಉಳಿದಿರುವ ಬುಡಕಟ್ಟುಗಳು ತಮ್ಮದೇ ಆದ ಸಂಸ್ಕೃತಿಯನ್ನು ಹೊಂದಿವೆ; ತಮ್ಮ ಸಂಸ್ಕೃತಿಯ ಘಟಕಗಳಾದ ನಂಬಿಕೆ, ಸಂಪ್ರದಾಯ, ಸಾಹಿತ್ಯ, ಸಂಗೀತ, ಕಲೆ, ನೃತ್ಯ, ಕರಕುಶಲಕಲೆ ಮುಂತಾದ ಹಲವಾರು ಅಂಶಗಳಲ್ಲಿ ವೈಶಿಷ್ಟತೆ-ಅನನ್ಯತೆಯನ್ನು ಪಡೆದಿವೆ. ನಾಗರಿಕ ಸಂಸ್ಕೃತಿ, ಆಧುನಿಕತೆ ಹಾಗೂ ವಸಾಹತುಶಾಹಿಗಳ ದಟ್ಟವಾದ ಕರಿನೆರಳು ಈ ಬುಡಕಟ್ಟು ಸಂಸ್ಕೃತಿಗೆ ಮುಳುವಾಗುತ್ತ ಬಂದಿದೆ. ವಸಾಹತುಶಾಹಿಯ ಸಂದರ್ಭದಲ್ಲಿ ಅವರ ಜೀವನ ಸ್ಥಿತಿ ತುಂಬಾ ಆತಂಕಕ್ಕೆ ಒಳಪಟ್ಟಿತು. ನಂತರ ಆಧುನಿಕತೆ, ಆಧುನಿಕ ಸಂಸ್ಕೃತಿ ಹಾಗೂ ಜಾಗತೀಕರಣದ ಪ್ರಭಾವಗಳಿಂದಾಗಿ ಇನ್ನೂ ಹೆಚ್ಚಿನ ಆತಂಕಕ್ಕೆ ಒಳಗಾಗಿವೆ. ಇದಕ್ಕೆ ಹಲವಾರು ಕಾರಣಗಳಿವೆ.

ಆಧುನಿಕತೆ ಹಾಗೂ ಜಾಗತೀಕರಣಗಳ ಪರಿಣಾಮವಾಗಿ ಅನೇಕ ಕಾರ್ಖಾನೆಗಳು ತಲೆಯೆತ್ತುತ್ತಿವೆ. ಭಾರತ ದೇಶದಲ್ಲಿ ಕಡಿಮೆ ಸಂಬಳದಲ್ಲಿ ದುಡಿಯುವ ಉತ್ತಮವಾದ ಮಾನವ ಸಂಪನ್ಮೂಲ ಲಭ್ಯವಾಗುವುದೆಂಬ ಅರಿವು ವಿದೇಶಿಯರಿಗೆ ಇರುವುದರಿಂದ ಅನೇಕ ವಿದೇಶಿ ಉದ್ದಿಮೆದಾರರು ತಮ್ಮ ಉದ್ದಿಮೆಗಳನ್ನು ಇಲ್ಲಿ ಪ್ರಾರಂಭಿಸಲು ತೊಡಗಿದ್ದಾರೆ. ಕಾಡನ್ನು ಕಡಿದು ಕಾಂಕ್ರೀಟ್ ನಾಡಾಗುತ್ತಿದೆ. ಇದರ ಪರಿಣಾಮವಾಗಿ ಕಾಡಿನ ಉತ್ಪನ್ನಗಳನ್ನೇ ಅವಲಂಬಿಸಿರುವ ಬುಡಕಟ್ಟುಗಳನ್ನು ಒಕ್ಕಲೆಬ್ಬಿಸಲಾಗುತ್ತಿದೆ.

ಹೀಗಾಗಿ ಕಾಡನ್ನೇ ಉಸಿರಾಗಿ ಮಾಡಿಕೊಂಡಿರುವ ಬುಡಕಟ್ಟುಗಳು ನಿರಾಶ್ರಿತವಾಗುತ್ತಿವೆ. ಕಾಡಿನ ಉತ್ಪನ್ನಗಳ ಜೊತೆಗೆ ಕಾಡಿನ ಪಶುಪಕ್ಷಿಗಳ ಬೇಟೆಯನ್ನೇ ಅವಲಂಬಿಸಿರುವ ಬುಡಕಟ್ಟುಗಳು ಕೂಡ ಇದರಿಂದ ವಂಚಿತವಾಗುತ್ತಿವೆ. ಉದಾಹರಣೆಗೆ ಹಕ್ಕಿಪಿಕ್ಕಿ, ಹಾಲಕ್ಕಿ, ಕೊರಚರು ಮುಂತಾದ ಬುಡಕಟ್ಟುಗಳು ತಮ್ಮ ತುತ್ತಿನ ಚೀಲಕ್ಕಾಗಿ ಪರ್ಯಾಯ ಉದ್ಯೋಗವನ್ನು ಅರಸಿಕೊಂಡು ಅಲೆಯುವಂತಾಗಿದೆ. ಹಕ್ಕಿಪಿಕ್ಕಿ ಬುಡಕಟ್ಟಿನ ಅನನ್ಯತೆ ಬೇಟೆ ಹಾಗೂ ನಾಟಿ ವೈದ್ಯ ಪದ್ಧತಿಯಾಗಿದೆ. ಸರಕಾರದ ಕಾನೂನು ಹಾಗೂ ಆಧುನಿಕತೆಯ ಪರಿಣಾಮದಿಂದಾಗಿ ಹಕ್ಕಿಪಿಕ್ಕಿಯರು ತಮ್ಮ ಅನನ್ಯತೆಯ ಹಕ್ಕಿ ಬೇಟೆಯಿಂದ ವಂಚಿತರಾಗಿದ್ದಾರೆ ಹಾಗೂ ನಾಟೀ ವೈದ್ಯ ಪದ್ಧತಿಯು ಕೂಡ ಉಪೇಕ್ಷೆಗೆ ಒಳಗಾಗುತ್ತಿದೆ. ಹೀಗಾಗಿ ಹಕ್ಕಿಪಿಕ್ಕಿಯರು ತಮ್ಮ ಸಂಸ್ಕೃತಿಯ ಅನನ್ಯತೆಯನ್ನು ಕಳೆದುಕೊಂಡಿದ್ದಾರೆ. ಇದೇ ಬಗೆಯಲ್ಲಿ ಕೊರುಚರು, ಹಾಲಕ್ಕಿ ಮುಂತಾದ ಬುಡಕಟ್ಟುಗಳು ಕೂಡ ತಮ್ಮ ಅನನ್ಯತೆಯಿಂದ ದೂರವಾಗುತ್ತಿವೆ.

ತಮ್ಮ ಮೂಲ ಉದ್ಯೋಗಗಳನ್ನು ಕಳೆದುಕೊಳ್ಳುತ್ತಿರುವ ಬುಡಕಟ್ಟುಗಳು ಇಂದು ಆಧುನಿಕತೆಯ ಪ್ರಭಾವಕ್ಕೆ ಒಳಗಾಗುತ್ತಿದ್ದು, ನಗರೀಕರಣ ಬದುಕಿಗೆ ಕಾಲಿಡುತ್ತದ್ದಾರೆ. ಜಾಗತೀಕರಣದಿಂದಾಗಿ ಅನೇಕ ಉದ್ದಿಮೆಗಳು ತಲೆಯೆತ್ತುತ್ತಿರುವುದರಿಂದ ಬುಡಕಟ್ಟಿನ ಅನೇಕ ಜನಾಂಗಗಳು ವಲಸೆ ಬರುತ್ತಿದ್ದಾರೆ. ನಗರೀಕರಣದ ಬದುಕಿಗೆ ಹೊಂದಿಕೊಳ್ಳುತ್ತಿರುವ ಇವರು ತಮ್ಮ ಪಾರಂಪರಿಕ ವೇಷಭೂಷಣ ಹಾಗೂ ಭಾಷೆಯಿಂದ ದೂರ ಸರಿಯುತ್ತಿದ್ದಾರೆ. ಉದಾಹರಣೆಗೆ ನಗರೀಕರಣ ಬದುಕಿಗೆ ಒಳಗಾಗಿರುವ ಲಂಬಾಣಿ ಮಹಿಳೆಯರು ತಮ್ಮ ಪಾರಂಪರಿಕ ವೇಷಭೂಷಣಗಳನ್ನು ತೊರೆದು ಆಧುನಿಕ ವೇಷಭೂಷಣಗಳನ್ನು ಧರಿಸುತ್ತಿದ್ದಾರೆ ಅಲ್ಲದೆ ತಮ್ಮ 'ಗೋರ ಬೋಲಿ' ಭಾಷೆಯನ್ನು ಮಾತನಾಡುವುದು ಕೀಳು ಎಂಬ ಭ್ರಮೆಗೆ ಒಳಗಾಗಿ ಅನ್ಯಭಾಷೆಗಳನ್ನು ಮಾತನಾಡುತ್ತಿದ್ದಾರೆ. ಲಂಬಾಣಿಗರ ಅನನ್ಯತೆ ಎಂದರೆ ಮಹಿಳೆಯರ ರಂಗುರಂಗಿನ ಉಡುಪು ಮತ್ತು ವೈವಿಧ್ಯಮಯವಾದ ಆಭರಣಗಳು ಹಾಗೂ ಅವರದೇ ಆದ 'ಗೋರ ಬೋಲಿ' ಭಾಷೆಯಾಗಿದೆ. ಈ ಭಾಷೆಯು ಇಡೀ ಭಾರತದ ಬೇರೆ ಬೇರೆ ಪ್ರಾಂತಗಳಲ್ಲಿ ಚದುರಿಹೋಗಿರುವ ಲಂಬಾಣಿಗರನ್ನು ಪರಿಚಯಿಸುವ – ಏಕತ್ರಗೊಳಿಸುವ ಅಮೂಲ್ಯ ಸೂತ್ರವಾಗಿದೆ. ಆದರೆ ಇಂದು ಜಾಗತೀಕರಣದ ಕರಿನೆರಳು ಜನಾಂಗದ ಮೇಲೆ ಬೀಳುತ್ತಿರುವುದರಿಂದ ನಗರೀಕರಣಗೊಳ್ಳುತ್ತಿರುವ ಲಂಬಾಣಿಗರು ತಮ್ಮ ಪಾರಂಪರಿಕ ವೇಷಭೂಷಣ ಹಾಗೂ ಭಾಷೆಯಿಂದ ದೂರವಾಗುವಂತಾಗಿದೆ. ಇದೇ ಬಗೆಯಲ್ಲಿ ಸುಡುಗಾಡು ಸಿದ್ಧರು, ಗೊರವರು, ಬುಡಬುಡಿಕೆಯರು ಮುಂತಾದ ಬುಡಕಟ್ಟುಗಳು ಕೂಡ ಇದೇ ಸವಾಲುಗಳನ್ನು ಎದುರಿಸುತ್ತಿವೆ. ಜಾಗತೀಕರಣ ಬುಡಕಟ್ಟಿನ ಸಂಸ್ಕೃತಿಗಳನ್ನು ಅವರ ಅನನ್ಯತೆಯನ್ನು ಆಪೋಷನ ಮಾಡುತ್ತಿದೆ. ಭಾರತೀಯ ಬಹುರೂಪಿ ಸಂಸ್ಕೃತಿಗೆ ಏಕರೂಪದ ಸಂಸ್ಕೃತಿ ಚಾಲನೆಯನ್ನು ನೀಡುತ್ತಿದೆ. ನಗರೀಕರಣ ಬದುಕಿಗೆ

ಒಳಗಾಗುತ್ತಿರುವ ಅನೇಕ ಬುಡಕಟ್ಟುಗಳು ತಮ್ಮ ಭಾಷೆಯನ್ನು ಕೀಳು ದೃಷ್ಟಿಯಿಂದ ಕಾಣುತ್ತಿರುವುದರ ಫಲವಾಗಿ ಜಗತ್ತಿನ ಸುಮಾರು ೨೦೦೦ ಭಾಷೆ ಹಾಗೂ ಉಪಭಾಷೆಗಳು ಕಣ್ಮರೆಯಾಗುವ ಸ್ಥಿತಿಗೆ ತಲುಪಿವೆ. ಭಾಷೆಯ ನಾಶ ಅದು ಸಂಸ್ಕೃತಿಯ ನಾಶವಲ್ಲವೆ ? ಹೀಗಾಗಿ ಜಾಗತೀಕರಣ ಬುಡಕಟ್ಟುಗಳ ಅನನ್ಯತೆಗೆ ಸವಾಲಾಗಿ ಪರಿಣಮಿಸಿದೆ.

ಈ ಹಿಂದೆಯೇ ಹೇಳಿದಂತೆ ಜಾಗತೀಕರಣದ ಪರಿಣಾಮವಾಗಿ ಅನೇಕ ಬಹುರಾಷ್ಟ್ರೀಯ ಕಂಪನಿಗಳು ಭಾರತ ದೇಶದಲ್ಲಿ ತಲೆಯೆತ್ತುತ್ತಿರುವುದರಿಂದ ಬುಡಕಟ್ಟುಗಳ ಜನರು ತಮ್ಮ ಹೊಟ್ಟೆಯ ಹಿಟ್ಟಿಗಾಗಿ ತಮ್ಮ ಮೂಲ ವೃತ್ತಿಗಳನ್ನು ತೊರೆದು ಈ ಕಂಪನಿಗಳನ್ನು ಆಶ್ರಯಿಸುತ್ತಿದ್ದಾರೆ. ಕಡಿಮೆ ವೇತನದಲ್ಲಿ ಹೆಚ್ಚಿನ ಶ್ರಮವನ್ನು ಈ ಬುಡಕಟ್ಟಿನ ಜನರಿಂದ ಪಡೆಯುವ ಮೂಲಕ ಕಂಪನಿಗಳು ಇವರನ್ನು ಶೋಷಣೆಗೆ ಒಳಪಡಿಸುತ್ತಿವೆ. ಇದರ ಪರಿಣಾಮವಾಗಿ ಅನೇಕ ಬುಡಕಟ್ಟುಗಳು ತಮ್ಮ ಪಾರಂಪರಿಕ ಕುಲಕಸಬುಗಳನ್ನು ತೊರೆಯುವಂತಾಗಿದೆ. ಕೊರಚರು, ಕೊರವರು ತಮ್ಮ ಬುಟ್ಟಿ ಹೆಣಿಗೆಯಿಂದ ಲಂಬಾಣಿಗರು ಕಸೂತಿ ಕೆಲಸದಿಂದ, ಕುಂಬಾರಿಕೆಯಿಂದ, ದೂರವಾಗುತ್ತಿರುವಂತೆಯೇ ಇನ್ನು ಅನೇಕ ಬುಡಕಟ್ಟುಗಳು ತಮ್ಮ ಪಾರಂಪರಿಕ ಕುಲಕಸಬುಗಳಿಂದ ದೂರ ಸರಿಯುತ್ತಿದ್ದಾರೆ. ಉತ್ಪಾದನೆಯ ಮೂಲ ಬದಲಾದಂತೆಯೇ ಇಡೀ ಸಾಮಾಜ, ಸಾಂಸ್ಕೃತಿಕ ಬದಲಾವಣೆಯಾಗುತ್ತದೆ. ಹೀಗಾಗಿ ಇಂದು ಅನೇಕ ಬುಡಕಟ್ಟುಗಳು ತಮ್ಮ ಭೌಗೋಳಿಕ ನೆಲೆ, ಸಾಮಾಜಿಕ ಸ್ಥಿತಿಗತಿ, ಪಾರಂಪರಿಕ ವೇಷ ಭೂಷಣ, ಊಟೋಪಚಾರ, ಧಾರ್ಮಿಕ ಆಚರಣೆ, ಆಡಳಿತ ವ್ಯವಸ್ಥೆ, ಸಾಹಿತ್ಯ, ಕಲೆ, ಭಾಷೆ, ಭಾಷಿಕ ರೂಪದ ಕಥೆ, ಗಾದೆ, ಒಗಟು, ಕುಣಿತ, ಮುಂತಾದ ಸಾಂಸ್ಕೃತಿಕ ಅನನ್ಯತೆಗಳಿಂದ ವಂಚಿತವಾಗುತ್ತಿವೆ. ಉದಾಹರಣೆಗೆ ಗೊಂದಲಿಗರು ತಮ್ಮ ಗೊಂದಳಿ ವೃತ್ತಿಯಿಂದ, ಲಂಬಾಣಿ ಢಾಡಿಗಳು ತಮ್ಮ ವೃತ್ತಿ ಮೂಲದ ಕಥನ ಕಲೆಯಿಂದ, ಬುರ್ರಕಥಾದವರು ತಮ್ಮ ಕಥಾ ಮೇಳದಿಂದ ದೂರ ಸರಿಯುವಂತಾಗಿದೆ.

ಸಂಸ್ಕೃತಿ ನಿಂತ ನೀರಲ್ಲ. ಅದು ಪರಿವರ್ತನ ಶೀಲವಾದದ್ದು ಬದಲಾವಣೆಯು ಅತ್ಯಂತ ಶೀಘ್ರಗತಿಯಲ್ಲಿ ಉಂಟಾಗುತ್ತಿದೆ. ವೈಜ್ಞಾನಿಕತೆಯ ಬೆಳವಣಿಗೆ, ಆಧುನಿಕತೆ, ಆಧುನಿಕ ಸಮೂಹ ಮಾಧ್ಯಮಗಳು ಹಾಗೂ ಇಂದಿನ ರಾಜಕೀಯ, ಆರ್ಥಿಕ ತಾತ್ವಿಕತೆಗಳ ಫಲವಾದ ಜಾಗತೀಕರಣ, ಉದಾರೀಕರಣ ಮತ್ತು ಖಾಸಗೀಕರಣಗಳ ಪರಿಣಾಮವಾಗಿ ಇಂದು ಇಡೀ ಭೂಗೋಲ ಒಂದು ಪುಟ್ಟ ಹಳ್ಳಿಯಾಗಿ ಮಾರ್ಪಡುತ್ತಿದೆ. ಹೀಗಾಗಿ ಬದುಕಿನ ವಿವಿಧ ಆಯಾಮಗಳು ತೀವ್ರವಾಗಿ ಬದಲಾವಣೆಗೊಳಗಾಗುತ್ತವೆ. ಇದರ ಫಲ ಸ್ವರೂಪವಾಗಿ ಚಿಕ್ಕ ಚಿಕ್ಕ ಸಮೂಹ ರೂಪಗಳಾಗಿರುವ ಬುಡಕಟ್ಟು ಸಂಸ್ಕೃತಿಗಳು ಕೂಡ ಬದಲಾವಣೆಗೆ ಮೈತೆರೆದುಕೊಳ್ಳುತ್ತವೆ. ಇದು ಕಾಲದ ಅಗತ್ಯವೂ ಕೂಡ ಆಗಿದೆ. ಆದರೆ ಬದಲಾವಣೆಯು ಸಾಂಸ್ಕೃತಿಕ ಅನನ್ಯತೆಯನ್ನು ಕೊಚ್ಚಿಕೊಂಡು ಹೋದಲ್ಲಿ ಅಂತಹ ಬದಲಾವಣೆಯಿಂದ ಹೆಚ್ಚಿನ ಪ್ರಯೋಜನವಾಗಲಾರದು. ಕಾರಣ ನಾವಿಂದು ಸಾಂಸ್ಕೃತಿಕ

ಅನನ್ಯತೆಯನ್ನು ಉಳಿಸಿಕೊಳ್ಳಲು ಅನೇಕ ಸವಾಲುಗಳನ್ನು ಎದುರಿಸಬೇಕಾಗಿದೆ. ಅನನ್ಯತೆಯ ಜೊತೆಗೆ ಸಾಂಸ್ಕೃತಿಕ ಪರಿವರ್ತನೆಯಾದರೆ ಬದುಕು ಉನ್ನತ ಮಟ್ಟವನ್ನು ತಲುಪಿದರೆ ಹೆಚ್ಚಿನ ಪ್ರಯೋಜನ ಸಾಧ್ಯ. ಕಾರಣ ನಾವಿಂದು ಜಾಗತೀಕರಣ ಪ್ರಕ್ರಿಯೆಗೆ ಒಳಗಾಗುತ್ತಲೇ ನಮ್ಮ ಸಾಂಸ್ಕೃತಿಕ ಅನನ್ಯತೆಯನ್ನು ಉಳಿಸಿಕೊಳ್ಳಲು ಪ್ರಯತ್ನ ಮಾಡುವುದು ಅಗತ್ಯವಾಗಿದೆ. ಪ್ರಾಯಶಃ ಪ್ರತಿಯೊಂದು ಸಂಪರ್ಕ ಮತ್ತು ಬದಲಾವಣೆಯ ಪರಿಸ್ಥಿತಿಗಳು ಸ್ವಯಂ ಪ್ರೇರಿತ ಪರಿಹಾರವನ್ನು ಹುಡುಕಿಕೊಳ್ಳುವಂತೆಯೇ ಇವು ಕೂಡ ಹುಡುಕಿಕೊಳ್ಳುವ ಪರಿಸ್ಥಿತಿ ಇಂದು ನಿರ್ಮಾಣವಾಗಿದೆ.

ನಮಗೆ ಇಷ್ಟವಿರಲಿ, ಇಲ್ಲದಿರಲಿ ತಂತ್ರಜ್ಞಾನ ಬದಲಾವಣೆಯಲ್ಲಿ ಹೆಚ್ಚಾಗಿ ಭಾಗವಹಿಸುವ ಅಗತ್ಯವಿದೆ. ಅಂದರೆ ಆಧುನಿಕ ತಂತ್ರಜ್ಞಾನದ ಫಲವನ್ನು ಅನುಭವಿಸಲು ಬುಡಕಟ್ಟುಗಳು ಮುಂದಾಗಬೇಕು. ಅಂತೆಯೇ ಬಿಲ್‌ಹೂ ಎಂಬ ವಿದ್ವಾಂಸರು ತಂತ್ರಜ್ಞಾನ ಬದಲಾವಣೆಯಲ್ಲಿ ಭಾಗವಹಿಸುತ್ತಲೇ ಸಾಂಸ್ಕೃತಿಕ ಅನನ್ಯತೆಯ ಪುನರ್ ಸ್ಥಾಪನೆಗೆ ಒಡಂಬಡಿಕೆ ಮಾಡಿಕೊಳ್ಳುವ ಅಗತ್ಯವನ್ನು ಒತ್ತಿ ಹೇಳಿದ್ದಾರೆ. ಬುಡಕಟ್ಟುಗಳು ತಮ್ಮ ಮೂಲ ಸಂಸ್ಕೃತಿಯ ವಿಶೇಷ ಗುಣ ಲಕ್ಷಣಗಳ ಅಂಶಗಳನ್ನು ದಿಟ್ಟತನದಿಂದ ಹುಡುಕುತ್ತ ಅವುಗಳನ್ನು ಉಳಿಸಿಕೊಳ್ಳಲು ಪ್ರಯತ್ನಿಸುತ್ತಲೇ ಮುಂದುವರಿಯಬೇಕಿದೆ. ತಮ್ಮ ಬುಡಕಟ್ಟಿನ ಸಂಸ್ಕೃತಿಯ ಅನನ್ಯತೆಯನ್ನು ಸಾಮಾಜಿಕ, ರಾಜಕೀಯ, ಧಾರ್ಮಿಕ, ಭಾಷಿಕ ಹಾಗೂ ಸಾಂಸ್ಕೃತಿಕ ಮೂಲಗಳಲ್ಲಿ ಕಂಡುಕೊಂಡು ಅದನ್ನು ಹೇಗೆ ಉಳಿಸಿಕೊಳ್ಳಲು ಸಾಧ್ಯವಾಗಬಲ್ಲದು ಎಂಬುದನ್ನು ಕುರಿತು ಚಿಂತನೆ ಮಾಡಿ, ಕ್ರಿಯಾರೂಪದಲ್ಲಾಗಲಿ ಇಲ್ಲಿವೆ, ಪ್ರದರ್ಶನ ರೂಪದಲ್ಲಾಗಲಿ ಉಳಿಸಿಕೊಳ್ಳಲು ಪ್ರಯತ್ನಿಸಬೇಕಾಗಿದೆ. ಇದಕ್ಕೆ ಸಾಮಾಜಿಕ ಇಚ್ಛಾಶಕ್ತಿಯ ಅಗತ್ಯವಿದೆ. ಅದನ್ನು ಇಡೀ ಸಮಾಜ ಅರಿತುಕೊಂಡು ತನ್ನ ಕರ್ತೃತ್ವ ಶಕ್ತಿಯನ್ನು ಧಾರೆಯೆರೆಯಬೇಕು. ಹಾಗೆಯೇ ರಾಜಕೀಯ ಶಕ್ತಿಯ ಸಹಾಯ ಅನಿವಾರ್ಯವಾದಲ್ಲಿ ಅದನ್ನು ಕೂಡ ಪಡೆದುಕೊಳ್ಳಲು ಮುಂದಾಗಬೇಕು. ಉದಾಹರಣೆಗೆ ಕೊರಚರು, ಕೊರವರು ತಮ್ಮ ಬುಟ್ಟಿ ಹೆಣಿಗೆಯ ಕುಶಲಕಲೆಯನ್ನು ಉಳಿಸಿಕೊಳ್ಳಬೇಕಾದಲ್ಲಿ ಇಂದಿನ ಆಧುನಿಕ ಅಭಿರುಚಿಗೆ ಅನುಗುಣವಾಗಿ ಅದನ್ನು ಒಗ್ಗಿಸಿಕೊಳ್ಳಬೇಕು. ಅದಕ್ಕೆ ಆರ್ಥಿಕ ಸಹಾಯವನ್ನು ಸರಕಾರದಿಂದ ಪಡೆದುಕೊಳ್ಳಲು ಪ್ರಯತ್ನಿಸಬೇಕು. ಹಾಗೆಯೇ ಗೊಂದಲಿಗರು ತಮ್ಮ ಧಾರ್ಮಿಕ ಗೋಂದಲಿ ಕಥಾ ಪರಂಪರೆಯನ್ನು ಉಳಿಸಿಕೊಳ್ಳಲು ಸಾಮಾಜಿಕ ಇಚ್ಛಾ ಶಕ್ತಿಯನ್ನು ಹೊಂದಬೇಕು. ಲಂಬಾಣಿರು ತಮ್ಮ ಕಸೂತಿ ಕಲೆಯನ್ನು ಪ್ರೀತಿಸಬೇಕು. ಆ ಕಲೆಗೆ ವಾಣಿಜ್ಯೀಕರಣದ ರೂಪವನ್ನು ನೀಡಬೇಕು. ಸರಕಾರದಿಂದ ಸಹಾಯವನ್ನು ಪಡೆದುಕೊಳ್ಳಲು ಪ್ರಯತ್ನಿಸಬೇಕು ಅಲ್ಲದೆ ಭಾಷೆಯನ್ನು ಉಳಿಸಿಕೊಳ್ಳಲು ಇಚ್ಛಾ ಶಕ್ತಿಯನ್ನು ಹೊಂದಬೇಕು. ಸಾಹಿತ್ಯ ಸಂಗ್ರಹ ಪ್ರಕಟನೆಗೆ ಮುಂದಾಗಬೇಕು. ಅದಕ್ಕೆ ಪ್ರೋತ್ಸಾಹ ಕೊಡಬೇಕು. ಸಾಹಿತ್ಯ ಉಳಿದಾಗ ಮಾತ್ರ ಭಾಷೆ ಉಳಿಸಲು ಮತ್ತು ಬೆಳೆಸಲು ಸಾಧ್ಯವಾಗುತ್ತದೆ. ಹೀಗೆ

ಪ್ರತಿಯೊಂದು ಬುಡಕಟ್ಟು ಆಧುನಿಕತೆಗೆ ಒಳಗಾಗುತ್ತಲೇ ತನ್ನ ಅನನ್ಯತೆಯ ಅಂಶಗಳನ್ನು ಅರಿತುಕೊಂಡು ಅವುಗಳನ್ನು ಅನಂತ ಪ್ರಯತ್ನ ಮಾಡಿದಾಗ ಮಾತ್ರ ನಮ್ಮ ದೇಶದ ಬಹುರೂಪಿ ಸಂಸ್ಕೃತಿಯನ್ನು ನಾವು ಉಳಿಸಿಕೊಳ್ಳಲು ಸಾಧ್ಯವಾಗಬಲ್ಲದು. ಕಾರಣ ಕೇವಲ ಬುಡಕಟ್ಟು ಸಮಾಜಗಳಷ್ಟೇ ಅಲ್ಲ ಉಳಿದ ಸಮಾಜದವರು ಹಾಗೂ ಸರಕಾರ ಈ ದಿಶೆಯಲ್ಲಿ ಆಲೋಚಿಸುವ, ಭಾವನಾತ್ಮಕ ಸಂಬಂಧ ಬೆಳೆಸುವ, ಕ್ರಿಯಾತ್ಮಕವಾಗಿ ಸಹಾಯ, ಸಹಕಾರ ಹಾಗೂ ಪ್ರೋತ್ಸಾಹ ನೀಡುವ ಅಗತ್ಯವಿದೆ. ಇದು ನಮ್ಮೆಲ್ಲರ ಕರ್ತವ್ಯವಾಗಬೇಕಿದೆ. ಆಗ ಮಾತ್ರ ವೈವಿಧ್ಯಮಯ ವರ್ಣಮಯ ಬಹುರೂಪಿ ಸಂಸ್ಕೃತಿ ಉಳಿಸಿಕೊಳ್ಳಬಹುದು.

❖

**ಸಹಾಯಕ ಗ್ರಂಥಗಳು :**


1. 'ಗಿರಿಜನ ಸಿರಿ' (೨೦೦೩) ಗ್ರಂಥದಲ್ಲಿಯ ಡಾ. ಮಂಜುನಾಥ ಬೇವಿನಕಟ್ಟಿಯವರ 'ಬುಡಕಟ್ಟು ಅನನ್ಯತೆ' ಲೇಖನದ ಪ್ರಯೋಜನವನ್ನು ಪಡೆಯಲಾಗಿದೆ.

2. Honko Lauri 1988, studies on Tradition and Cultural Indentity - An Introduction (In Tradition and Cultural Identity (Ed) Lauri Honko)
Turku : Nordic Institute of Folklore.

3. Bruck Ulla : 1998 ; Identity, Local Community and Local Identity (In Traditional and Cultural Identity (Ed), Lauri Honko, Turku : Nordic Institute of Folklore.

# ಸಂವಾದ

# ಜಾಗತೀಕರಣ - ಜನಪದ ಕಲೆ

ಡಾ॥ ರಾಜೇಂದ್ರ ಯರನಾಳೆ

◆

ಜಾಗತೀಕರಣವೆನ್ನುವುದು ಇಂದು ಜನಪದ ಕಲೆಗಳಿಗೆ ಮಾತ್ರವಲ್ಲ; ಪ್ರತಿಯೊಂದು ಕ್ಷೇತ್ರಕ್ಕೂ ಪೈಪೋಟಿಯಾಗಿದೆ. ಯುದ್ಧವನ್ನು ಎದುರಿಸುವವ ವೀರನೆನಿಸುತ್ತಾನೆ. ಓಡಿ ಹೋಗುವವನು ಹೇಡಿಯಾಗುತ್ತಾನೆ. ಜಾಗತೀಕರಣ ಕೂಡ ಹಾಗೆಯೇ, ಅದೊಂದು ಸವಾಲಲ್ಲ, ಸಮಸ್ಯೆಯಲ್ಲ, ಅದೊಂದು ಮುಕ್ತ ಪೈಪೋಟಿ. ಪೈಪೋಟಿಯಲ್ಲಿ ಯಾರು ಸಮರ್ಥರಿರುತ್ತಾರೋ ಅವರು ಉಳಿಯುತ್ತಾರೆ. ಸಮರ್ಥರಲ್ಲದವರು ಅಳಿಯುತ್ತಾರೆ. ಜಾಗತೀಕರಣವೆನ್ನುವುದು ಆಲಸ್ಸಿಗರಿಗೆ ಅಸಾಧ್ಯವೆನಿಸಿದರೆ ಸಾಹಸಿಗಳಿಗೆ ತಮ್ಮ ಸಾಹಸ ಮೆರೆಯಲು ಸರಳ ಅವಕಾಶವಾಗಿದೆ.

ಜನಪದ ಕಲೆಗಳ ಮಟ್ಟಿಗೂ ಹೀಗೆಯೇ. ಅಜ್ಜ ನೆಟ್ಟಿದ ಆಲದ ಮರವೆಂದು ನೇಣು ಹಾಕಿಕೊಳ್ಳಬೇಕಾಗಿಲ್ಲ. ಜೋಕಾಲಿ ಕಟ್ಟಿ ಆಡಬೇಕಾಗಿದೆ. ಜನಪದ ಕಲೆಗಳು ಪರಂಪರೆಯಿಂದ ಬಂದವುಗಳು. ಅವು ಹಾಗೆಯೇ ಇರಬೇಕು ಎಂದರೆ ಬೆಳವಣಿಗೆ ಆಗಲಾರದು. ಅದು ಜಾಗತೀಕರಣದಲ್ಲಿ ಅಳಿಯುತ್ತದೆ.

ಮೊಹರಂದಲ್ಲಾಡುವ ಪೈತ್ರಿ ಕುಣಿತ ಹಾಳೆಯ ಹೂವುಗಳಿಗೆ ಒಬ್ಬ ಬಣ್ಣ ಹಚ್ಚಿದರೆ ಮತ್ತೊಬ್ಬ ಮಿಂಚು ಹಾಳೆ ಅಂಟಿಸಿದರೆ, ಬಣ್ಣದ ಹಾಳೆಯವನಿಗೆ ಪೈಪೋಟಿ ಆಗುತ್ತದೆ. ಇದು ಸಹಜವಾದಾಗ ಇದಕ್ಕೂ ತನ್ನ ಕಲೆ ಮಿಂಚಬೇಕೆಂದರೆ ಪ್ಲಾಸ್ಟಿಕ್ ಹಾಳೆ, ಬಣ್ಣ ಬಣ್ಣದ ಗುಂಡಿ, ಮೊದಲಾಗಿ ಅಂಟಿಸಿ ಮತ್ತಷ್ಟು ರಂಗೇರುವಂತೆ ಮಾಡಿದರೆ ಇವನು ಹೆಚ್ಚಿನ ಜೀವಂತಿಕೆ ಪಡೆದುಕೊಳ್ಳುತ್ತಾನೆ. ಹೀಗೆಯೇ ಡೊಳ್ಳು, ತಮಟೆ, ಹಲಗೆ ಮೊದಲಾದವು ಚರ್ಮ ವಾದ್ಯಗಳು, ಚರ್ಮ ಸಿಗದಿದ್ದ ಇಂದಿನ ಸಂದರ್ಭದಲ್ಲಿ ಚರ್ಮದಂತೆಯೇ ಪ್ಲಾಸ್ಟಿಕ್ ತಯಾರಿಸಿ ಡೊಳ್ಳು, ತಮಟೆ ಮಾಡುವುದು, ಬಾರಿಸುವದು ಕಾಣುತ್ತೇವೆ. ಪ್ಲಾಸ್ಟಿಕ್ ಹೇಗೆ ಜನಪದವೆಂದರೆ ಜಾಗತೀಕರಣದಲ್ಲಿ ಅಳಿಯುತ್ತೇವೆ. ಲಭ್ಯವಾದುದನ್ನು ಮೂಲಕ್ಕೆ ಅನುಗುಣವಾಗಿ ಅದಕ್ಕೂ ಆಕರ್ಷಕವಾಗಿ ತಯಾರಿಸಿದರೆ, ಉಪಯೋಗಿಸಿದರೆ ಅದು ಜಾಗತೀಕರಣದಲ್ಲೂ ಜಯಭೇರಿ ಬಾರಿಸುತ್ತದೆ.

ಈ ನಿಟ್ಟಿನಲ್ಲಿ ಯಾವುದೇ ಜನಪದ ಕಲೆ ಅಭಿಜಾತ ಕಲೆಯ ಲೇಪದೊಂದಿಗೆ ತಳಕು–ಬಳಕುಗಳಿಂದ ಆಕರ್ಷಣೀಯವಾಗಿಸಿಕೊಳ್ಳುವುದು ಕಲಾವಿದನಿಗೆ ಅನಿವಾರ್ಯ ಆಗಬೇಕು. ಹಾಗೆ ಮಾಡಿಕೊಂಡಲ್ಲಿ ಮಾತ್ರ ಅವನು ಬದುಕುಳಿಯಲು ಸಾಧ್ಯ. ಜನಪದವೆನ್ನುವುದು ನಿಂತ ನೀರಲ್ಲ. ಅದು ಸದಾ ಚಲನಶೀಲವಾದುದು. ದೊಡ್ಡಾಟಗಳು ಅಟ್ಟಕಟ್ಟಿ ಬೆನ್ನಿಗೆ ಬಂಡಿಗಾಗಲೀ ಕಟ್ಟಿಕೊಂಡು ಮೂರು, ಮೂರು ರಾತ್ರಿಗಳು ಆಟ ಆಡುತ್ತಿದ್ದರು. ಇಂದು ಮೂರು ದಿವಸಗಳು ಆಡುವವರಿಗೂ ಸಮಯವಿಲ್ಲ, ನೋಡುವವರಿಗೂ ಸಮಯವಿಲ್ಲ. ಹೀಗಾಗಿ ಒಂದು ರಾತ್ರಿ ಅರ್ಧ ರಾತ್ರಿಗೆ ಆಗುವಷ್ಟು ದೊಡ್ಡಾಟದ ಕಥೆಗಳು ಕಡಿತಗೊಳಿಸಿರುವುದಾಗಿದೆ. ಇದರಂತೆಯೇ ಮೊದಲು ಮುಖವಾಡ ಭುಜ ಕಿರೀಟ ಮೊದಲಾದವುಗಳು ಕಟ್ಟಿಗೆಯಿಂದ ತಯಾರಿಸಿದ್ದು ಭಾರವಾಗಿರುತ್ತಿದ್ದವು. ಇಂದು ರಟ್ಟಿನಿಂದ, ಹಾಳೆಯಿಂದ ಹಗುರವಾಗಿ ಅದೇ ಮಾದರಿಯಲ್ಲಿ ತಯಾರಿಸಿ ಆಟ ಆಡುವುದಕ್ಕೆ ಜನಪದವೇ ಎಂದು ಸ್ವೀಕರಿಸುತ್ತೇವೆ. ಹೀಗೆ ಇಂದಿನ ಸಿನೆಮಾ, ಟಿ.ವಿ. ಯುಗದಲ್ಲಿ ಯಕ್ಷಗಾನ ಕಲಾವಿದರು ತಮ್ಮ ಜಾಣ್ಮೆಯಿಂದ ರಾತ್ರಿಯಿಡೀ ಆಡುವ ಕಥಾ ಪ್ರಸಂಗ ಎರಡು ತಾಸು, ಒಂದು ತಾಸು ಅಷ್ಟೇ ಅಲ್ಲ. ಅರ್ಧ ತಾಸಿನಲ್ಲಿಯೂ ಒಂದು ಕಥಾ ಪ್ರಸಂಗ ಆಡಿ ತೋರಿಸುವಂತೆ ಕಥಾ ಭಾಗ ಕಡಿತಗೊಳಿಸಿ ಮೂಲತನ ಉಳಿಸಿಕೊಂಡಿರುವುದು ಕಾಣುತ್ತೇವೆ. ಹಾಗೆಯೇ ದೊಡ್ಡಾಟ, ಬಯಲಾಟಗಳು ಕೂಡ ಕಾಲಕ್ಕನುಗುಣವಾಗಿ ಜನರಿಗೆ ಬೇಕಾಗುವಂತೆ, ಯುದ್ಧ ಸನ್ನಿವೇಶ ಅಥವಾ ವಿವಾಹ ಸನ್ನಿವೇಶ, ಸಂಧಾನ ಸನ್ನಿವೇಶ ಮೊದಲಾದವುಗಳಿಂದ ಸಿನೆಮಾ, ಟಿ.ವಿ. ಗಳಿಂದ ನೋಡುಗರ ಮನಸ್ಸು ಬಯಲಾಟಗಳತ್ತ ತಿರುಗಿಸಿಕೊಳ್ಳುವ ಜಾಣ್ಮೆ ಕಲಿಯಬೇಕಾಗಿದೆ. ಇಲ್ಲದಿದ್ದರೆ, ನಮ್ಮ ಕಾಲ ಹಾಗಿತ್ತು ಹೀಗಿತ್ತು ಇಂದಿನ ಕಾಲದಲ್ಲಿ ಯಾರು ನೋಡುತ್ತಾರೆ. ಯಾರು ಬೆಲೆ ಕೊಡುತ್ತಾರೆ ಎಂದೆಲ್ಲ ಗೊಣಗುತ್ತ ಕಾಲದ ಅರಿವು ಮಾಡಿಕೊಳ್ಳದೇ ಕಲೆಯನ್ನು ಕಳೆದುಕೊಳ್ಳಬೇಕಾಗುತ್ತದೆ.

ಕುಟ್ಟುವ, ಬೀಸುವ ಹಾಡುಗಳು, ಮದುವೆ ಹಾಡುಗಳು, ಮೊಹರಂ ಹಾಡುಗಳು, ಕೋಲಾಟದ ಹಾಡುಗಳು, ಬೊಬ್ಬಿ ಹಾಡುಗಳು, ಜನಪದ ಕಥೆಗಳು, ಒಗಟುಗಳು, ಒಡಪುಗಳು, ಹಂತಿ ಹಾಡುಗಳು ಮೊದಲಾದವುಗಳು.

ಶ್ರಮ ಪರಿಹಾರ, ಹಬ್ಬ, ಹುಣ್ಣಿಮೆ ಹಾಗೂ ಸಾಂದರ್ಭಿಕವಾಗಿ ಹಾಡುವಂಥವುಗಳು. ಇವುಗಳು ಇಂದು ಅಳಿಯುತ್ತಿವೆ ಎಂದು ಹೇಳುವುದೊಂದು ಕಡೆಗಾದರೆ, ಇವುಗಳ ಧಾಟಿ, ವೇಷಭೂಷಣ, ಬಳಸಿಕೊಂಡು ಸಿನೆಮಾ, ಟಿ. ವಿ. ಧಾರಾವಾಹಿ ಮಾಡಿ ಜನಮನ ಸೂರೆಗೊಳ್ಳುವುದು ಮತ್ತೊಂದು ಕಡೆಗೆ ಕಾಣುತ್ತೇವೆ. ಒಂದು ಶಾಲಾ ಕಾಲೇಜಿನ ಸ್ನೇಹ ಸಮ್ಮೇಳನದಲ್ಲಿ ಭಾವಗೀತೆ, ಚಿತ್ರಗೀತೆ, ನೃತ್ಯ ಮೊದಲಾದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಮಾಡುವಾಗ ಜಪದ ಶೈಲಿಯ ನೃತ್ಯ ಅಥವಾ ಯಾವುದೇ

ಒಂದು ಜನಪದ ಹಾಡನ್ನು ಹಾಡಿದಾಗ ಎಲ್ಲರನ್ನು ಮೆಚ್ಚಿಸುವುದನ್ನು ಕಾಣುತ್ತೇವೆ. ಈ ನಿಟ್ಟಿನಲ್ಲಿ ಹೊಸ, ಹೊಸ ಪ್ರಯೋಗಗಳನ್ನು ಮಾಡುವುದು ಅಗತ್ಯವಿದೆ.

ವರ್ಷಗಟ್ಟಲೆ ಒಂದು ನೃತ್ಯವನ್ನು ಅಭ್ಯಾಸ ಮಾಡಿ ಎಷ್ಟೇ ಸುಂದರವಾಗಿ ಕುಣಿದರು ಒಂದು ಡೊಳ್ಳು, ಒಂದು ಕರಡಿ ಮಜಲು, ಒಂದು ಕಂಸಾಳೆ, ಒಂದು ಮೂಜಾ ಕುಣಿತ ಇವುಗಳ ಅಬ್ಬರದ ಮುಂದೆ ಸಪ್ಪೆಯೆನಿಸುತ್ತದೆ. ಆದರೆ, ಇವುಗಳ ಪ್ರಯೋಗ ಮಾಡುವವರು ಎಷ್ಟು ಜನ ತೊಡಗಿದ್ದೇವೆ ಎಂದು ಪ್ರಶ್ನಿಸಿಕೊಳ್ಳಬೇಕಾಗಿದೆ.

ಹಲಗೆ ಬಾರಿಸುವವ ದಲಿತ, ಡೊಳ್ಳು ಬಾರಿಸುವವ ಕುರುಬ, ಹಗಲು ವೇಷ ಧರಿಸುವವ ಹಗಲು ವೇಷಗಾರ ಹೀಗೆ ಆಯಾ ವೃತ್ತಿಯವರೇ ಈ ಕಲೆಗಳು ಪ್ರದರ್ಶಿಸಬೇಕು ಎನ್ನುವುದು ಇಂದು ಉಳಿದಿಲ್ಲ ಹಾಗೂ ಉಳಿಯಬಾರದು ಕೂಡ. ಏಕೆಂದರೆ, ಒಬ್ಬನ ವೃತ್ತಿ ಆಗಿ ಹೊಟ್ಟೆಪಾಡಿಗೆ ಬದುಕುವಾಗ ಅಲ್ಲಿ ಕಲೆಯ ಮಹತ್ವ ಕಡಿಮೆ ಆಗುತ್ತದೆ. ಆದರೆ, ಕಲೆಗಾಗಿ ಇವುಗಳು ಯಾರು ಬೇಕಾದರೂ ಕಲಾ ಪ್ರದರ್ಶನ ಮಾಡಿದರೆ, ಬೇಡಿಕೆ ಹೆಚ್ಚಾಗುತ್ತದೆ. ಉದಾ : ಗಂಡು ಕಲೆ ಎನಿಸುವ ಡೊಳ್ಳು, ಕುರುಬರು ಹಾಗೂ ಪುರುಷರು ಮಾತ್ರ ಬಾರಿಸುವುದು ಇಂದು ಹೆಣ್ಣು ಮಕ್ಕಳು ಕೂಡ ಬಾರಿಸುವುದು ಆ ಕಲೆಯ ವೈಶಿಷ್ಟ್ಯತೆ ಹೆಚ್ಚಿಸಿದೆ. ಒಬ್ಬ ಮಂತ್ರಿ ಒಂದು ಡೊಳ್ಳು ಅಥವಾ ನಗಾರಿ ಬಾರಿಸಿದಾಗ, ಅದರ ಮಹತ್ವವೇ ಬೇರೆ ಆಗುತ್ತದೆ. ಹೀಗೆ ಜನಪದದ ಪ್ರತಿಯೊಂದು ಕಲೆ ಕೂಡ ಎಲ್ಲರೂ ಪ್ರದರ್ಶಿಸುವ ಹವ್ಯಾಸ ಬೆಳೆಸಿಕೊಳ್ಳಬೇಕಾಗಿದೆ. ಆಯಾ ವೃತ್ತಿಯವರಿಗೆ ಸಂಬಂಧಿಸಿ ಅವರವರು ಬದುಕುವುದು ಬೇಡವೆಂದಲ್ಲ, ಅದರ ಜೊತೆ, ಜೊತೆಗೆ ಅನುಕರುಣೆ ಮಾಡಿದಲ್ಲಿ ಇನ್ನುಳಿದವರಿಗೂ ಅದರ ಕಳೆ ಬರುತ್ತದೆ, ಕಲೆ ಬೆಳೆಯುತ್ತದೆ, ಉಳಿಯುತ್ತದೆ.

ಆಧುನಿಕ ಯಾಂತ್ರಿಕತೆಯಿಂದಾಗಿಯೂ ಸಾಕಷ್ಟು ಜನಪದ ಕಲೆಗಳು ಅಳಿಯುತ್ತಿವೆ ಎನ್ನುವುದನ್ನು ಕಾಣುತ್ತಿದ್ದೇವೆ. ಉದಾ : ಹೊಲಗಳಲ್ಲಿ ಹಂತಿ ಕಟ್ಟಿ ರಾಶಿ ಮಾಡುವುದೇ ಇಂದು ನಿಂತು ಹೋಗಿದೆ. ಇಂದು ಯಂತ್ರದ ಮೂಲಕ ರಾಶಿ ಮಾಡುವುದರಿಂದ ಹಂತಿ ಹಾಡುಗಳು ಹಾಡುವುದು ಇಲ್ಲವೇ ಇಲ್ಲ. ಜೋಳ, ಗೋಧಿ ಮೊದಲಾಗಿ ಬೀಸುವ ಕಲ್ಲಿನಿಂದ ಬೀಸುವುದೇ ಇಲ್ಲ. ಎಲ್ಲ ಮಶೀನಿನಲ್ಲಿ ಬೀಸುವುದರಿಂದ ಬೀಸುವ ಹಾಡುಗಳು ಮಾಯವಾಗುತ್ತಿವೆ. ಕುಟ್ಟುವ ಕಾರ್ಯವೆಲ್ಲ ಮಿಕ್ಸರ್ ನಲ್ಲಿ ಮಾಡುವುದರಿಂದ ಕುಟ್ಟುವ ಹಾಡುಗಳು ಇಲ್ಲ ಎಂಬಿತ್ಯಾದಿ ಸಮಸ್ಯೆಗಳು ಎದುರಿಗಿವೆ. ಆದರೆ, ಸಮಸ್ಯೆಗೆ ಸಮಸ್ಯೆ ಎನ್ನುತ್ತ ಕಲಾಭಿರುಚಿ ಬೆಳೆಸುವಲ್ಲಿ ವಿಫಲರಾಗುತ್ತಿದ್ದೇವೆ. ಹಾಗೆಂದು ಜನರಲ್ಲಿ ಈ ಕಲೆಗಳ ಕುರಿತು ಅಭಿರುಚಿ ಇಲ್ಲ ಹಾಗೂ ಹಾಡುವವರು ಇಲ್ಲ ಎಂದಲ್ಲ, ಇಬ್ಬರೂ ಇದ್ದಾರೆ, ಇದ್ದೇವೆ. ಆದರೆ, ಸೃಜನಶೀಲ ಮನಸ್ಸಿಗೆ ಚಿಂತನೆ ನೀಡಿದ್ದರೆ, ಅದ್ಭುತ ಕಲಾ ಪ್ರದರ್ಶನ ನೀಡಬಹುದು. ಉದಾ: ಇಂದು ಕನ್ನಡ ಮತ್ತು ಸಂಸ್ಕೃತಿ

ಇಲಾಖೆ ವತಿಯಿಂದ ಕರ್ನಾಟಕ ಸರಕಾರ ಜಾನಪದ ಜಾತ್ರೆಗಳಂತಹ ಕಾರ್ಯಕ್ರಮಗಳಲ್ಲಿ ಹಂತಿ ಹಾಡು, ಕುಟ್ಟುವ, ಬೀಸುವ ಹಾಡುಗಳಿಗೆ ಅವಕಾಶ ಕಲ್ಪಿಸಿಕೊಟ್ಟಿರುವುದು ಹಾಗೂ ಕಲಾವಿದರು ಕಲಾ ಪ್ರದರ್ಶನ ನೀಡುತ್ತಿರುವುದು ಆಕರ್ಷಣೀಯವಾಗಿದೆ. ಆದರೆ, ಇಷ್ಟಕ್ಕೆ ತೃಪ್ತಿಪಟ್ಟುಕೊಳ್ಳುವಂತಿಲ್ಲ. ಕಲ್ಲಿನಿಂದಲ್ಲದ ಕಲ್ಲಿನಂತೆ ಕಾಣುವ ಒಳ್ಳು-ಒನಕೆ, ಬೀಸುವ ಕಲ್ಲು ಮೊದಲಾದವುಗಳು ತಯಾರಿಸಿಕೊಂಡು ಜನಪದ ಬಟ್ಟೆಗಳು ತೊಟ್ಟುಕೊಂಡು ಈ ಹಾಡುಗಳು, ಕಲೆ ಪ್ರದರ್ಶಿಸಲು ಸಾಕಷ್ಟು ಅವಕಾಶವಿದೆ. ಎತ್ತುಗಳಂತೆ ಮುಖವಾಡಗಳನ್ನು ತಯಾರಿಸಿ ಮೇಟಿ ಕಟ್ಟಿ ಹಂತಿ ಹೊಡೆಯುವುದನ್ನು ಹಾಡುತ್ತ ಪ್ರಯೋಗಿಸಿದರೆ ಇವುಗಳನ್ನು ನೋಡಿಯೇ ಇರದ ಜನರಿಗೆ ಹೊಸ ಪ್ರಪಂಚ ಹಳೆಯ ಪರಂಪರೆ ಒಟ್ಟಿಗೆ ತೋರಿಸಿದಂತಾಗುತ್ತದೆ. ಜೊತೆಗೆ ಎಲ್ಲರ ಮನಸ್ಸು ಗೆಲ್ಲುತ್ತದೆ. ಆದರೆ, ಈ ನಿಟ್ಟಿನಲ್ಲಿ ಮನಸ್ಸು ಮಾಡಿ ಕಾರ್ಯಪ್ರವೃತ್ತರಾಗುವುದು ಕಲಾವಿದರ, ಕಲಾಪ್ರೇಮಿಗಳ ಧರ್ಮವಾಗಬೇಕು.

❖

# ಜಾನಪದ ಮತ್ತು ಜಾಗತೀಕರಣ

ಡಾ॥ ಗವಿಸಿದ್ಧಪ್ಪ ಎಚ್. ಪಾಟೀಲ

◆

ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಹಾಗೂ ಕನ್ನಡ ಅಧ್ಯಯನ ಸಂಸ್ಥೆ ಗುಲ್ಬರ್ಗಾ ವಿಶ್ವವಿದ್ಯಾಲಯ ಹಮ್ಮಿಕೊಂಡಿರುವ ಜಾನಪದ ಮತ್ತು ಜಾಗತೀಕರಣವೆಂಬ ವಿಚಾರ ಸಂಕೀರ್ಣದ ಎರಡನೇಯ ಗೋಷ್ಠಿಯ ಅಧ್ಯಕ್ಷತೆಯನ್ನು ವಹಿಸಿರುವ ಜಾನಪದ ಬುಡಕಟ್ಟು ತಜ್ಞರಾದ ಡಾ. ಡಿ. ಬಿ. ನಾಯಕ ಅವರೇ, ಪ್ರಬಂಧ ಮಂಡಿಸಿರುವ ಹಿರಿಯರಾದ ಡಾ. ಬಿ. ಎಸ್. ತಲ್ವಾಡಿಯವರೇ, ಗುರುಗಳಾದ ಡಾ. ಟಿ. ಎಂ. ಭಾಸ್ಕರ್ ಅವರೇ, ಸಂಪಾದಕ ಮಿತ್ರರಾದ ಡಾ. ಶಾಂತಪ್ಪ ಡಂಬಳ ಅವರೇ ಇಲ್ಲಿ ನೆರೆದ ಎಲ್ಲಾ ಆತ್ಮೀಯರೇ ನಮಸ್ಕಾರ.

ಮುಂಜಾನೆಯಿಂದ ಎಳ್ಳ ಅಮವಾಸ್ಯೆಯ ದಿನವಾದ ಇಂದು ಜಾನಪದ ಮತ್ತು ಜಾಗತೀಕರಣದ ಕುರಿತು ಚರ್ಚೆ ನಡೆಯುತ್ತಲಿದೆ. ಈಗಾಗಲೇ ಸ್ಪಷ್ಟ ಅಭಿಪ್ರಾಯವನ್ನು ನಾಡಿನ ಪ್ರಖ್ಯಾತ ಕಲಾವಿದರಾದ ಶ್ರೀ ಕೆರೆಮನೆ ಶಂಭು ಹೆಗಡೆ ಅವರು ಕೊಟ್ಟಿದ್ದಾರೆ. ಜಾನಪದ ವಿದ್ವಾಂಸರಾದ ಡಾ. ಎಂ. ಎಸ್. ಲಠ್ಠೆ ಅವರು ಅತಿಥಿಗಳಾಗಿ ಹೊರಗಿದ್ದನ್ನು ಪಡೆದುಕೊಳ್ಳುತ್ತಾ ನಮ್ಮತನ ಉಳಿಸಿಕೊಂಡು ಬರಬೇಕೆಂದು ಹೇಳಿದ್ದಾರೆ. ಕೆರೆಮನೆ ಶಂಭು ಹೆಗಡೆ ಅವರು ನಮ್ಮ ಸಂಸ್ಕೃತಿ ಅಳಿಯುವುದಿಲ್ಲ ಮನಸ್ಸಿದ್ದರೆ ಸಾಕು. ಜಾಗತೀಕರಣ ಬಂದರೇನು ಬಿಟ್ಟರೇನು ಆ ಸಂಸ್ಕೃತಿ ಹಾಗೇ ಇರುತ್ತದೆಂದರು. ಡಾ. ವ್ಹಿ. ಜಿ. ಪೂಜಾರ ರವರು ಪ್ರಾಸ್ತಾವಿಕವಾಗಿ ಮಾತನಾಡುತ್ತಾ ಜಾನಪದ ಜಾಗತೀಕರಣದ ಅಂಚಿನ ಅಪಾಯದಲ್ಲಿದ್ದರೂ ತನ್ನ ಶ್ರೀಮಂತಿಕೆ ಕಾಪಾಡಿಕೊಂಡಿದೆಯೆಂದರೆ ಅದು ಅಳಿದು ಹೋಗುವುದಿಲ್ಲವೆಂದಿದ್ದಾರೆ. ಡಾ. ಜಿ. ಆರ್. ತಿಪ್ಪೇಸ್ವಾಮಿ ಅವರು ಸಹಿತ ಇಂದಿನ ಆಧುನಿಕ ಅಬ್ಬರದಲ್ಲೂ ಕೂಡಾ ಮೂಲ ನೆಲೆ ಕುಸಿಯುತ್ತಿವೆ. ಆದರೂ, ಪ್ರದರ್ಶನ ಕಲೆಗಳು ಉಳಿಯುತ್ತವೆಂದಿದ್ದಾರೆ. ಪ್ರಖ್ಯಾತ ಜಾನಪದ ತಜ್ಞರಾದ ಡಾ. ವೀರಣ್ಣ ದಂಡೆ ಅವರು ಸಹಿತ ಕಲೆ ಕಲಾವಿದರನ್ನು ಬೆಳಕಿಗೆ ತರಬೇಕಾಗಿದೆ. ಪ್ರದರ್ಶನ ಕಲೆ ಜೀವಂತವಾಗಿರಲಿಕ್ಕೆ ಈ ಜನರ ಪ್ರೇಮ ಕಾರಣವೆಂದಿದ್ದಾರೆ. ಡಾ. ಬಿ. ಎಸ್. ತಲ್ವಾಡಿ ಅವರು ಕರಕುಶಲ ಕಲೆಗಳನ್ನು ಆಯಾ ವರ್ಗ ಮುಂದುವರಿಸಿಕೊಂಡು ಬರಬೇಕೆಂದು

ಹೇಳಿ ಜಾಗತೀಕರಣ ಆ ಮೂಲಕ ತಪ್ಪಿಸಬೇಕೆಂದಿದ್ದಾರೆ. ಡಾ. ಟಿ. ಎಂ. ಭಾಸ್ಕರ್ ಅವರು ಅಲೆಮಾರಿಗಳು ಸಂಕಷ್ಟ ಸ್ಥಿತಿಯಲ್ಲಿದ್ದಾರೆ. ಹಿಂದೆ–ಈಗ–ಮುಂದೆಯೂ ಹಾಗೇ ಇರುವಾಗ ಜಾಗತೀಕರಣ ಪರಿಣಾಮ ಬೀರದೆಂದರು.

ಈ ಎಲ್ಲಾ ವಿದ್ವಾಂಸರು ತಮ್ಮ ತಮ್ಮ ಕ್ಷೇತ್ರದಲ್ಲಿ ಕೆಲಸ ನಿರ್ವಹಿಸಿಕೊಂಡು ಬಂದು ಆ ಮೂಲ ತಮ್ಮ ಅನುಭವಗಳನ್ನು ಹಂಚಿಕೊಂಡಿದ್ದಾರೆ. ಜನಪದ ಸಾಹಿತ್ಯಕ್ಕೆ ಮೂಲವಾಗಿದೆ. ಶಿಷ್ಟ ಸಾಹಿತ್ಯಕ್ಕೆ ತಾಯಿ ಬೇರಾಗಿದೆ. ಇಂತಹ ಹೊತ್ತಿನಲ್ಲೂ ಕೂಡಾ ಜಾಗತೀಕರಣವೆನ್ನುವುದು ಈ ದೇಶದ ಏಕೆ ವಿಶ್ವದಾದ್ಯಂತ ಒಳ ಹೊಕ್ಕೂ ಬಿಟ್ಟಿದೆ. ಈ ಕಾರಣಕ್ಕಾಗಿ ನಾವು ಭಯ ಪಡಬೇಕಾಗಿಲ್ಲ. ದೆವ್ವಗಳು ನಮ್ಮ ದೇಶವನ್ನು ಬಿಟ್ಟು ಹೋಗುತ್ತವೆಂದು ಭಾರತ ಸ್ವಾತಂತ್ರ್ಯಕ್ಕಾಗಿ ಹೋರಾಡಿದೆವು. ಹೈದ್ರಾಬಾದ ಸಂಸ್ಥಾನದಿಂದ ಮುಕ್ತವಾಗಬೇಕೆಂದು ನಿಜಾಮರ ವಿರುದ್ಧ ವಿಮೋಚನೆ ಹೊಂದಿದೆವು. ಕರ್ನಾಟಕ ಹರಿದು ಹಂಚಿ ಹೋಗಿದೆ. ಅಖಂಡವಾಗಬೇಕೆಂದು ಏಕೀಕರಣಕ್ಕೆ ಪ್ರಯತ್ನಿಸಿ ಸಫಲತೆ ಹೊಂದಿದೆವು ಈ ನಾಡಿನ ಹೊರ ದೆವ್ವಗಳು ಹೊರ ಹೋಗಿವೆ. ಈ ನಾಡಿನ ಒಳ ದೆವ್ವಗಳು ಹೊರ ದೆವ್ವಗಳಿಗಿಂತ ಭಯಂಕರವಾಗಿವೆ. ಈ ಸಂಸ್ಕೃತಿ ನಾಡನ್ನು ಹದಗೆಡಿಸುತ್ತಿವೆ. ಈಗ ನಾವು ಯಾರನ್ನೂ ಕೇಳಬೇಕು ಎಂಬ ಪ್ರಶ್ನೆ ಎದುರಿಗಿದೆ. ಇಂತಹ ಹೊತ್ತಿನಲ್ಲಿ ಜಾಗತೀಕರಣ ಬಂದಿದೆ ಸತ್ಯ. ಆ ಜಾಗತೀಕರಣದ ಮುಂದೆ ಈ ಜಾಗತೀಕರಣವು ಹೆಸರಲ್ಲಿ, ಆಕಾರದಲ್ಲಿ, ಕಾಲದಲ್ಲಿ ಭಿನ್ನತೆಯಿದೆ ಹೊರತು ಸತ್ವದಲ್ಲಿ ಮಾತ್ರ ಒಂದೇ ಆಗಿದೆ. ಕಲಾವಿದರ ಬದುಕು ಅಂದಿಗೂ ಹೇಗೆ ಇತ್ತೋ ಇಂದಿಗೂ ಹಾಗೆ ಇದೆ. ಸ್ವಾತಂತ್ರ್ಯ ಎಲ್ಲಿಗೆ ಬಂತು ಯಾರಿಗೆ ಬಂತು ? ಕೆಳ ಸಮುದಾಯದ ಕೆಳ ವರ್ಗದ ಕಲೆಗಳು ಕಲಾವಿದರು ಅದೇ ಸ್ಥಿತಿಯಲ್ಲಿದ್ದಾರೆ. ನಮಗೆ ಕಲೆಗಳು ಬೇಕು ಕಲಾವಿದರೂ ಬೇಡವೆಂದರೆ ಇದರರ್ಥವೇನು ? ಹಾಡು, ಕುಣಿತ, ನೃತ್ಯ, ಸಂಗೀತ ಎಲ್ಲವನ್ನೂ ನಾವು ಆರಾಧಿಸುತ್ತೇವೆ, ಸಂತೋಷಗೊಳ್ಳುತ್ತೇವೆ. ಆದರೆ, ಕಲಾವಿದರ ಬಗ್ಗೆ ಮರುಕ ಹುಟ್ಟುತ್ತದೆಯೇ ? ಚಲನಶೀಲವಾದ ಸಂಸ್ಕೃತಿಯ ಗುಣವುಳ್ಳವನು ಸಾಂಸ್ಕೃತಿಕ ಪರಿಸರದಲ್ಲಿ ಯಾರು ಪ್ರತಿಭೆ ಹೊಂದಿದ್ದಾರೋ ನಿಜವಾದ ಕಲೆ ಅಡಗಿದ ಕಲಾವಿದರನ್ನು ಗೌರವಿಸಬೇಕು ಅದು ಬಿಟ್ಟು ಅವರ ಜಾತಿಯನ್ನಲ್ಲ.

ಒಂದು ಸಮುದಾಯದ ವರ್ಗ ಅದೇ ಕೆಲಸ ನಿರ್ವಹಿಸಿಕೊಂಡು ಬರಬೇಕೆಂದು ತಲ್ವಾಡಿ ಅವರು ಹೇಳುತ್ತಾರೆ, ಭಾಸ್ಕರ್ ಅವರು ಜಾಗತೀಕರಣ ಬಂದರೂ ಹಾಗೇ ಹೀಗೆ ಇರುತ್ತೇವೆನ್ನುತ್ತಾರೆ. ಹೀಗಿದ್ದಾಗ ದಂಡೆ ಅವರು ಕಲಾವಿದರ ವೃತ್ತಿ ಕಲೆ ಆಗಬಾರದು. ಬೇರೆ ದುಡಿಮೆ ವೃತ್ತಿ ಕೈಗೊಂಡು ಹವ್ಯಾಸಕ್ಕೆ ಈ ಕಲೆ ಇರಲಿ ಎಂದಿದ್ದಾರೆ. ಇವರೆಲ್ಲರ ಮಾತುಗಳು ಕೂಡಾ ದ್ವಂದ್ವದಲ್ಲಿ ಕೂಡಿದೆ. ಕಲಾವಿದ ಹಲಗೆ ಬಡಿಯುವವನು ಹಲಗೆ ಬಡಿಯಬೇಕು, ಕಲ್ಲು ಒಡೆಯುವವ ಕಲ್ಲೇ ಒಡೆಯಬೇಕು, ಕುಣಿ ತೆಗೆಯುವವ ಕುಣಿ

ತೆಗೆಯಬೇಕು, ಚಪ್ಪಲಿ ಹೊಲಿಯುವವ ಚಪ್ಪಲಿ ಹೊಲಿಯಬೇಕು, ಡೊಳ್ಳು ಬಾರಿಸುವವ ಡೊಳ್ಳೇ ಬಾರಿಸಬೇಕು, ಸುಡುಗಾಡು ಕಾಯುವವ ಸುಡುಗಾಡೇ ಕಾಯಬೇಕು ಎಂದರೆ ಶ್ರಮ ಸಂಸ್ಕೃತಿಯನ್ನು ಹೊಂದಿದ ಸಮುದಾಯ ದಿನಂಪ್ರತಿ ದುಡಿಯುತ್ತಾ ಜೀವನ ಕಳೆಯಬೇಕಾದ ಹೀನಾಯ ಸ್ಥಿತಿ ಉಂಟಾಗುತ್ತದೆ. ಹೊಟ್ಟೆಗೆ ಅದರಿಂದ ತೃಪ್ತಿ ಹೊಂದುವುದೇ ಅನ್ನುವುದಾದರೆ ಇಲ್ಲ, ಅರೆ ಹೊಟ್ಟೆಯು ಭಿಕಾರಿಯಾಗಿ ಹುಚ್ಚನಾಗಿ ಅಲಿಯಬೇಕು. ಆಗ ಅವನ ಕಲೆ ಅಲ್ಲಿಯೇ ಮಣ್ಣು ಪಾಲಾಗುತ್ತದೆ. ಆರ್ಥಿಕ ಅಸಮತೋಲನದಿಂದಾಗಿ ಮತ್ತೆ ಅದೇ ಸ್ಥಿತಿಯಲ್ಲಿರಬೇಕಾದ ಸನ್ನಿವೇಶ ಉಂಟಾಗುತ್ತದೆ. ಈ ಶ್ರಮ ಸಮುದಾಯಗಳ ಕಲಾವಿದರು ಹಾಗೇ ನಿರಂತರ ದುಡಿದು ತನ್ನ ವಂಶವೂ ಕೂಡಾ ಇದೇ ವೃತ್ತಿ ಆರಿಸಿಕೊಂಡರೆ ಬಡತನದ ಬೇಗೆಯಲ್ಲಿ ಕಾಲ ನೂಕಬೇಕಾಗಿದೆ. ಶ್ರಮ ಸಂಸ್ಕೃತಿಯಿಲ್ಲದ ಸಮುದಾಯ ವರ್ಗಗಳು ಈ ಕೆಲಸ ವೃತ್ತಿ ಕೈಗೊಳ್ಳಬಾರದೇಕೆ ? ಅವರಲ್ಲೂ ಬಡತನವೂ ಇದೆ. ಅವರೇ ಏಕೆ  ಮಾಡಬೇಕು ? ನಮ್ಮ ಮಕ್ಕಳನ್ನು ಆ ಕೆಲಸಕ್ಕೆ ಹಚ್ಚುವುದಕ್ಕೆ ಮುಂದೆ ಬರುತ್ತೇವೆಯೇ ಇಲ್ಲ.

ಕರಕುಶಲ ಕಲೆಗಳಲ್ಲಿ ತೊಡಗಿಕೊಂಡ ಜನಪದರು ಅದೇ ಉದ್ಯೋಗದಲ್ಲಿ ವೃತ್ತಿ ನಿರತರಾದರೆ, ಅವರಿಗೆ ದೊರೆಯುವ ಮೊತ್ತವಾದರೂ ದುಡಿಯಬೇಕು. ಮತ್ತೇ ಕಲೆಗಳ ಮೂಲಕ ಸಂತಸಗೊಳಿಸಬೇಕೆಂದರೆ ಹೇಗೆ ಇಂತಹ ಅನೇಕ ಸಂಕಷ್ಟಗಳ ಮಧ್ಯದಲ್ಲಿ ಸಂಘರ್ಷಮಯವಾದ ಹೋರಾಟ ಜೀವನ ನಡೆಸಬೇಕಾಗಿದೆ. ಅವರ ಕರಕುಶಲ ಕಲೆಗಳನ್ನು ಉಳಿಸಿಕೊಂಡು ಬರಬೇಕಾದರೆ, ಅವರಿಗೆ ಪ್ರೋತ್ಸಾಹ ಮಾರ್ಗದರ್ಶನ ಹಾಗೂ ತರಬೇತಿ ಅವಶ್ಯವಾಗಿರಬೇಕು. ನಾವೆಲ್ಲ ಬೆನ್ನೆಲುಬಾಗಿ ನಿಂತಾಗ ಮಾತ್ರ ಸಾಧ್ಯವಾಗುತ್ತದೆ.

ಇಂದಿನ ನಾಗರಿಕತೆ, ಸಂಸ್ಕೃತಿ ಕಾಲಗಳು ಬದಲಾದಂತೆ ಸಂಸ್ಕೃತಿ, ಕಲೆಗಳು ಬದಲಾವಣೆಗೊಳ್ಳುತ್ತವೆ. ಬದಲಾಗಬೇಕಾದ ಅನಿವಾರ್ಯತೆಯಿದೆ. ಇಂದಿನ ಬುಡಕಟ್ಟು ಜನಾಂಗಕ್ಕೆ ಸೇರಿದ ಲಂಬಾಣಿಗರು ಲಂಬಾಣಿ ಸಂಸ್ಕೃತಿಯನ್ನು ಕಾಪಾಡಿಕೊಂಡು ಬಂದಿದ್ದಾರೆ. ಲಂಬಾಣಿ ಜನಾಂಗದ ಕಲೆಗಳು ಇಂದಿನ ಅವಶ್ಯಕತೆಗೆ ತಕ್ಕಂತೆ ಹೊಂದಾಣಿಕೆಯಾಗಿ ಪರಿಷ್ಕೃತಗೊಳ್ಳಬೇಕಾಗಿದೆ. ಮನುಷ್ಯನ ನಡವಳಿಕೆ ರೀತಿ ಬದಲಾದಂತೆ ಆತನ ಕಲೆ ಬದಲಾಗಬೇಕಾದ ಅನಿವಾರ್ಯತೆಯಿದೆ. ಯಕ್ಷಗಾನ ಕಲೆ ಅಂತರಾಷ್ಟ್ರೀಯ ಮಟ್ಟದಲ್ಲಿ ಪ್ರದರ್ಶನಗೊಳ್ಳುತ್ತಲಿದೆ ಅವರು ಮಾಡಿಕೊಂಡ ಮಾರ್ಪಾಡುಗಳಂತೆ ಬಯಲಾಟ ಹಾಗೂ ಪ್ರದರ್ಶನ ಕಲೆಗಳು ಕೂಡಾ ನಮ್ಮಲ್ಲಿ ಬರಬೇಕಾಗಿದೆ. ಅಲೆಮಾರಿಗಳು, ನಗಣ್ಯರು, ಅನಾಥರು, ಅನುತ್ಪಾದಕರು, ಅಸಂಘಟಿತರು, ಅನ್ಯ ಭಾಷಿಕರು ಆಗಿರುವುದರಿಂದ ಸಹಜವಾಗಿ ದೂರವುಳಿದಿದ್ದಾರೆ. ಬುಡ ಬುಡಿಕೆಯರು, ಸುಡುಗಾಡು ಸಿದ್ಧರು, ಕುಂಚಿಕೊರವರು, ವೇಷಗಾರರು, ಕುರುಮಾಗಳು, ಗೊಂಡರು, ಲಂಬಾಣಿಗರು

ಮುಂತಾದ ಅಲೆಮಾರಿಗಳು ತಮ್ಮ ಜೀವನ ಸಾಗಿಸಬೇಕಾಗಿದೆ.

ಇವತ್ತಿನ ಜಾಗತೀಕರಣದ ಹೊತ್ತಿನಲ್ಲೂ ಕೂಡಾ ಜಾನಪದ ಅಳಿಯುತ್ತದೆಂಬ ಆತಂಕವಿದೆ. ಭಯಪಡಬೇಕಾದ ಅಗತ್ಯವಿಲ್ಲದಿದ್ದರೂ ಕೂಡಾ ಸಾಂಸ್ಕೃತಿಕ ದಾಳಿಯನ್ನು ಇಟ್ಟು ವಿಷವನ್ನು ಉಗುಳುವ ಹೊತ್ತಿನಲ್ಲಿ ನಮಗೆ ಅರಿವಾಗುತ್ತದೆ. ಕಲಾವಿದರನ್ನು ಗೌರವಿಸಬೇಕಾಗಿದೆ. ಅವರಿಗೆ ಅವರ ಕಲೆಗಳಿಗೆ ನೆರವು ದೊರೆಯಬೇಕು. ಆಯಾ ತಾಲೂಕು, ಜಿಲ್ಲೆ, ವಿಭಾಗ, ರಾಜ್ಯ ಮಟ್ಟದಲ್ಲಿ ಮೇಲಿಂದ ಮೇಲೆ ಚರ್ಚೆ ಮಾಡಬೇಕು. ಸಮಸ್ಯೆ ಸವಾಲುಗಳನ್ನು ಅರಿತುಕೊಳ್ಳಬೇಕು. ಅವರ ಸ್ಥಿತಿ-ಗತಿಗಳ ಕುರಿತು ಚಿಂತನೆ ಮಂಥನ ಆಗಬೇಕಾದದ್ದು ತುರ್ತಾಗಿದೆ. ಕನ್ನಡದ ಬಹು ಸಂಖ್ಯಾತ ಬಹು ಸಂಸ್ಕೃತಿ ಹೊಂದಿದ ಕಲಾವಿದರಿದ್ದಾರೆ. ಬಹುಮುಖಿ ನೆಲೆಗಳಲ್ಲಿ ಆಲೋಚಿಸುವ ಕಲಾವಿದರು-ಕಲೆಗಳು ಇವೆ. ಇಂದಿನ ಅನೇಕ ವಿಚಾರ ಸಂಕಿರಣಗಳನ್ನು ಮಾಡುತ್ತೇವೆ. ನಾವು ಯಾರಿಗೆ ಹೇಳಬೇಕಾಗಿದೆ ಅವರಿಗೆ ತಲುಪುತ್ತಿಲ್ಲ. ತಲುಪಿದರೂ, ಅರ್ಥೈಸಿಕೊಳ್ಳಲಾರ ಅನಕ್ಷರಸ್ಥರಾಗಿದ್ದಾರೆ. ಅವರಿಗೂ ಅವರ ಸಮುದಾಯಗಳಿಗೆ ಶಿಕ್ಷಣ ಸೌಲಭ್ಯ ಒದಗಿಸಬೇಕು. ನಾವು ಹೇಳುವ-ಮಾಡುವ ಕಾರ್ಯದಲ್ಲೂ ಸಹಿತ ಕಲಾವಿದರನ್ನು ಗಣನೆಗೆ ತೆಗೆದುಕೊಳ್ಳುತ್ತಿಲ್ಲ. ವಿದ್ವಾಂಸರ ಗಮನದಲ್ಲಿಟ್ಟುಕೊಂಡು ಮಣೆ ಹಾಕುತ್ತೇವೆ. ಆದರೆ, ಇಂದು ಹಾಗಾಗಿಲ್ಲ ಜನಪದ-ವೃತ್ತಿ-ಹವ್ಯಾಸಿ ರಂಗಭೂಮಿಯ ಕಲಾವಿದರನ್ನು ಸಂಚಾಲಕ ಸದಸ್ಯರಾದ ಗವೀಶ್ ಹಿರೇಮಠರು ಕಲೆ ಹಾಕಿದ್ದಾರೆ, ಅವರಿಗೆ ಸತ್ಕರಿಸಿದ್ದಾರೆ. ಇದೊಂದು ಮಹತ್ವದ ಸಾಧನೆಯೆಂದು ಭಾವಿಸಬೇಕಾಗಿದೆ. ಈ ರೀತಿ ಕಲಾವಿದರು-ಕಲೆಗಳು-ವಿನ್ವಾಸರ ವಿಚಾರ ಧಾರೆಗಳು ಮುಖಾಮುಖಿಯಾಗಬೇಕು ಅಂದಾಗ ವಿಚಾರ ಸಂಕೀರ್ಣಗಳು ಅರ್ಥಪೂರ್ಣತೆ ಹೊಂದಲು ಸಾಧ್ಯವಾಗುತ್ತದೆ.

ಆ ಹಿನ್ನೆಲೆಯಲ್ಲಿ ಜಾನಪದ ಭಯಾನಕವಾದ ವಾತಾವರಣ ಸೃಷ್ಟಿಯಲ್ಲಿ ಬಹುಮುಖಿ ಸಂಸ್ಕೃತಿ ಅನನ್ಯತೆಗಳ ಮಧ್ಯದಲ್ಲೂ ಜಾನಪದ ಉಳಿದುಕೊಂಡು ಬೆಳೆದುಕೊಂಡು ಬರುತ್ತದೆಯೆಂದು ನಾನು ಭಾವಿಸಿದ್ದೇನೆ.

❖

# ಜಾನಪದ ಮತ್ತು ಜಾಗತೀಕರಣ

ಹನುಮಂತರಾವ್. ಬಿ. ದೊಡ್ಡಮನಿ

◆

ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು ಅವರು ಹಮ್ಮಿಕೊಂಡಿರುವ ವಿಚಾರ ಸಂಕಿರಣವು ಬಹು ಮಹತ್ವ ಪಡೆದಿದೆ ಎನ್ನುವುದರಲ್ಲಿ ಸಂದೇಹವೇ ಇಲ್ಲ. ಇಂಥ ಹೊಸ ಹೊಸ ವಿಷಯಗಳ ವಿಚಾರಗಳನ್ನು ಕುರಿತು ಹೊಸ ನೆಲೆ–ಬೆಲೆಗಳನ್ನು ಗುರುತಿಸುವುದು ಸೂಕ್ತ. ಜನಪದ ಪ್ರದರ್ಶನ ಕಲೆಗಳು ಮತ್ತು ಜಾಗತೀಕರಣ ವಿಷಯ ಕುರಿತು ಅಧ್ಯಯನ ಮಾಡುವಾಗ ಜಾನಪದ ಶಬ್ದೋತ್ಪತ್ತಿಯ ಸಂಕ್ಷೇಪ್ತ ವಿವರಣೆ ನೀಡುವುದು ಸಮಂಜಸವಾಗಿದೆ. ಜಾನಪದ ಎಂಬ ಪದಕ್ಕೆ ಇಂಗ್ಲೀಷಿನ ಸಂವಾದಿ ಪದವನ್ನು ಅಮೇರಿಕೆಯ 'ದಿ ಅಥೆನ್ಸ್' ಎಂಬ ಪತ್ರಿಕೆಯಲ್ಲಿ ೧೮೪೬ ರಲ್ಲಿ ವಿಲಿಯಂ ಜಾನ್ ಥಾಮ್ಸ್ ಎಂಬುವವರು Folk Lore ಶಬ್ದವನ್ನು ಮೊಟ್ಟ ಮೊದಲು ಬಳಕೆಗೆ ತಂದರು. ಇದಕ್ಕಿಂತ ಮುಂದೆ ಪಾಶ್ಚಾತ್ಯರು ಇದಕ್ಕೆ Popular Antiquites (ಜನಪ್ರಿಯ ಪ್ರಾಚೀನ ನಡಾವಳಿಕೆಗಳು) ಎಂದು ಕರೆಯುತ್ತಿದ್ದರು.

Folk=ಜನಪದ In=ಜ್ಞಾನ, ತಿಳುವಳಿಕೆ, ಕಲಿಕೆ ಎಂದರ್ಥ. ಡಾ॥ ಸೋಮಶೇಖರ ಇಮ್ರಾಪುರ ಅವರು ೧೯೭೭ರಲ್ಲಿ ಹೀಗೆ ಹೇಳಿದ್ದಾರೆ. "ಸಮಾಜವೆಂದು ಹೇಳಿಕೊಳ್ಳುವ ಕಾರ್ಖಾನೆಯಲ್ಲಿ ಕಲೆ, ಸಾಹಿತ್ಯ, ಇತಿಹಾಸ, ಅರ್ಥಶಾಸ್ತ್ರ ಮುಂತಾದವುಗಳೆಲ್ಲವು ಹುಟ್ಟನ್ನು ಪಡೆಯುತ್ತಾವೆಂದಿದ್ದಾರೆ.

ಡಾ॥ ಬಸವರಾಜ ಪೋಲೀಸ ಪಾಟೀಲ ಅವರು "ಕಣ್ಣಿಗೆ ಕಾಣುವ ಪ್ರತಿ ವಸ್ತುವಿನಲ್ಲಿಯೂ ಒಂದು ಕಲೆ ಅಡಕವಾಗಿದೆ. ಅದು ತನ್ನದೇ ಆದ ವಿಶಿಷ್ಟ ರೂಪ ತಳೆದು ನಿಂತಿದೆ. ಕಲಾಕಾರನ ಸೃಜನಶೀಲತೆ ಪ್ರತಿಭೆಯೂ ಅದರಲ್ಲಿ ತುಂಬಿಕೊಂಡಿರುತ್ತದೆ" ಎಂದಿದ್ದಾರೆ.

ಡಾ॥ ಮೃತ್ಯುಂಜಯ ಹೊರಕೇರಿಯವರು "ಕಲೆ ಎಂಬ ಶಬ್ದಕ್ಕೆ ಖಚಿತ ಅರ್ಥವನ್ನು ನೀಡಲು ಸಾಧ್ಯವಿಲ್ಲ. ಯಾಕೆಂದರೆ, ಅದು ವಿಶ್ವವ್ಯಾಪಿ ಸ್ವರೂಪವನ್ನು ಪಡೆದಿದೆ"ಯೆಂದಿದ್ದಾರೆ.

"ಮಾನವ ತನ್ನ ಭಾವನೆಗಳನ್ನು ಹಲವು ಮಾಧ್ಯಮಗಳ ಮೂಲಕ ತೋಡಿಕೊಳ್ಳುವ ಸೃಷ್ಟಿ ಕಲೆಯ ರೂಪ ತಾಳಬಹುದು." ಎಂದು ಡಾ|| ಶಿವರಾಮ ಕಾರಂತರು ಅಭಿಪ್ರಾಯ ಪಡುತ್ತಾರೆ.

"ಜನಪದ ಕಲೆಗಳೆಂದರೆ, ಕೇವಲ ಬಣ್ಣವಲ್ಲ, ರೇಖೆಯಲ್ಲ, ಸುಣ್ಣದ ಕಲ್ಲುಗಳ ಬೊಟ್ಟುಗಳಲ್ಲ, ಧಾರ್ಮಿಕ ಸಂಪ್ರದಾಯಗಳು, ಪ್ರಕೃತಿಯ ಶಕ್ತಿ ಮೂಲಗಳು ಮನುಷ್ಯ ಸುಪ್ತ ಶಕ್ತಿಗಳು ಅಡಕಗೊಂಡಿರುವ ಸೌಂದರ್ಯ ತುಂಬಿರುವ ವೃತ್ತಿ ಮೂಲವಾಗಿರುವ ದೈನಂದಿನ ಬದುಕೇ ಆಗಿರುವ ಕಲೆ ಈ ಜನಪದ ಚಿತ್ರಕಲೆ. ಈ ಅರ್ಥದಲ್ಲಿ ಜನಪದ ಚಿತ್ರಕಲೆಯೆಂದರೆ, ಜನಪದ ಜೀವನದ ಅಧ್ಯಯನವೇ ಆಗಿದೆ." ಎಂದು ಡಾ|| ಎಸ್. ಸಿ. ಪಾಟೀಲರವರು ಅಭಿಪ್ರಾಯಿಸಿದ್ದಾರೆ.

ಕರಕುಶಲ ಕಲೆಗಳಿಂದ ಜನಪದರು ನೇಯ್ಗೆ ಮಾಡಿ ಅಂದವಾದ ವಸ್ತುಗಳನ್ನು ತಯಾರಿಸಿದ್ದಾರೆ. ಬಾಗಿಲು ಕಿಟಕಿಗಳಿಗೆ ಅಲಂಕರಿಸುವ ವಸ್ತುಗಳು ತಯಾರಿಸುವರು. ಹಚ್ಚೆ ಹಾಕುವುದು ಸ್ತ್ರೀಯರ ಕಲೆಗಳಾಗಿ ಕಂಡು ಬಂದರೆ, ಅಡಿಕೆಯಿಂದ ಹಿಡಿದು ದೊಡ್ಡಾಟದ ವೇಷ ಭೂಷಣಗಳವರೆಗೆ, ಹಗ್ಗ ಹೊಸೆಯುವುದರಿಂದ ಹಿಡಿದು ಕಂಬಳಿ ನೇಯುವವರೆಗೆ ಜನಪದರು ತಮ್ಮ ಕರಕುಶಲತೆ ಕಲೆಗಳಿಂದ ಮೆರೆದಿದ್ದಾರೆಂದರೆ ಅತಿಶಯೋಕ್ತಿಯಾಗಲಿಕ್ಕಿಲ್ಲ.

## ಬಟ್ಟೆ ಮೇಲಿನ ಕರಕುಶಲ ಕಲೆಗಳು :

ಬಟ್ಟೆ ಮೇಲಿನ ಕರಕುಶಲ ಕಲೆಗಳನ್ನು ನಾಲ್ಕು ವಿಧಗಳಿಂದ ಕಾಣುತ್ತೇವೆ. ೧. ನೇಯ್ಗೆ ೨. ಹೆಣಿಗೆ ೩. ಹೊಲಿಗೆ ಕ್ರಿಯೆ ೪. ಬಣ್ಣ ಬಣ್ಣದ ದಾರಗಳು. ತಾವೇ ನಿರ್ಮಿಸಿದ ಸಾಧನಗಳಿಂದ ಬಟ್ಟೆಯ ಮೇಲೆ ಚಿತ್ರಕಲೆ ಸೃಷ್ಟಿಸಿರುವುದನ್ನು ಕಾಣುತ್ತೇವೆ.

## ನೇಯ್ಗೆ ಚಿತ್ರ ಕರಕುಶಲ ಕಲೆ :

ಮಾನವನು ನಾರಿನಿಂದ ನೇಯ್ದ ಉಣ್ಣೆ, ಹತ್ತಿ, ರೇಷ್ಮೆ ಬಟ್ಟೆಗಳ ಉಡುಪುಗಳನ್ನು ತಯಾರಿಸಿಕೊಂಡನು. ಉದಾಹರಣೆಗೆ ಪೌರಾಣಿಕವಾಗಿ ಬಳ್ಳಾರಿ ಜಿಲ್ಲೆ ತೆಕ್ಕಲಕೋಟೆ ಉತ್ಖನನದಲ್ಲಿ ತೂತಿನ ಮಣ್ಣಿನ ತುಂಡುಗಳು ದೊರೆತಿದ್ದು ಅವು ನೂಲು ತೆಗೆಯುವ ತಕಲಿಗಳಾಗಿರಬಹುದೆಂದು ಗುರುತಿಸಲಾಗಿದೆ. ಭಾರತದ ಜವಳಿ ವಸ್ತುಗಳು ಜಗತ್ತಿನಲ್ಲಿಯೇ ಪ್ರಸಿದ್ಧಿ ಪಡೆದಿವೆ. ಅದರಲ್ಲೂ ಉತ್ತರ ಕನ್ನಡ ಜಿಲ್ಲೆಯ ಜವಳಿಯ ವಸ್ತುಗಳು ಪರಂಪರಾಗತ ಬಣ್ಣದ ಬಳಕೆ ಮತ್ತು ನಮೂನೆಯ ಚಿತ್ರ ವಿನ್ಯಾಸಗಳಿಂದ ಅಂತರ ರಾಷ್ಟ್ರೀಯ ಖ್ಯಾತಿಯನ್ನು ಪಡೆದಿದೆ. ಸೀರೆ ಕುಪ್ಪಸದ ಮೇಲೆ ನೇಯ್ದ ಚಿತ್ರಕಲೆಗೆ ನೂಲಿನಲ್ಲಿ ನೇಯ್ದ ವರ್ಣಮಯ ಕಾವ್ಯವೆಂದು ವರ್ಣಿಸಿದ್ದಾರೆ. ನೇಯ್ಗೆಯಿಂದ ತಯಾರಾದ ಇತರ

ವಸ್ತುಗಳೆಂದರೆ ಜರಿಪಟಗಾ, ರೇಷ್ಮೆ ಪಟಗಾ, ಕಡ್ಡಿ ಪಟಗಾ, ಜಮಖಾನೆ, ಗುಡಾರ, ಕಂಬಳಿಗಳಲ್ಲೂ ಚಿತ್ರಕಲೆ ಮೂಡಿ ಬಂದಿದೆ.

**ಸೀರೆಗಳು :**

ಕೈಮಗ್ಗದ ಬಟ್ಟೆಗಳು ಮೇಲು ನೋಟಕ್ಕೆ ಒರಟಾಗಿ ಕಂಡು ಬಂದರೂ ಅವುಗಳಲ್ಲಿಯ ವಿನ್ಯಾಸ ಕ್ರಮ ಬಣ್ಣಗಳ ಚಿತ್ತಾರಗಳು, ಹೆಚ್ಚು ಸೊಗಸಾಗಿ ಆಕರ್ಷಕವಾಗಿರುತ್ತಿದ್ದವು. ಅವುಗಳಲ್ಲಿರುವ ಸೀರೆಯ ಹೆಸರುಗಳಂತಿವೆ.

ಕಲಗಾ, ಪತ್ತಲು, ಹದಿನಾರು ಮಳದ ಸೀರೆ, ಆರು ಮಳದ ಸೀರೆ, ಅಂಚಿನ ಸೆರಗು, ತೆನೆತಿರುವಿದ ಸೆರಗು, ದಾಳಿಂಬರ ಕೆಂಪು, ಕಡುಗೆಂಪು, ಗಿಳಿ ಹಸಿರು, ನವಿಲು ಸೀರೆ, ಮೆಂದಿ ಬಣ್ಣದ ಸೀರೆ, ಹಸಿರು, ಕೆಂಪು, ಹಳದಿ, ಕರಿ ಚಂದ್ರಕಾಳಿ ಇವು ನೈಸರ್ಗಿಕ ಮೂಲದ ಬಣ್ಣಗಳು ಹೊಂದಿವೆ. ಪರಸಪೇಟ, ಗಾಡಿದಡಿ, ಸರಪಳಿದಡಿ, ಉಂಡಿದಡಿ, ಬದನಿದಡಿ, ಬುಗಡಿದಡಿ, ಮೆಂತಿ ಬೀಜದ ದಡಿ, ರುದ್ರಾಕ್ಷಿದಡಿ, ಪಟ್ಟೆದಂಚು, ಚಿಕ್ಕಿದಡಿ ಎಂಬ ನಮೂನೆಗಳು ಅಂಚಿನ ಸೀರೆಗಳಿದ್ದು ಅಂಚಿನಲ್ಲಿರುವ ವೈವಿಧ್ಯತೆ ಇರುವುದನ್ನು ಕಾಣುತ್ತೇವೆ.

ಸಕ್ಕರೆ ಸೀರೆ, ಕುಂಕುಮ ಗೆರೆ, ಗದ್ದಿಮಡಿ, ಮೆರವಣಿಗೆಸೀರಿ, ಚಾರಕಣ್ಣು, ಬ್ರಹ್ಮಾಂಡ, ಪಪ್ಪಳಿ, ಚದುರಂಗ, ಚಿಕ್ಕಕೊಂಡಿ ಚಿಕ್ಕಿ, ಚೌಕಳಿ, ಕೇರಪಪ್ಪಳಿ, ನಿಂಬಿ ಪಪ್ಪಳಿ, ಗುಬ್ಬಿಕಣ್ಣು, ನವಿಲು ಕಣ್ಣು ನಿಂದಾವಳಿ, ತೊಗರಿ ಕಣ್ಣು, ಎಳ್ಳು ಹೂವು, ಒಳಮೈ ತೋಪಿನ ಸೆರಗು, ಪಟ್ಟಿ ಸೆರಗು, ಲತಗುಣಿ ಸೆರಗು ಮುಂತಾದ ವಿನ್ಯಾಸಗಳಿವೆ. ಇಂಥ ಸಂಪ್ರದಾಯ ಬಣ್ಣಗಳಿಂದ ಕೈಮಗ್ಗದಲ್ಲಿ ತಮ್ಮ ಕರಕುಶತೆಯಿಂದ ಸೀರೆಗಳಲ್ಲಿ ನೇಕಾರರಲ್ಲಿ ಸುಂದರವಾದ ಕರಕುಶಲ ಕಲೆಯನ್ನು ಕಾಣುತ್ತೇವೆ.

**ಕುಪ್ಪಸಗಳು :**

ಬಾಗಲಕೋಟೆ ಜಿಲ್ಲೆಯ ಹುನಗುಂದ ತಾಲೂಕಿನ ಇಲಕಲ್ಲ ಸೀರೆಗೆ ಹೆಸರಾದರೆ, ಗುಳೇದಗುಡ್ಡ ಕುಪ್ಪಸಕ್ಕೆ ಹೆಸರಾಗಿದೆ. ತೋಳಿನದಡಿಗೆ ಹೆಚ್ಚಿನ ಪ್ರಾಶಸ್ತ್ಯವಿದೆ. ಆನೆ, ಒಂಟೆ, ಗಿಳಿ ಹೂವು, ಚಿಕ್ಕಿ, ತೇರು, ತೆನಿ ಇತ್ಯಾದಿ ಚಿತ್ರಗಳ ಸಾಲುಗಳು ಪಟ್ಟಿಯನ್ನು ತೋಳಿನ ಭಾಗದಲ್ಲಿ ನೇಯಲ್ಪಟ್ಟಿರುತ್ತಾರೆ. ಕೊಪ್ಪಳ ಜಿಲ್ಲೆಯ ಕಿನ್ನಾಳ ಸೀರೆ, ಕುಪ್ಪಸಗಳು ಪ್ರಸಿದ್ಧವಾಗಿವೆ.

**ಹಾಸಿಗೆಗಳು :**

ಜಮಖಾನೆ, ಚ್ಯಾದರ, ಗುಡಾರಗಳು ನೇಯ್ಗೆಯಿಂದಲೇ ತಯಾರಾಗುತ್ತವೆ. ಬ್ಲಾಂಕೆಟ್, ಹಚ್ಚಡ ಇದಕ್ಕೆ ನವಲಗುಂದ ಹೆಸರಾಗಿದೆ. ಪಗಡಿ, ಅಟ್ಟೆ, ಚೌಪಟ, ಶತರಂಜ

ನಾಲ್ಕು ರೀತಿಯ ರೇಖಾ ವಿನ್ಯಾಸದ ಜಮಖಾನೆಗಳಿವೆ. ವಿವಿಧ ಬಣ್ಣಗಳ ಮಿಶ್ರಣದಿಂದ ಹೊಳಪು ಬರುವಂತೆ ಮಾಡುವಲ್ಲಿ ನವಲಗುಂದದ ಕುಶಲಕರ್ಮಿಗಳು ಪ್ರವೀಣರು. ಈ ನೇಯ್ಗೆ ಕಲೆ ಗೊಂಡ್ಯಾದ ತುಂಡು ನೂಲನ್ನು ಬಳಸಿ ಮಹಾಲಿಂಗಪುರದಲ್ಲಿಯೂ ಪ್ರಸಿದ್ಧವಾದ ಜಮಖಾನೆ ತಯಾರಿಸುತ್ತಾರೆ.

**ಕಂಬಳಿ :**

ಈ ನೇಯ್ಗೆ ಬಹಳ ಪ್ರಾಚೀನವಾದುದು. ಕುರಿಯ ತುಪ್ಪಳ (ಕೂದಲ)ದಿಂದ ಕರಿಕಂಬಳಿ, ಬಿಳಿಕಂಬಳಿ, ಉಜ್ಜುಗಂಬಳಿ, ಪಟ್ಟಿಜ್ಯಾಡಿ (ಪಟ್ಟಿಕಂಬಳಿ), ನೆರಗ ಕಂಬಳಿಯೆಂಬ ಕಂಬಳಿಯ ನಮೂನೆಗಳಿವೆ.

**ಗುಡಾರ :**

ಗುಡಾರ ಎಂದಾಕ್ಷಣವೇ ನಮ್ಮ ಮುಂದೆ ಹೊಳೆಯುವ ಚಿತ್ರಣ ಬಹು ದೊಡ್ಡದಾದ ಹಾಸಿಗೆ. ಇದಕ್ಕೆ ಸಾಮೂಹಿಕ ಹಾಸಿಗೆ ಎನ್ನುತ್ತಾರೆ. ಚಕ್ಕಡಿ ಬಂಡಿಗೆ ಕಟ್ಟಲು, ರಾಶಿ ಮಾಡಲು, ಕಾಳು ಹರವಲು, ದವಸ ಧಾನ್ಯಗಳಿಗೆ ಹೊಚ್ಚಲು ಉಪಯೋಗಿಸುತ್ತಾರೆ.

**ಹೆಣಿಗೆ ಚಿತ್ರ :**

ಬಾಗಿಲು ತೋಳಿನ ಪರದೆ, ಸುಸ್ವಾಗತ ಪರದೆ, ಎದುರು-ಬದುರಾಗಿ ಹೂವು ಚೆಲ್ಲುವ ಚೆಲುವೆಯರ, ಮಕ್ಕಳ, ಆನೆಗಳ, ನವಿಲುಗಳ, ಗಿಳಿಗಳ, ಹುಲಿಗಳ, ಸಿಂಹಗಳ ಮತ್ತು ಕೈ ಚೀಲಗಳು ಆಕರ್ಷಣೀಯವಾಗಿ ಮುಂತಾದ ಚಿತ್ರಗಳನ್ನು ಹೆಣೆದಿರುತ್ತಾರೆ.

**ಲಂಬಾಣಿ ಕಲೆ :**

ಕಸೂತಿ ಕಲೆಗೆ ಹೆಸರಾದವರೆಂದರೆ, ಲಂಬಾಣಿ ಜನಾಂಗವಿದೆ. ಅವರು ಹೊದ್ದುಕೊಳ್ಳುವ ಉಡಾಣಿ ಸೆರಗಿನಿಂದ ಹಿಡಿದು, ಉಟ್ಟ ಲಂಗಾದ ಮೇಲೆ ಜೋಡಿಸಿರುವ ಕನ್ನಡಿ, ಒಂದು ನಯಪೈಸೆಯಿಂದ ಹಿಡಿದು ಐದು ರೂಪಾಯಿಯ ಗಟ್ಟಿ ಬಂದಿಗಳಿಂದ ತಯಾರಿಸಿದ ಕಸೂತಿ ಕಲೆಯೂ ಎಂಥವರನ್ನು ಬೆರಗುಗೊಳಿಸುವಂಥ ಕಲೆ ಇದಾಗಿದೆ.

**ಹೊಲಿಗೆ ಕಲೆ :**

ಕೌದಿ, ನಂದಿ, ಗಲ್ಲೀಪ ಪಗಡಿ ಪಟ್ಟಿ, ಮಕ್ಕಳ ಕುಂಚಿಗಿ, ಕುಲಾಯಿ ಇತ್ಯಾದಿ ಹೊಲಿಗೆ ಕಲೆಗಳು ಕಾಣುತ್ತೇವೆ. ಜನಸಾಮಾನ್ಯರಿಂದ, ಜನಸಾಮಾನ್ಯರಿಗಾಗಿ, ಜನಸಾಮಾನ್ಯರಿಗೋಸ್ಕರವಾಗಿ ಅನುಭವದ ಅಮೃತ ತುಂಬಿರುವುದೇ ಜಾನಪದವಾಗಿದೆ. ಇದು ಜನಪದರಿಗೆ ಅನುಭವದ ಅಮೃತವಾದರೆ, ಬಂಡವಾಳಶಾಹಿಗಳಿಗೆ ಮನೋರಂಜನೆಯು ಕಲೆಯಾಗಿದೆ. ೨೦ನೇ ಶತಮಾನದಲ್ಲಿ ಕೊನೆಗೊಂಡ

ವಸಾಹತೀಕರಣವು ೨೧ನೇ ಶತಮಾನಕ್ಕೆ ಕೊಟ್ಟಿರುವ ಕೊಡುಗೆಯೇ ಜಾಗತೀಕರಣ. ವಸಾಹತೀಕರಣ ಮತ್ತು ಜಾಗತೀಕರಣ ಎರಡೂ ಒಂದೇ ನಾಣ್ಯದ ಮುಖಗಳಂತಿವೆ.

ಜಾಗತೀಕರಣದವೆಂದರೆ, ಅಮೇರಿಕನ್ ಭಾಷೆ ಮತ್ತು ಅಮೇರಿಕನ್ ಜೀವನ ಶೈಲಿಯನ್ನು ಜಾಗತಿಕಗೊಳಿಸುವುದು ಎಂದರ್ಥ. ಜಾಗತಿಕ ಏಕರೂಪ ಸಂಸ್ಕೃತಿಯ ಭಾಗವಾಗಿರುವ ಪ್ರತಿಯೊಂದು ವಸ್ತು ವಿಷಯಗಳನ್ನು ಜಾಗತೀಕರಣವು ಸರಕೀಕರಣಗೊಳಿಸಿ ಬಿಡುತ್ತದೆ. ಇದಕ್ಕೆ ಸ್ಥಳೀಯ ಪ್ರಭುತ್ವಗಳ ಬೆಂಬಲವು ಇರುತ್ತದೆ.

೧. ಜಾನಪದ ಸಂಸ್ಕೃತಿಯ ಭಾಗವಾಗಿರುವ ಕನ್ನಡಗಳ ಎದುರಿನ ಕಾನ್ವೆಂಟ್ ಇಂಗ್ಲೀಷಿನ ಅತೀ ಲಾಭದಾಯಕ ಸರಕಾಗಿ ಕಾಣುತ್ತದೆ.

೨. ನೆಲ-ಜಲ ಅನುಭವಗಳಿಂದಾಗಿ ಒಂದೊಂದು ಮನೆಯಲ್ಲೂ ವೈವಿಧ್ಯಮಯವಾಗಿರುವ ನಿಂಬೆ ಹಣ್ಣಿನ ಪಾನಕಗಳ ಎದುರಿನಲ್ಲಿ ಕೋಕಾಕೋಲಾ ಸುಪ್ರತಿಷ್ಠೆಯ ಸರಕಾಗಿದೆ.

೩. ಧರಣಿ ಮಂಡಲ ಮಧ್ಯದೊಳಗೆ ಮೆರೆವ ಕರ್ನಾಟಕ ದೇಶದ ಗೊಲ್ಲ ಗೌಡರ ಕೊಳಲುಗಳ ಎದುರಿನಲ್ಲಿ ಮಾಯ ಜಾಲಕ ಪಾಪ್ - ರ್‍ಯಾಪ್ ಸಂಗೀತಗಳು ಲಾಭ ತರುವಂಥ ಸರಕುಗಳಾಗಿವೆ.

೪. ಲಂಬಾಣಿ ಕಲೆಯು ಜಾಗತಿಕ ಮಟ್ಟದಲ್ಲಿ ಕಣ್ಮನಗಳ ಸೆಳೆತಕ್ಕೆ ಒಳ್ಳೆಯ ಕಲೆಯಾಗಿದೆ. ಕಲೆಯನ್ನು ಪ್ರೋತ್ಸಾಹಿಸುವವರು ಕಲಾವಿದರನ್ನು ಪ್ರೋತ್ಸಾಹಿಸದಿರುವುದು ವಿಷಾದನೀಯವಾಗಿದೆ. ಇಲ್ಲೆಲ್ಲ 'ಏಕತ್ವ'ದ ಹರಿಕಾರನಾದ ಜಾಗತೀಕರಣವು 'ಬಹುತೇಕ'ವೇ ಉಸಿರಾಗಿರುವ ಜಾನಪದವನ್ನು ಬಲಿ ಹಾಕುವ ಬಗೆಗಳನ್ನು ಸ್ವಾಧೀನ ಪಡಿಸಿಕೊಂಡು ಉದ್ಯಮವನ್ನಾಗಿ ಪರಿವರ್ತಿಸಿಕೊಳ್ಳುವುದು ಗಿಡಮೂಲಿಕೆಗಳ ಪೇಟೆಂಟ್ ವಿಷಯದಲ್ಲಿ ಮನವರಿಕೆಯಾಗಿರುವ ಸಂಗತಿಯಾಗಿದೆ.

## ಯುಕ್ಷಗಾನ :

ಡಾ|| ಶಿವರಾಮ ಕಾರಂತರು ವಿಶ್ವಗ್ರಾಮಕ್ಕೆ ಯಕ್ಷಗಾನವನ್ನು ಕೊಂಡೊಯ್ದು ಕಾಣಿಕೆಯಾಗಿ ಮೆರೆಸಿದ್ದಾರೆ. ಕಾರಂತರ ಪ್ರಯೋಗಗಳಲ್ಲಿ ಯಕ್ಷಗಾನ ಜಾಗತೀಕರಣವನ್ನು ಗುರುತಿಸಿಬಹುದಾಗಿದೆ. ಯಕ್ಷಗಾನಕ್ಕೆ ವಾಚಕತ್ವವೇ ಬಂಡವಾಳ. ಆದರೆ, ನ್ಯೂಯಾರ್ಕ್ ದೇಶದಲ್ಲಿ ವಾಚಕ ಯಾರು ಕೇಳಬೇಕು. ಮಾತಿಲ್ಲದೇ ಯಕ್ಷಗಾನ ಪ್ರಯೋಗಗಳನ್ನು ನಡೆಸಿದ್ದಾರೆ.

## ವಚನ ಸಾಹಿತ್ಯ :

ಸ್ಥಳೀಯ ಭೂಗೋಳದಲ್ಲಿ ಇದು ಕನ್ನಡ ಸಂಸ್ಕೃತಿಯ ಹೆಡೆಮಣಿ. ವಿಶ್ವ ಗ್ರಾಮಕ್ಕೆ

ಇದನ್ನು ಪರಿಚಯಿಸಿದ ಎ. ಕೆ. ರಾಮಾನುಜನರ ವಚನ ಸಾಹಿತ್ಯವನ್ನು ಒಂದು ವಿಶಿಷ್ಟ ಕಾಣಿಕೆಯಾಗಿಸಿದ್ದಾರೆ. ಯಕ್ಷಗಾನವಾಗಲೀ, ವಚನ ಸಾಹಿತ್ಯ ಅಥವಾ ಜಾನಪದ ಸಾಹಿತ್ಯವಾಗಲೀ ಸರಕಾಗಬಾರದು. ಜಾಗತೀಕರಣದ ಕಪ್ಪು ನೆರಳು ಸರಕೀಕರಣ ಎಂಬುದನ್ನು ಮರೆಯುವಂತಿಲ್ಲ.

| ಜಾಗತೀಕರಣ ಮಾರ್ಗ | ಜಾನಪದ ಮಾರ್ಗ |
|---|---|
| ೧. ನಿರ್ಮೂಲನೆ | ೧. ಪುನರುತ್ಪಾದನೆ |
| ೨. ಪರಿಸರ ಮಾರಕ | ೨. ಪರಿಸರ ಸ್ನೇಹ |
| ೩. ಬಳಸು, ಬೀಸಾಡು | ೩. ಉಳಿಸು, ಬೆಳೆಸು |
| ೪. ಮನುಷ್ಯ ಕೇಂದ್ರಿತ | ೪. ಜೀವ ಕೇಂದ್ರಿತ |
| ೫. ಶೋಕ ಸ್ಥಂಭ | ೫. ಅಶೋಕ ಸ್ಥಂಭ |

ಜಾಗತೀಕರಣ ಮಾರ್ಗವು 'ಸಿದ್ಧ ವೈಚಾರೀಕತೆ' ಮತ್ತು 'ಪ್ರಧಾನ ವೈಚಾರಿಕತೆ'ಯ ಹರಿಕಾರವಾಗಿದೆ. ಜಾನಪದ ಮಾರ್ಗವು ಸಿದ್ಧ ವೈಚಾರಿಕತೆ ಮತ್ತು ಪ್ರಧಾನ ವೈಚಾರಿಕತೆಗಳ ಮಹಾ ವಿರೋಧಿಯಾಗಿದೆ.. ಜಾಗತೀಕರಣ ಬಂದ ಉದ್ದೇಶ ಸಾಧನೆಯ ನಿರ್ದಿಷ್ಟ ಆಲೋಚನೆ ಅಥವಾ ಕ್ರಿಯೆಗಳ ಮೊತ್ತ ಎನಿಸಿಕೊಳ್ಳುತ್ತದೆ. ಜಾನಪದ ಮಾರ್ಗವು ಜೀವನಾನುಭವಗಳ ಮಂಥನದಿಂದು ಮೂಡುವಂಥದ್ದು. ಬದುಕಿನ ಶೋಧನೆ ಇಲ್ಲಿ ಮುಖ್ಯ. ಜಾನಪದ ಮಾರ್ಗವು ಜೀವನ ವೈಚಾರಿಕತೆಯನ್ನು ಬಿಂಬಿಸುವ ವಿವೇಕ. ಆದ್ದರಿಂದಲೇ ಜಾಗತೀಕರಣವು ಅಲ್ಲಾವುದ್ದೀನನ ಅದ್ಭುತ ದೀಪದಂತೆ ಹೊರಗಿನ ವಿಲಾಸ, ಜಾನಪದ ಮಿಂಚು ಹುಳುಗಳ ತಂಪು ದೀಪದಂತೆ ಒಳಗಿನ ವಿಕಾಸವೆಂದು ಹೇಳುವುದು ಸ್ತುತ್ಯವಾಗಿದೆ.

❖

೧. ಡಾ॥ ಬಸವರಾಜ ಪೋಲೀಸ ಪಾಟೀಲ. "ಹೈದ್ರಾಬಾದ ಕರ್ನಾಟಕ ಜಾನಪದ ಸಾಹಿತ್ಯ" ೨೦೦೧, ಪು-೧೬.

೨. ಡಾ॥ ಮೃತ್ಯುಂಜಯ ಹೊರಕೇರಿ. "ಮಧುರ ಜಾನಪದ" ೨೦೦೫, ಪು-೫.



"ಜಾನಪದ ಮತ್ತು ಜಾಗತೀಕರಣ" ಕೃತಿ, ವಿಚಾರ ಸಂಕಿರಣದಲ್ಲಿ ಮಂಡಿಸಿದ ಪ್ರಬಂಧಗಳ ಸಂಕಲನವಾಗಿದೆ. ಕರ್ನಾಟಕ-ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಹಾಗೂ ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆ ಸಂಯುಕ್ತಾಶ್ರಯದಲ್ಲಿ ಈ ವಿಚಾರ ಸಂಕಿರಣವನ್ನೇರ್ಪಡಿಸಿದ್ದವು. ಇನ್ನೂ ಕೆಲವು ಪ್ರಬಂಧಗಳು ಈ ಸಂಕಲನದಲ್ಲಿ ಸೇರ್ಪಡೆಯಾಗ ಬೇಕಾಗಿತ್ತು. ಇಂತಹ ಒಂದು ಕೃತಿ ಬರಲು ಶ್ರೀ ಗವೀಶ ಹಿರೇಮಠರ ಒತ್ತಾಸೆಯೇ ಮುಖ್ಯ ಕಾರಣವಾಗಿದೆ.

"ಜಾಗತೀಕರಣ" ಇಂದಿನ ಚರ್ಚೆಯ ವಿಷಯವಾಗಿದೆ. ಜಾಗತೀಕರಣದ ಒತ್ತಡದಲ್ಲಿ ಜನಪದ ಕಲೆಗಳು ಬದುಕಿ ಉಳಿಯುವ ಬಗೆಗೆ ಕೆಲವು ಲೇಖಕರು ಸಂಶಯ ವ್ಯಕ್ತಪಡಿಸಿದ್ದಾರೆ. ಪ್ರದರ್ಶನ ಕಲೆಗಳು, ಕರಕುಶಲ ಕಲೆಗಳನ್ನು ಕುರಿತಂತೆ ಇಲ್ಲಿ ಲೇಖನಗಳಿವೆ. ಜಾಗತೀಕರಣದ ಭಯ ಇರುವುದು ಸತ್ಯ. ಆದರೆ ಜಾನಪದ ಇದೆಲ್ಲವನ್ನೂ ಜೀರ್ಣಿಸಿಕೊಂಡು ಬೆಳೆಯುವ ಶಕ್ತಿ ಸಾಧ್ಯತೆ ಹೊಂದಿದೆ. ಜಾಗತೀಕರಣದ ತುರ್ತಿನಲ್ಲಿ ಜಾನಪದ ಹೊಸ ರೂಪಗಳಲ್ಲಿ ಕಾಣಿಸಿಕೊಳ್ಳತೊಡಗಿದೆ. ಜನಪದ ಕಲೆಯೇ ಅಲ್ಲ, ಕಾವ್ಯವೇ ಅಲ್ಲವೆಂಬ ಕಾಲವಿತ್ತು. ಆಗ ಅದಕ್ಕಾಗಿ ಹೋರಾಟ ಪ್ರಾರಂಭವಾಯಿತು. ಹಲಸಂಗಿ ಗೆಳೆಯರ ಗುಂಪು ಹಾಗೂ ನಾಡಿನ ಜನಪದ ಕಲಾವಿದರು - ವಿದ್ವಾಂಸರು ಸೃಜನಶೀಲತೆಯ ಮೂಲಕ ಉತ್ತರ ನೀಡಿದರು. ಜಾನಪದದಲ್ಲಿ ಏನೆಲ್ಲಾ ಇದೆಯೆಂದು ನಂಬಿಕೆ ಬಂದ ಈ ಕಾಲದಲ್ಲಿ ಅದರ ಅಳಿವಿನ ಭಯ ಪ್ರಾರಂಭವಾಗಿದೆ. ಜನಸಮುದಾಯದ ಶಕ್ತಿ ದೊಡ್ಡದು. ಇದನ್ನೆಲ್ಲ ಮೀರಿ ಬೆಳೆಯುವ ಶಕ್ತಿ ಜಾನಪದಕ್ಕಿದೆ.

ಅಂತಹ ಚರ್ಚೆಗೆ ಈ ಕೃತಿ ಪ್ರತಿಸ್ಪಂದಿಸುತ್ತಿದೆ. ಆ ಕಾರಣಕ್ಕಾಗಿ ಇಂತಹ ಕೃತಿಗಳಿಗೆ ಮಹತ್ವದ ಸ್ಥಾನವಿದೆ.

ಪ್ರೊ. ಬಸವರಾಜ ಸಬರದ
ಅಧ್ಯಕ್ಷರು, ಕನ್ನಡ ಅಧ್ಯಯನ ಸಂಸ್ಥೆ
ಗುಲಬರ್ಗಾ ವಿಶ್ವವಿದ್ಯಾಲಯ

ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ,
ಬೆಂಗಳೂರು-೫೬೦ ೦೦೨